ಸಂಪುಟ: 14 Volume | ಸಂಚಿಕೆ: 20 Issue | ಪುಟಗಳು 08 Pages | ಗುರುವಾರ 23 ಏಪ್ರಿಲ್ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಪ್ರೀತಿಯು ಒಡೆತನವನ್ನು ಪ್ರತಿಪಾದಿಸುವುದಿಲ್ಲ. ಸ್ವಾತಂತ್ರ್ಯವನ್ನು ನೀಡುತ್ತದೆ.
–ರವೀಂದ್ರನಾಥ್ ಟ್ಯಾಗೋರ್

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

ಅಕ್ರಮ ಪಡಿತರ ಸಾಗಣೆ 6 | ರಣ ರಣ ಬಿಸಿಲು : ಧರೆಗಿಳಿದ ಮಳೆ 7 | ಅರಳು ಮಲ್ಲಿಗೆ ವೇದಿಕೆಯಿಂದ ವಚನ ವಿಸ್ಮಯ 8



ನಾಡೋಜ ಡಾ. ಬಸವಲಿಂಗಪಟ್ಟದ್ದೇವರ ಅಮೃತ ಮಹೋತ್ಸವ, ಡಾ. ಚನ್ನಬಸವ ಪಟ್ಟದ್ದೇವರ 27ನೇ ಸಂಸ್ಮರಣೋತ್ಸವದಲ್ಲಿ ಭಾಗಿಯಾಗಲು ಆಗಮಿಸಿದ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಅವರು ಬೀದರ್ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು.

## ಅಕ್ರಮ ಅದಿರು ಸಾಗಣೆ ಪತ್ತೆ

**ಬಳ್ಳಾರಿ:** ಲೋಕಸಭಸ ಸದಸ್ಯ ಇ.ತುಕರಾಂ ಅವರು ಅಕ್ರಮ ಅದಿರು ಸಾಗಣೆ ಪತ್ತೆಹಚ್ಚಿದ್ದಾರೆ. ಸಂಡೂರು ಭಾಗದ ಗಣಿ ಪ್ರದೇಶಗಳಿಂದ ಕಬ್ಬಿಣ ಅದಿರನ್ನು ತುಂಬಿಕೊಂಡು ದಿನನಿತ್ಯ 1500 ಕ್ಕೂ ಹೆಚ್ಚು ಲಾರಿಗಳು ಜಿಂದಾಲ್ ಉಕ್ಕು, ಇತರೇ ಕಾರ್ಖಾನೆಗಳಿಗೆ ಅದಿರನ್ನು ಸಾಗಿಸುತ್ತವೆ. ಒಂದು ಲಾರಿಯಲ್ಲಿ ಕನಿಷ್ಠ 18 ರಿಂದ 40ಟನ್ ವರೆಗೆ ಅದಿರನ್ನು ಸಾಗಣೆ ಮಾಡಲಾಗುತ್ತದೆ. ಅದಿರು ಉತ್ಪಾದನೆಯ ಪ್ರದೇಶದಲ್ಲಿ ಪರ್ಮಿಟ್ ಜನರೇಟ್ ಮಾಡಿ ಅದರಲ್ಲಿ ಎಷ್ಟು ಅದಿರು ಸಾಗಾಣೆ ಎಲ್ಲಿಗೆ ಮಾಡಲಾಗುತ್ತದೆ ಎಂಬುದನ್ನು ಉಲ್ಲೇಖಿಸಲಾಗಿರುತ್ತದೆ. ಲಾರಿಯು ನಿಗದಿತ ಪ್ರದೇಶಕ್ಕೆ ಅದಿರನ್ನು ಸಾಗಣೆ ಪತ್ತೆಹಚ್ಚಲು ಬಂಡಿ ಹಟ್ಟಿ ಬಳಿ ಗಣಿ ಇಲಾಖೆ ಚೆಕ್ ಪೋಸ್ಟ್ ನಿರ್ಮಾಣ ಮಾಡಿದೆ. ಅದರ ಕಣ್ತಪ್ಪಿಸಿ ಸಾಗಿಸುವ ಅಕ್ರಮ ಅದಿರನ್ನು ಸಂಸದ ಪತ್ತೆ ಹಚ್ಚಿದ್ದಾರೆ.


## ಲಂಚ ಪಡೆದ ಎಂಜಿನಿಯರ್‌ಗೆ ಜೈಲು

**ಕಲಬುರಗಿ:** ಕಾಮಗಾರಿ ಕೆಲಸದ 2ನೇ ಕಂತಿನ ಬಿಲ್‌ಹಣ ಪಾವತಿಸಲು ಗುತ್ತಿಗೆದಾರರಿಂದ ಲಂಚ ಪಡೆದ ಅಧಿಕಾರಿಗೆ ಇಲ್ಲಿನ ಪ್ರಧಾನ ಜಿಲ್ಲಾ ಮತ್ತು ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಜೆ.ಎಲ್. ಲಕ್ಷ್ಮೀನಾರಾಯಣ ಅವರು, 4 ವರ್ಷ ಜೈಲು ಶಿಕ್ಷೆ, 20 ಸಾವಿರ ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಜಿಲ್ಲೆಯ ಜೇವರ್ಗಿ ಪುರಸಭೆಯ ಕಿರಿಯ ಎಂಜಿನಿರ್ ಗೋಪಾಲ ಬಿಜಾಸ್ಪೂರ ಇವರು, ಫಿರ್ಯಾದಿದಾರ ಪರಶುರಾಮ ಶಂಕರ ದೊಡ್ಡಮನಿ ಅವರಿಂದ 26 ಸಾವಿರ ಲಂಚ ಪಡೆಯುತ್ತಿರುವಾಗ ಲೋಕಾಯುಕ್ತ ಪೊಲೀಸ ಅಧಿಕಾರಿಗಳ ತಂಡಕ್ಕೆ ಸಿಕ್ಕಿಬಿದ್ದಿರು. ಈ ಬಗ್ಗೆ ಡಿವೈಎಸ್ಪಿ ಸುಧಾ ಆದಿ ಪ್ರಕರಣ ದಾಖಲಿಸಿದ್ದರು.

## ಇಂದು ಕಾಂಗ್ರೆಸ್ ಪಕ್ಷದ ಸಭೆ

**ಹುಮನಾಬಾದ್:** ತಾಲೂಕಿನ ಹಳ್ಳೀಖೇಡ (ಬಿ)ಯಲ್ಲಿ ಏಪ್ರಿಲ್ 23 ರಂದು ಕಾಂಗ್ರೆಸ್ ಪಕ್ಷದ ಬೃಹತ್ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಫ್ಸರ್ ಮಿಯಾ, ಗ್ರಾಮೀಣ ಪ್ರದೇಶದ ಅಧ್ಯಕ್ಷ ಓಂಕಾರ ತುಂಬಾ ತಿಳಿಸಿದ್ದಾರೆ. 23ರಂದು ಹಳ್ಳೀಖೇಡ( ಬಿ) ತೀರ್ಥ ಫಂಕ್ಷನ್ ಹಾಲ್ ನಲ್ಲಿ ಸಭೆ ಕರೆಯಲಾಗಿದೆ.






ಪಕ್ಷದ ಹಿರಿಯರು, ಪದಾಧಿಕಾರಿಗಳು, ಹಿತೈಶಿಗಳು ಅಗಮಿಸಬೇಕಾಗಿ ಅವರು ಕೊರಿದ್ದಾರೆ. ಮಾಜಿ ಸಚಿವ ರಾಜಶೇಖರ ಬಿ.ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಭೀಮರಾವ ಪಾಟೀಲ, ಡಾ.ಚಂದ್ರಶೇಖರ ಪಾಟೀಲ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ ಎಂದು ವಿವರ ನೀಡಿದ್ದಾರೆ.

## ರಾಜ್ಯದಲ್ಲಿ ಹಳದಿ, ಎಲ್ಲೋ ಅಲರ್ಟ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕರ್ನಾಟಕ ರಾಜ್ಯದಲ್ಲಿ ಏಪ್ರಿಲ್ 22 ರಿಂದ 28 ರವರೆಗೆ ಹವಾಮಾನದಲ್ಲಿ ಏರುಪೇರಾಗಲಿದೆ ಎಂದು ಬೆಂಗಳೂರು ಹವಾಮಾನ ಕೇಂದ್ರದ ವಿಜ್ಞಾನಿ ಸಿ.ಎಸ್. ಪಾಟೀಲ್ ಈ ಬಗ್ಗೆ ಮಾಹಿತಿ ನೀಡಿದ್ದಾರೆ.

ಬೀದರ್, ಕಲಬುರಗಿ, ವಿಜಯಪುರ, ಬಾಗಲಕೋಟೆ, ಬೆಳಗಾವಿ ಆರೆಂಜ್ ಅಲರ್ಟ್ ಹಾಗೂ ಯಾದಗಿರಿ, ರಾಯಚೂರು, ಕೊಪ್ಪಳ, ಗದಗ, ಧಾರವಾಡ, ಉತ್ತರ ಕನ್ನಡ, ಹಾವೇರಿ, ದಾವಣಗೆರೆ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಾಸನ, ಕೊಡಗು, ಮೈಸೂರು ಜಿಲ್ಲೆಗಳನ್ನು ಹಳದಿ ಅಲರ್ಟ್ ಘೋಷಣೆ ಮಾಡಲಾಗಿದೆ. ಈ ಜಿಲ್ಲೆಗಳಲ್ಲಿ ಆಲಿಕಲ್ಲು ಸಹಿತ ಮಳೆ ಬೀಳುವ ಸಾಧ್ಯತೆ ಇದೆ ಎಂದು ಕರ್ನಾಟಕ



ರಾಜ್ಯ ವಿಪತ್ತು ನಿರ್ವಹಣಾ ಕೇಂದ್ರ ಎಚ್ಚರಿಕೆ ನೀಡಿದೆ.

ಕೆಲವು ಕಡೆ ಹಗುರ ಮಳೆಯಾದರೆ, ಬಹುತೇಕ ಜಿಲ್ಲೆಗಳಲ್ಲಿ ಬಿಸಿಲಿನ ತಾಪಮಾನ ಮತ್ತಷ್ಟು ಹೆಚ್ಚಾಗಲಿದೆ. ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಕೇಂದ್ರದಿಂದ ಉತ್ತರ ಕರ್ನಾಟಕದ 5 ಜಿಲ್ಲೆಗಳಿಗೆ ಆರೆಂಜ್, ಉತ್ತರ – ದಕ್ಷಿಣ ಒಳನಾಡಿನ 15 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಣೆ ಮಾಡಲಾಗಿದೆ.

## ದೇಶದ ಅಭಿವೃದ್ಧಿಗೆ ಖರ್ಗೆ ಪರಮ ಶಕ್ತಿ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಇಲ್ಲಿಗೆ ಆಗಮಿಸಿದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರನ್ನು ಭಾಲ್ಕಿಯ ಅತಿಥಿ ಗೃಹದಲ್ಲಿ ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅವರು ಆತ್ಮೀಯವಾಗಿ ಸ್ವಾಗತಿಸಿ ಸತ್ಕರಿಸಿದ್ದಾರೆ.

ಮಲ್ಲಿಕಾರ್ಜುನ್ ಖರ್ಗೆ ಅವರ ಅಪಾರ ಅನುಭವ, ದಿಟ್ಟ ನಾಯಕತ್ವ ಹಾಗೂ ಮಾರ್ಗದರ್ಶನ ರಾಜ್ಯ, ದೇಶದ ಅಭಿವೃದ್ಧಿಗೆ ದಿಕ್ಕು ತೋರಿಸುವ ಶಕ್ತಿಯಾಗಿದೆ. ಅವರ ನಾಯಕತ್ವದಲ್ಲಿ ಇನ್ನಷ್ಟು ಸಮರ್ಪಿತವಾಗಿ ಜನಸೇವೆಗೆ ತೊಡಗುವ ಸಂಕಲ್ಪವನ್ನು ವ್ಯಕ್ತಪಡಿಸಿದ್ದಾರೆ. ಸಂಸದರಾದ ಶ್ರೀ ಸಾಗರ ಖಂಡ್ರೆ, ಮಾಜಿ ವಿಧಾನ ಪರಿಷತ್ ಸದಸ್ಯರಾದ ವಿಜಯಸಿಂಗ್, ಕಾಂಗ್ರೆಸ್ ಜಿಲ್ಲಾಧ್ಯಕ್ಷರಾದ ಶ್ರೀ ಬಸವರಾಜ ಜಾಬಶೆಟ್ಟಿ ಸೇರಿದಂತೆ ಜಿಲ್ಲೆಯ ಹಾಗೂ ಭಾಲ್ಕಿ ತಾಲೂಕಿನ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.



# ಟೆರರ್ ಟು ಟೆರರಿಸ್ಟ್ ಯಾರ್?

## ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಗೆ ತಿರುಗೇಟು ನೀಡಿದ ಉಪರಾಷ್ಟ್ರಪತಿ ಸಿಪಿ ರಾಧಾಕೃಷ್ಣನ್


• ಮಲ್ಲಮ್ಮ ನುಡಿ ವಾರ್ತೆ, ಪರಶುರಾಮ ಕರಣಂ ಭಾಲ್ಕಿ

ಪ್ರಧಾನಿ ಮೋದಿ ಅವರನ್ನು ಪರೋಕ್ಷವಾಗಿ ಟೆರರ್ ಟು ಟೆರರಿಸ್ಟ್ ಎಂದು ಕರೆದಿರುವ ಉಪರಾಷ್ಟ್ರಪತಿ ಸಿಪಿ ರಾಧಾಕೃಷ್ಣನ್, ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಗೆ ತಿರುಗೇಟು ನೀಡಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಟೆರರಿಸ್ಟ್ ಎಂಬ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ದೇಶಾದ್ಯಂತ ಭಾರಿ ಆಕ್ರೋಶಕ್ಕೆ ಗುರಿಯಾಗಿದೆ. ಎಐಸಿಸಿ ಅಧ್ಯಕ್ಷರ ಸ್ಪಷ್ಟನೆ ಬಳಿಕವೂ ಈ ವಿವಾದ ಭಾರಿ ಸದ್ದು ಮಾಡಿದೆ.

**ಈ ಇಬ್ಬರೂ ನಾಯಕರು ಸಾಕ್ಷಿ:** ಈ ಇಬ್ಬರೂ ನಾಯಕರು ಬೀದರ್‌ನಲ್ಲಿ ನಡೆದ ವಿಶ್ವಗುರು ಬಸವಣ್ಣನವರ ಜಯಂತ್ಯುತ್ಸವ ವಚನ ಜಾತ್ರೆ–2026, ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರ 27ನೆಯ ಸ್ಮರಣೋತ್ಸವ, ನಾಡೋಜ ಪೂಜ್ಯ ಮ.ಘ.ಚ ಡಾ. ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಖರ್ಗೆ ಎದುರೇ ವಿವರಿಸಿದರು:** ಮಾರಂಭದಲ್ಲಿ ಉಪರಾಷ್ಟ್ರಪತಿ ಮಾತನಾಡಿ, ನಾನು ಖರ್ಗೆ ಅವರ ಜತೆ ಒಂದು ವಿಷಯದಲ್ಲಿ ಭಿನ್ನಾಭಿಪ್ರಾಯ ಹೊಂದಿರುವೆ. ಕೆಲವೊಮ್ಮೆ ಮಲ್ಲಿಕಾರ್ಜುನ ಖರ್ಗೆ ಅವರು ಭಯೋತ್ಪಾದಕ–ಭಯೋತ್ಪಾದಕರಲ್ಲಿ ನಡುಕ ಹುಟ್ಟಿಸಿರುವವರ ನಡುವಿನ ವ್ಯತ್ಯಾಸ ಗುರುತಿಸುವಲ್ಲಿ ವಿಫಲರಾಗಿದ್ದಾರೆ ಎಂದು ತಿಳಿಸಿದ್ದಾರೆ.



### ಖರ್ಗೆ ಮಾತಿಗೆ ಬಿಜೆಪಿ ವಿರೋಧ

ನಿರೀಕ್ಷೆಯಂತೆಯೇ ಪ್ರಧಾನಿ ಮೋದಿ ಅವರನ್ನು ಟೆರರಿಸ್ಟ್ ಎಂದು ಕರೆದ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ವಿರುದ್ಧ, ಬಿಜೆಪಿ ನಾಯಕರು ಕೆಂಡಾಮಂಡಲರಾಗಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಗುಡುಗಿರುವ ಪ್ರಹ್ಲಾದ್ ಜೋಶಿ, ಪಂಚರಾಜ್ಯ ವಿಧಾನಸಭೆ ಚುನಾವಣೆಗಳ ಫಲಿತಾಂಶ ಬರುವ ಮೊದಲೇ ಕಾಂಗ್ರೆಸ್ ನಾಯಕರು ಹತಾಶೆ ತೋರ್ಪಡಿಸಲಾರಂಭಿಸಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

### ಹೇಳಿಕೆಗೆ ಸ್ಪಷ್ಟನೆ

ಚೆನ್ನೈನಲ್ಲಿ ಪ್ರಧಾನಿ ಮೋದಿ ಕುರಿತು ತಾವು ನೀಡಿದ ಹೇಳಿಕೆ ವಿವಾದ ಸೃಷ್ಟಿಸಿರುವುದನ್ನು ಅರಿತ ಮಲ್ಲಿಕಾರ್ಜುನ ಖರ್ಗೆ, ಕಲಬುರಗಿಯಲ್ಲಿ ಈ ಕುರಿತು ಸ್ಪಷ್ಟನೆ ನೀಡಿ, ನಾನು ಪ್ರಧಾನಿ ಮೋದಿ ಅವರನ್ನು ಭಯೋತ್ಪಾದಕ ಎಂದು ಕರೆದಿಲ್ಲ. ಬದಲಿಗೆ, ಪ್ರತಿಪಕ್ಷ ನಾಯಕರು ಮತ್ತು ಅಭ್ಯರ್ಥಿಗಳ ಮನೆ ಮೇಲೆ ಇಡಿ, ಐಟಿ ದಾಳಿ ನಡೆಸುವ ಮೂಲಕ ಅವರ ಆಡಳಿತವು ಸೃಷ್ಟಿಸುತ್ತುವ ಆತಂಕವನ್ನು ಭಯೋತ್ಪಾದನೆ ಎಂದು ಕರೆದಿದ್ದೇನೆ ಎಂದಿದ್ದಾರೆ.

### ಸಮಾನತೆ ಸಾರಿದ ನಾಡು

ಬೀದರ ಜಿಲ್ಲೆಯ ಶಿವಯೋಗಿ ಶರಣರು, ಸಂತರು, ಬಸವೇಶ್ವರರು ಬಾಳಿ ಸಮಾನತೆ ಸಾರಿದ ಪವಿತ್ರ ನಾಡು ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅಭಿಪ್ರಾಯಪಟ್ಟಿದ್ದಾರೆ. ಸಮಾಜ ಸುಧಾರಣೆಗೆ ಶ್ರಮಿಸಿದ ವಿಶ್ವಗುರು ಬಸವಣ್ಣ ಅವರ ನಾಡಿನಲ್ಲಿ ಬಸವಾದಿ ಶರಣರ ಆಶಯಗಳಂತೆ ಭಾಲ್ಕಿ ಹಿರೇಮಠ ಸೇವೆ ಸಲ್ಲಿಸುತ್ತಿದೆ. ಹಿರಿಯ ಸ್ವಾಮಿಜಿಗಳು ಬಸವಣ್ಣನ ತತ್ವ ಆದರ್ಶಗಳಂತೆ ಸತ್ಯ, ಸೇವೆ, ಮಾನವೀಯ ನೆಲೆಗಟ್ಟಿನಲ್ಲಿ ಸೇವೆ ಮಾಡುತ್ತಿರುವುದು ಹಾಗೂ ಅವರನ್ನು ಗೌರವಿಸುತ್ತಿರುವುದು ಶ್ಲಾಘನೀಯ ಎಂದಿದ್ದಾರೆ.

ಹಿರಿಯಶ್ರೀ ಡಾ.ಚನ್ನಬಸವದೇವರು, ಅಸಾಧಾರಣ ಮಾನವೀಯ ಗುಣಧರ್ಮವುಳ್ಳವರು. ಅನ್ನದಾಸೋಹ, ಅಕ್ಷರ ದಾಸೋಹದಿಂದ ಕ್ರಾಂತಿ ಮಾಡಿದರು. ಈಗಿನ ಸ್ವಾಮಿಗಳು ಶೈಕ್ಷಣಿಕ ಕ್ರಾಂತಿ ಮಾಡಿದ್ದು, 60 ಶಿಕ್ಷಣ ಸಂಸ್ಥೆಗಳಲ್ಲಿ 20 ಸಾವಿರ ವಿದ್ಯಾರ್ಥಿಗಳ ಜೀವನವನ್ನು ಹಿಂದುಳಿದ ಈ ಭಾಗದಲ್ಲಿ ಸುಧಾರಿಸಿದ್ದಾರೆ.
–ಸಿ.ಪಿ.ರಾಧಾಕೃಷ್ಣನ್, ಉಪರಾಷ್ಟ್ರಪತಿ

### ಅಮೂಲ್ಯ ಗ್ರಂಥ ಲೋಕಾರ್ಪಣೆ

12ನೇ ಶತಮಾನದ ಬಸವಾದಿ ಶರಣರ ಸಾಮಾಜಿಕ ಕ್ರಾಂತಿ ಮತ್ತು ಅವರ ವೈಚಾರಿಕ ನಿಲುವುಗಳನ್ನು ವಿಶ್ಲೇಷಿಸುವ ಸಂಶೋಧನಾ ಕೃತಿ (ಶರಣರ ಕ್ರಾಂತಿ ಪಥ), ವಚನ ವೈಭವ, (ಸಂಪುಟಗಳು), ಭಾಲ್ಕಿ ಹಿರೇಮಠದ ಇತಿಹಾಸ ಮತ್ತು ಸಮಾಜ ಸೇವೆಯನ್ನು ದಾಖಲಿಸಿರುವ ಸ್ಮರಣ ಸಂಚಿಕೆ (ಮಠದ ಪರಂಪರೆ), ಅನುಭವ ಮಂಟಪದ ಬೆಳಕು ಗಳನ್ನು ಗಣ್ಯರು ಲೋಕಾರ್ಪಣೆಗೊಳಿಸಿದ್ದಾರೆ.

## ಕಾಂಗ್ರೆಸ್‌ಗೆ ಮೌಲಾನಾಗಳ ಎಚ್ಚರಿಕೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕಾಂಗ್ರೆಸ್ ಪಕ್ಷಕ್ಕೆ ಮುಸ್ಲಿಮರ ಅಗತ್ಯ ಇದೆ. ಅದರೆ, ಮುಸ್ಲಿಮರಿಗೆ ಕಾಂಗ್ರೆಸ್ ಅಗತ್ಯ ಇಲ್ಲ. ಮುಸ್ಲಿಮರಿಗೆ ಅನ್ಯಾಯ ಮಾಡಿದ್ರೆ ಮುಂದೆ ಪರಿಣಾಮ ಎದುರಿಸಬೇಕಾಗುತ್ತೆ ಹೀಗೆ ಎಚ್ಚರಿಕೆ ನೀಡಿದ್ದು ಮುಸ್ಲಿಂ ಸಮುದಾಯದ ಮೌಲಾನಗಳು. ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಮೌಲಾನಗಳು ಕಾಂಗ್ರೆಸ್ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಮೌಲಾನಾ ಮಫ್ತಿ ಸೈಯದ್ ಇಬ್ರಾಹಿಂ, ಝಾಕಿರ್ ಉಲ್ಲಾ ಸಾಹೇಬ್ ಮಾತನಾಡಿ, ಮುಸ್ಲಿಂ ಸಮುದಾಯದ ಗೌರವ ಮತ್ತು ಹೊಣೆಗಾರಿಕೆ ವಿಷಯ ಇದಾಗಿದೆ. ನಮ್ಮ ದೇಶ, ರಾಜ್ಯದಲ್ಲಿ ಹಲವಾರು ಪಕ್ಷಗಳಿವೆ. 70 ವರ್ಷಳಿಂದ ಮುಸ್ಲಿಂ ಸಮುದಾಯದಿಂದ ಕಾಂಗ್ರೆಸ್ ಪಕ್ಷಕ್ಕೆ ಅಮೂಲ್ಯ ಮತ ನೀಡಿ ಪಕ್ಷವನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದೇವೆ. ನಮ್ಮ ಮುಸ್ಲಿಮ್ ನಾಯಕರಿಗೆ ದಾವಣಗೆರೆ ಉಪ ಚುನಾವಣೆಯಲ್ಲಿ ಹಿರಿಯ ನಾಯಕರಿಗೆ ಗುರಿ ಮಾಡಿ ಅವರನ್ನು ಮೂಲೆ ಸೇರಿಸುವ ಕೆಲಸ ಮಾಡಿದ್ದಾರೆ. ಪಕ್ಷದ ನಾಯಕರು, ಅಧ್ಯಕ್ಷರಿಗೆ ಹಾಗೂ ಕಾಂಗ್ರೆಸ್ ಸರ್ಕಾರಕ್ಕೆ ಹೈಕಮಾಂಡ್ ಗೆ ಎಚ್ಚರಿಕೆ ಕೊಡುತ್ತೇವೆ ಎಂದಿದ್ದಾರೆ.

## ಗರ್ಭಿಣಿಯಾದ 14 ವರ್ಷದ ಬಾಲಕಿಯರು..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕಲಬುರಗಿ ಜಿಲ್ಲೆಯಲ್ಲಿ ಒಂದು ವರ್ಷದಲ್ಲಿ 14 ರಿಂದ 17 ವರ್ಷ ವಯಸ್ಸಿನ 61 ಬಾಲಕಿಯರು ಗರ್ಭಿಣಿಯರಾಗಿರುವ ವಿಷಯ ಚರ್ಚೆಗೆ ಗ್ರಾಸವಾಗಿದೆ. ಏಪ್ರಿಲ್ 13, 2026 ರ ಆರ್‌ಸಿಎಚ್ ಪೋರ್ಟಲ್ ದತ್ತಾಂಶದ ಪ್ರಕಾರ, ಕಲಬುರಗಿ ಜಿಲ್ಲೆಯಲ್ಲಿ ಏಪ್ರಿಲ್ 2025 ರಿಂದ ಮಾರ್ಚ್ 2026 ರವರೆಗೆ 61 ಹದಿಹರೆಯದ ಬಾಲಕಿಯರು ಗರ್ಭಧಾರಣೆಯ ಪ್ರಕರಣಗಳು ಬೆಳಕಿಗೆ ಬಂದಿವೆ. ತಾಲೂಕುಗಳವಾರು; ಅಳಂದ ತಾಲೂಕಿನಲ್ಲಿ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಅಫ್ಜಲ್ಪುರ, ಚಿತ್ತಾಪುರ ಸೇರಿದಂತೆ ಹಲವು ಪ್ರದೇಶಗಳಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ಕಂಡುಬಂದಿವೆ. ಆಳಂದದಲ್ಲಿ ಅತಿ ಹೆಚ್ಚು, ಒಟ್ಟು 14 ಬಾಲಕಿಯರ ಗರ್ಭಧಾರಣೆಯ ಪ್ರಕರಣ, ಅಫ್ಜಲ್ಪುರ, ಚಿತ್ತಾಪುರ ತಾಲೂಕುಗಳಲ್ಲಿ ತಲಾ 11 ಗರ್ಭಧಾರಣೆಯ ಪ್ರಕರಣಗಳು ವರದಿಯಾಗಿವೆ. ಸೇಡಂ ತಾಲೂಕಿನಲ್ಲಿ 8 ಬಾಲಕಿಯರ ಗರ್ಭಧಾರಣೆಯ ಪ್ರಕರಣ, ಕಲಬುರಗಿ–ಗ್ರಾಮೀಣ ತಾಲೂಕಿನಿಂದ 7 ಬಾಲಕಿಯರ ಗರ್ಭಧಾರಣೆಯ ಪ್ರಕರಣಗಳು ಬೆಳಿಕಿಗೆ ಬಂದಿವೆ.

## ಜಯಂತಿ ಆಚರಿಸಿದ ದೇವದಾಸಿಯರು

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಜಗಜ್ಯೋತಿ ಬಸವಣ್ಣನವರ ಜಯಂತಿಯ ಅಂಗವಾಗಿ ಸಂಗಮ ಸಮಗ್ರ ಗ್ರಾಮೀಣ ಅಭಿವೃದ್ಧಿ ಕೇಂದ್ರ ವತಿಯಿಂದ ಜೈಭವಾನಿ ನಗರ, ಸಿಂದಗಿ ಹಾಗೂ ಸಂಗಮ ಸಂಸ್ಥೆಯಲ್ಲಿ ಮಾಜಿ ದೇವ ದಾಸಿ ತಾಯಂದಿರು ಮತ್ತು ಅವರ ಮಕ್ಕಳೊಂದಿಗೆ ಬಸವ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಜಯಂತಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಸಂಗಮ ಸಂಸ್ಥೆಯ ನಿರ್ದೇಶಕ ಫಾದರ್ ಸಂತೋಷ್, ಬಸವಣ್ಣನವರ ತತ್ವಗಳಾದ ಸಮಾನತೆ, ಜಾತಿ ವ್ಯವಸ್ಥೆ ನಿರ್ಮೂಲನೆ ಮತ್ತು ಕಾಯಕದ ಮಹತ್ವದ ಕುರಿತು ಸಭಿಕರಲ್ಲಿ ಅರಿವು ಮೂಡಿಸಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ.



### ಸಮಾಜದಲ್ಲಿ ಎಲ್ಲರೂ ಸಮಾನ

ಬಸವಣ್ಣನವರು ಸಮಾಜದಲ್ಲಿ ಎಲ್ಲರೂ ಸಮಾನರು ಎಂಬ ಸಂದೇಶ ನೀಡಿದ್ದು, ಆ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅಗತ್ಯ ಎಂದು ಫಾದರ್ ಸಂತೋಷ್ ತಿಳಿಸಿದ್ದಾರೆ. ಈ ಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಸಿಸ್ಟರ್ ಸಿಂಥಿಯಾ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ತೇಜಸ್ವಿನಿ ಹಳ್ಳದಕೇರಿ ನಿರೂಪಿಸಿದರು. ವಿಜಯ ಬಂಟನೂರು ವಂದಿಸಿದರು.

## ಸನಾತನ ಧರ್ಮಕ್ಕೆ ಹೊಸ ಚೈತನ್ಯ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಸನಾತನ ಧರ್ಮ ಮತ್ತು ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿದ ಆದಿಶಂಕರಾಚಾರ್ಯರು, ರಾಮಾನುಜಾಚಾರ್ಯರು ಅವರ ಕೊಡುಗೆ ಅಪಾರವೆಂದು ಸಂಸ್ಕೃತ ವಿದ್ವಾಂಸರಾದ ಡಾ. ಲಕ್ಷ್ಮೀಕಾಂತ್ ಮೊಹರೀರ ತಿಳಿಸಿದ್ದಾರೆ.

ಕರುಣೇಶ್ವರ ನಗರದ ಶ್ರೀ ಜೈ ವೀರ ಹನುಮಾನ್ ಮಂದಿರದಲ್ಲಿ ಆಯೋಜಿಸಿದ್ದ ಶಂಕರಾಚಾರ್ಯ, ರಾಮಾನುಜಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಶಂಕರ ಎಂದರೆ ಮಂಗಳ, ಆನಂದ ಮತ್ತು ಸಂತೋಷದ ಪ್ರತೀಕ. ಧರ್ಮವು ಸಂಕಷ್ಟದಲ್ಲಿದ್ದ ಸಂದರ್ಭದಲ್ಲಿ ಭಗವಂತನೇ ಶಂಕರಾಚಾರ್ಯರಾಗಿ ಅವತಾರಗೊಂಡು ಸನಾತನ ಧರ್ಮಕ್ಕೆ ಹೊಸ ಚೈತನ್ಯ ನೀಡಿದ್ದಾರೆ ಎಂದು ವ್ಯಾಖ್ಯಾನಿಸಿದ್ದಾರೆ. ದೇವಸ್ಥಾನ ಸಮಿತಿ ಅಧ್ಯಕ್ಷರಾದ ಶ್ರೀ ಅವಿನಾಶ ಕುಲಕರ್ಣಿ, ಶ್ರೀ ವಿನುತ ಜೋಶಿ, ಪ್ರಮುಖರಾದ ಅವಿನಾಶ ಕುಲಕರ್ಣಿ, ಶ್ರೀನಿವಾಸ್ ಜಹಾಗೀರದಾರ, ವಿನುತ ಜೋಶಿ ಶಂಕರರಾವ ಸಿಂದಗಿಕರ್, ಡಾ. ಗುರುರಾಜ್ ಮೊಹರೀರ, ಆರ್ ಕೆ ಕುಲಕರ್ಣಿ, ಕಿಶನ್ ರಾವ್ ಕುಲಕರ್ಣಿ, ರಾಘವೇಂದ್ರ ಜೋಶಿ, ಶಾಮರಾವ್ ಕುಲಕರ್ಣಿ, ಶ್ರೀಷಾ ಕುಲಕರ್ಣಿ ಅರ್ಚಕರಾದ ಪ್ರದ್ಯುಮ್ನಾಚಾರ್ಯ ಜೋಶಿ, ವೆಂಕಟೇಶಾಚಾರ್ಯ ನೇಲೋಗಿ, ವ್ಯವಸ್ಥಾಪಕರಾದ ಚಂದ್ರಕಾಂತ್ ಕಡಗಂಚಿ ಸೇರಿದಂತೆ ಪಾರಾಯಣ ಸಂಘದ ಸದಸ್ಯರು, ಭಕ್ತರು ಇದ್ದರು.




### ನಾಲ್ಕು ದಿಕ್ಕುಗಳಲ್ಲಿ ಮಠಗಳ ಸ್ಥಾಪನೆ

ಶಂಕರಾಚಾರ್ಯರು ತಮ್ಮ ತಾಯಿಯ ಅನುಮತಿ ಪಡೆದು ಸನ್ಯಾಸ ಸ್ವೀಕರಿಸಿ, ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ದೇಶವ್ಯಾಪಿ ಯಾತ್ರೆ ಕೈಗೊಂಡರು. ದಶೋಪನಿಷತ್ತುಗಳು ಹಾಗೂ ಬ್ರಹ್ಮಸೂತ್ರಗಳಿಗೆ ಭಾಷ್ಯ ರಚಿಸಿ, ವೇದವ್ಯಾಸರ ಆಶೀರ್ವಾದ ಪಡೆದರು. ದೇಶದ ನಾಲ್ಕು ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸಿ ಧರ್ಮಸ್ಥಾಪನೆಗೆ ಮಹತ್ವದ ಕೊಡುಗೆ ನೀಡಿದರು ಎಂದು ಲಕ್ಷ್ಮೀಕಾಂತ್ ಮೊಹರೀರ ವಿವರಿಸಿದ್ದಾರೆ.

## ಹೊಡೆದು ತಿನ್ನಬಾರದು, ದುಡಿದು ತಿನ್ನಬೇಕೆಂಬ ಸಂದೇಶ ಕೊಟ್ಟ ಬಸವಣ್ಣ, ಅನ್ನಭಾಗ್ಯಕ್ಕೆ ಅವರ ದಾಸೋಹ ಪ್ರೇರಣೆ: ಈಶ್ವರ ಖಂಡ್ರೆ

# ಜಿಲ್ಲೆಯು ಸಮಾನತೆ ಸಾರಿದ ಪವಿತ್ರ ನಾಡು: ಉಪರಾಷ್ಟ್ರಪತಿ ರಾಧಾಕೃಷ್ಣನ್

• **ಮಲ್ಲಮ್ಮ ನುಡಿ ವಾರ್ತೆ, ಬೀದರ**




ಬೀದರ ಜಿಲ್ಲೆಯ ಶಿವಯೋಗಿ ಶರಣರು, ಸಂತರು, ಬಸವೇಶ್ವರರು ಬಾಳಿ ಸಮಾನತೆ ಸಾರಿದ ಪವಿತ್ರ ನಾಡು ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು.

ಭಾಲ್ಕಿಪಟ್ಟಣದಚನ್ನಬಸವಾಶ್ರಮದಲ್ಲಿ ಇಂದು ಏರ್ಪಡಿಸಿದ್ದ ಭಾಲ್ಕಿ ಹಿರೇಮಠ ಸಂಸ್ಥಾನದ ಹಿರಿಯ ಸ್ವಾಮಿಜಿ ಡಾ.ಬಸವಲಿಂಗಪಟ್ಟದ್ದೇವರ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು..

ಐತಿಹಾಸಿಕವಾಗಿ, ಸಮಸಮಾನತೆ, ಸಾಮಾಜಕ ಕ್ರಾಂತಿ, ಧಾರ್ಮಿಕ ಕ್ರಾಂತಿ, ಸಮಾಜ ಸುಧಾರಣೆಗೆ ಶ್ರಮಿಸಿದ ವಿಶ್ವಗುರು ಬಸವಣ್ಣ ಅವರ ನಾಡಿನಲ್ಲಿ ಬಸವಾದಿ ಶರಣರ ಆಶಯಗಳಂತೆ ಭಾಲ್ಕಿ ಹಿರೇಮಠ ಸೇವೆ ಸಲ್ಲಿಸುತ್ತಿದೆ. ಹಿರಿಯ ಸ್ವಾಮಿಜಿಗಳು ಬಸವಣ್ಣನ ತತ್ವ ಆದರ್ಶಗಳಂತೆ ಸತ್ಯ, ಸೇವೆ, ಮಾನವೀಯ ನೆಲೆಗಟ್ಟಿನಲ್ಲಿ ಸೇವೆ ಮಾಡುತ್ತಿರುವುದು ಹಾಗೂ ಅವರನ್ನು ಗೌರವಿಸುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು.

ಹಿರಿಯ ಸ್ವಾಮಿಗಳಾದ ಡಾ.ಚನ್ನಬಸವ ದೇವರು ತಮ್ಮ ದಿನಾಚರಣೆಯನ್ನು ಆಚರಿಸಿಕೊಳ್ಳುತ್ತಿರಲಿಲ್ಲ, ದಿನಾಚರಣೆ ದಿನ ನಿರಾಶ್ರಿತರಿಗೆ ಅನಾಥ, ದೀನ ದಲಿತರ ಸೇವೆಗೆ ಅರ್ಪಿಸಿದರು. ಕರುಣೆ ಸೇವೆಯ ನಿಜ ದಾರ್ಶನಿಕರಾಗಿದ್ದರು. ಅಸಾಧಾರಣ ಮಾನವೀಯ ಗುಣಧರ್ಮವುಳ್ಳವರಾಗಿದ್ದರು. ಅನ್ನ ದಾಸೋಹ ಹಾಗೂ ಅಕ್ಷರ ದಾಸೋಹದಿಂದ ಕ್ರಾಂತಿ ಮಾಡಿದರು. ಈಗಿನ ಸ್ವಾಮಿಗಳು ಶೈಕ್ಷಣಿಕ ಕ್ರಾಂತಿ ಮಾಡಿದ್ದಾರೆ 60 ಶಿಕ್ಷಣ ಸಂಸ್ಥೆಗಳಲ್ಲಿ 20 ಸಾವಿರ ವಿದ್ಯಾರ್ಥಿಗಳ ಜೀವನವನ್ನು ಈ ಹಿಂದುಳಿದ ಭಾಗದಲ್ಲಿ ಸುಧಾರಿಸಿದರು. ಶರಣ ತತ್ವ ಸಾಹಿತ್ಯ ಪ್ರವಚನ ಮೂಲಕ ಅಧ್ಯಾತ್ಮಿಕ ಕ್ರಾಂತಿ ಮಾಡಿದ್ದಾರೆ ಎಂದರು.

ನಾಗರಿಕ ಸೇವಾ ದಿನಾಚರಣೆ-ಯೆಂದು ನಿನ್ನೆ ತಾವು ನಾಗರಿಕ ಸೇವೆಗಳಲ್ಲಿ ಮಹಿಳೆಯರ ಪಾತ್ರಕುರಿತು ಮಾತನಾಡಿದ್ದೆನು. ಬೀದರ ಜಿಲ್ಲೆಯ ಜಿಲ್ಲಾಧಿಕಾರಿಗಳು ಮಹಿಳೆಯೇ ಆಗಿರುವುದು ಸಂತೋಷ ಎಂದರು. ಧಾರ್ಮಿಕ ಕೇಂದ್ರಗಲು ಭಾರತೀಯ ಅಧ್ಯಾತ್ಮಿಕ ಸಮ ಸಮಾಜದ ಪರಂಪರೆಯನ್ನು ಮುಂದುರೆಸುತ್ತಿವೆ ಎಂದರು.

ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು ಮಾತನಾಡಿ, ಬಸವಕಲ್ಯಾಣದ ಬಸವಾದಿ ಶರಣರ ಆದರ್ಶ, ತತ್ವ ಮಾರ್ಗದಲ್ಲಿ ಸೇವೆ ಸಲ್ಲಿಸುತ್ತಿರುವ ಡಾ.ಚನ್ನಬಸವ ಪಟ್ಟದೇವರು ಸಂಚರಿಸಿದ ಸಮಾಜ ಸುಧಾರಣೆಯ ನಾಡು ಇದು. ತ್ಯಾಗ, ಕರುಣೆ ಸೇವೆಯ ಸಾಕಾರ ಮೂರ್ತಿ ಆಗಿದ್ದಾರೆ. ಸಮಾಜ ಸೇವೆ, ಶೈಕ್ಷಣಿಕ ಧಾರ್ಮಿಕ ಸೇವೆ ಕೈಗೊಳ್ಳುತ್ತಿರುವ ಸಮಾಜದ ಸುಧಾರಕ ಎಂದು ಸಂತೋಷ ವ್ಯಕ್ತಪಡಿಸಿದರು.

ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಮಾತನಾಡಿ, ಬಸವಾದಿ ಶರಣರ ವಿಚಾರ ಧಾರೆ ಇಡೀ ಪ್ರಪಂಚಕ್ಕೆ ಪ್ರಚಾರ ಆಗಬೇಕಿದೆ ಎಂದರು. ಬುದ್ಧ, ಬಸವ, ಅಂಬೇಡ್ಕರ್ ಚಿಂತನೆಯ ಆದರ್ಶ, ತತ್ವಗಳು ಯುವ ಸಮಾಜದಲ್ಲಿ ಹೆಚ್ಚೆಚ್ಚು ಪ್ರಚಾರಗೊಳ್ಳಬೇಕಿದೆ. ವಿಚಾರ, ಆಚಾರ, ಪ್ರಚಾರ ಅತೀ ಮುಖ್ಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅವರು ಮಾತನಾಡಿ, ರಾಜ್ಯ ಸರ್ಕಾರ ಜಾರಿಗೆ ತಂದಿರುವ ಅನ್ನಭಾಗ್ಯ ಯೋಜನೆಗೆ ವಿಶ್ವಗುರು ಬಸವಣ್ಣನವರ ದಾಸೋಹ ಪ್ರೇರಣೆ-ಯಾಗಿದೆ. ಬಸವಣ್ಣನವರು ಕಾಯಕವೇ ಕೈಲಾಸ ಎಂಬ ಸಂದೇಶದೊಂದಿಗೆ ದುಡಿಯಬೇಕು, ದುಡಿದು ಗಳಿಸಬೇಕು, ಗಳಿಸಿದ್ದನ್ನು ಉಳಿಸಬೇಕು, ಉಳಿಸಿದ್ದನ್ನು ದಾಸೋಹದ ಮೂಲಕ ಸಮಾಜಕ್ಕೆ ಮರಳಿ ನೀಡಬೇಕು ಎಂದು ಸಾರಿದರು. ಅವರ ಜಯಂತಿಯನ್ನು ಈ ಕಾರ್ಯಕ್ರದ ಜೊತೆಗೆಯಲ್ಲಿ ಆಚರಿಸುತ್ತಿರುವುದು ಅರ್ಥಪೂರ್ಣ ಎಂದರು. ನಮ್ಮ ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಬಸವಾದಿ ಪ್ರಮಥರು ಅನುಭವಮಂಟಪದಲ್ಲಿ ಎಲ್ಲ, ಜಾತಿ ಜನಾಂಗದವರಿಗೂ ಸಮಾನ ಅವಕಾಶ ನೀಡಿದ್ದರು. ಇಲ್ಲಿ ಲಿಂಗ ತಾರತಮ್ಯವೂ ಇರಲಿಲ್ಲ, ಅಕ್ಕಮಹಾದೇವಿ, ಸತ್ಯಕ್ಕ, ಐದಕ್ಕಿ ಲಕ್ಕಮ್ಮ, ನೀಲಾಂಬಿಕೆ, ಮುಕ್ತಾಯಕ್ಕ ಮೊದಲಾದವರು ತಮ್ಮ ವಿಚಾರಧಾರೆಗಳನ್ನು ಮುಂಡಿಸುತ್ತಿದ್ದರು. ಇದು ಮಹಿಳಾ ಸಬಲೀಕರಣದ ಸಂಕೇತವಾಗಿದ್ದು, ನಮ್ಮ ಸರ್ಕಾರ ಗೃಹಲಕ್ಷ್ಮೀ, ಶಕ್ತಿ ಯೋಜನೆಯ ಮೂಲಕ ಮುಂದುವರಿಸಿದೆ. ಇಂದು ನಾವು ನಡೆದಾಡುವ ದೇವರು ಎಂದೇ ಖ್ಯಾತರಾಗಿದ್ದ ಶತಾಯುಷಿ ಶ್ರೀ ಚನ್ನಬಸವ ಪಟ್ಟದ್ದೇವರ 27ನೇ ಸಂಸ್ಮರಣೋತ್ಸವ ನಡೆಸುತ್ತಿದ್ದೇವೆ. ಅವರು, ಕ್ರಾಂತಿಪುರುಷರು. ಮುಟ್ಟಿತಟ್ಟಿಯಂತಹ ಅಸ್ಪೃಶ್ಯತೆಯ ಆಚರಣೆ ತೊಡೆದುಹಾಕಲು ನಮ್ಮ ತಂದೆ ಲಿಂಗೈಕ್ಯ ಲೋಕನಾಯಕ ಡಾ. ಭೀಮಣ್ಣ ಖಂಡ್ರೆ ಅವರಿಗೆ ಬೆಂಬಲವಾಗಿ ನಿಂತು ಭಾಲ್ಕೇಶ್ವರ ದೇವಾಲಯಕ್ಕೆ ಅಶೋಕನಗರ ನಿವಾಸಿಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸಿದರು. ಇಂದು ನಾವು ಕಾಣುತ್ತಿರುವ ಶಿವಲಿಂಗದಾಕಾರದ ಅನುಭವ ಮಂಟಪದ ನಿರ್ಮಾದ ಶ್ರೇಯಸ್ಸು ಚನ್ನಬಸವಪಟ್ಟದ್ದೇವರಿಗೆ ಸಲ್ಲುತ್ತದೆ ಎಂದರು. ನಿಜಾಮರ ಆಳ್ವಿಕೆಯ ಕಾಲದಲ್ಲಿ ಬೀದರ್‌ನಲ್ಲಿ ಕನ್ನಡ ಕಲಿಸಲು ಅವಕಾಶ ಇರಲಿಲ್ಲ. ಆಗ ಹೊರಗೆ ಉರ್ದು ಫಲಕ ಹಾಕಿ ಒಳಗೆ ಕನ್ನಡ ಕಲಿಸಲು ಶ್ರಮಿಸಿದ ಪಟ್ಟದ್ದೇವರು, ಬೀದರ್ ಮಕ್ಕಳಿಗೆ ವಚನ ಸಾರ ತಿಳಿಯುವಂತೆ ಮಾಡಿದ್ದರು. ತಮ್ಮ ದೀಕ್ಷಾ ಗುರು ಚನ್ನಬಸವ ಪಟ್ಟದ್ದೇವರ ಶತಮಾನೋತ್ಸವವನ್ನು ಭೀಮಣ್ಣ ಖಂಡ್ರೆ ಅವರು ಅದ್ಧೂ-ರಿಯಾಗಿ ನಡೆಸಿದ್ದರು, ಆಗ ಅಂದಿನ ರಾಷ್ಟ್ರಪತಿ ಡಾ. ಶಂಕರದಯ್ಯಾಳ್ ಶರ್ಮಾ ಆಗಮಿಸಿದ್ದರು. ಇಂದಿನ ಪೀಠಾಧಿಪತಿಗಳ ಅಮೃತಮಹೋತ್ಸವಕ್ಕೆ ಉಪ ರಾಷ್ಟ್ರಪತಿಗಳು ಆಗಮಿಸಿರುವುದು ಯೋಗಾಯೋಗ ಎಂದು ಈಶ್ವರ ಖಂಡ್ರೆ ಹೇಳಿದರು. ನಾಡೋಜ ಬಸವಲಿಂಗ ಪಟ್ಟದ್ದೇವರು, ಮಾಸಿಕ ಶರಣ ಸಂಗಮ, ಶಿವಾನುಭವ ಪ್ರವಚನ, ವಚನ ಗಾಯನದಂತಹ ಕಾರ್ಯಕ್ರಮಗಳ ಮೂಲಕ ಶರಣರ ವಚನಗಳ ಪ್ರಚಾರ ಪ್ರಸಾರ ಮಾಡುತ್ತಿದ್ದಾರೆ, ಸರಳ ಸಾಮೂಹಿಕ ವಿವಾಹಗಳನ್ನು ಆಯೋಜಿಸುವ ಮೂಲಕ ಬಡವರರು ಸಾಲದ ಸುಳಿಗೆ ಸಿಲುಕದಂತೆ ರಕ್ಷಿಸಿದ್ದಾರೆ. ಇವರ ಸಾಧನೆಗಳನ್ನು ಗುರುತಿಸಿ ಹಂಪಿ ವಿಶ್ವವಿದ್ಯಾಲಯ ಅವರಿಗೆ ನಾಡೋಜ ಗೌರವ ನೀಡಿದೆ. ಅವರು ನೂರ್ಕಾಲ ಬಾಳಲಿ ನಮಗೆ ಮಾರ್ಗದರ್ಶನ ನೀಡಲಿ. ಭಾಲ್ಕಿಯ ಮಣ್ಣಿನ ಮಗನಾದ ಎ.ಐ.ಸಿ.ಸಿ. ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪ್ರಯತ್ನದ ಫಲವಾಗಿ ಕಲ್ಯಾಣ ಕರ್ನಾಟಕಕ್ಕೆ 371 ಜೆ ಸಾಂವಿಧಾನಿಕ ತಿದ್ದುಪಡಿಯೊಂದಿಗೆ ವಿಶೇಷ ಸ್ಥಾನಮಾನ ದೊರಕಿದೆ. ಇಂದು ಅದು ಕಾಯಿದೆಯಾಗಿದ್ದು ನಮ್ಮ ಭಾಗದ ಸರ್ವಾಂಗೀಣ ಅಭಿವೃದ್ಧಿಗೆ ಸಹಕಾರಿಯಾಗಿದೆ ಎಂದರು. ಬುದ್ಧ, ಬಸವ, ಅಂಬೇಡ್ಕರ್ ಅವರ ಅನುಯಾಯಿಯಾದ ಮಲ್ಲಿಕಾರ್ಜುನ ಖರ್ಗೆ ಅವರು, ತಮ್ಮ ಜೀವನದ ಉದ್ದಕ್ಕೂ ವಂಚಿತರಿಗೆ, ನೊಂದವರಿಗೆ ನ್ಯಾಯದೊರಕಿಸಲು ಹಾಗೂ ಸರ್ವರ ಸಮಾನತೆಗಾಗಿ ಶ್ರಮಿಸುತ್ತಿದ್ದಾರೆ, ಅವರು ಒಬ್ಬ ಮುತ್ಸದ್ದಿ ರಾಜಕಾರಣಿ ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಗ್ರಂಥ ಲೋಕಾರ್ಪಣೆ: 12ನೇ ಶತಮಾನದ ಬಸವಾದಿ ಶರಣರ ಸಾಮಾಜಿಕ ಕ್ರಾಂತಿ ಮತ್ತು ಅವರ ವೈಚಾರಿಕ ನಿಲುವುಗಳನ್ನು ವಿಶ್ಲೇಷಿಸುವ ಸಂಶೋಧನಾ ಕೃತಿ (ಶರಣರ ಕ್ರಾಂತಿ ಪಥ), ನಿತ್ಯ ಜೀವನಕ್ಕೆ ವಚನಗಳ ಪ್ರಸ್ತುತತೆಯನ್ನು ಸಾರುವ ಲೇಖನಗಳ ಸಂಗ್ರಹ (ವಚನ ವೈಭವ, ಸಂಪುಟಗಳು), ಭಾಲ್ಕಿ ಹಿರೇಮಠದ ಇತಿಹಾಸ ಮತ್ತು ಸಮಾಜ ಸೇವೆಯನ್ನು ದಾಖಲಿಸಿರುವ ಸ್ಮರಣ ಸಂಚಿಕೆ (ಮಠದ ಪರಂಪರೆ), ಶರಣರ ಅನುಭವ ಮಂಟಪದ ಚರ್ಚೆಗಳು ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸಾರುವ ಪುಸ್ತಕ (ಅನುಭವ ಮಂಟಪದ ಬೆಳಕು) ಗಳನ್ನು ಗಣ್ಯರು ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್, ಬೀದರ ಲೋಕಸಭಾ ಸಂಸದರಾದ ಸಾಗರ ಈಶ್ವರ ಖಂಡ್ರೆ, ಭಾಲ್ಕಿ ಹಿರೇಮಠದ ಡಾ. ಬಸವಲಿಂಗ ಪಟ್ಟದ್ದೇವರು, ಶ್ರೀ ಗುರುಬಸವ ಪಟ್ಟದ್ದೇವರು, ಗದಗ ಡಂಬಳದ ಸಿದ್ಧರಾಮ ಸ್ವಾಮೀಜಿ, ಮಾಜಿ ಕೇಂದ್ರ ಸಚಿವರಾದ ಭಗವಂತ ಖೂಬಾ, ಬೀದರ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ಮಾಜಿ ಶಾಸಕರಾದ ಪ್ರಕಾಶ ಖಂಡ್ರೆ, ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಾಬು ವಾಲಿ ಸೇರಿದಂತೆ ಶರಣ ಸಾಹಿತ್ಯ ಆಸಕ್ತರು, ಮಠದ ಭಕ್ತಾಧಿಗಳು, ಶಾಲಾ ಕಾಲೇಜು ವಿದ್ಯಾರ್ಥಿಗಳು ಹಾಗೂ ಬೀದರ ಜಿಲ್ಲೆಯ ವಿವಿಧ ಭಾಗಗಳ ಸಾಹಿತ್ಯಾಭಿಮಾನಿಗಳು ಉಪಸ್ಥಿತರಿದ್ದರು.

# ಸಂಪಾದಕೀಯ



**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೋ: 9845028349**

## ರಿಯಲ್ ಎಸ್ಟೇಟ್ ಹಣದ ಪ್ರಭಾವಕ್ಕೆ ಕಡಿವಾಣ: ಪ್ರಜಾಪ್ರಭುತ್ವದ ರಕ್ಷಣೆ ಅನಿವಾರ್ಯ

ಇತ್ತೀಚಿನ ದಿನಗಳಲ್ಲಿ ರಾಜಕೀಯ ಕ್ಷೇತ್ರದಲ್ಲಿ ಹಣದ ಪ್ರಭಾವ ಹೆಚ್ಚುತ್ತಿರುವುದು ಗಂಭೀರ ಚಿಂತೆಗೆ ಕಾರಣವಾಗಿದೆ. ವಿಶೇಷವಾಗಿ ರಿಯಲ್ ಎಸ್ಟೇಟ್ ವಲಯದ ಕೆಲವರು ರಾಜಕೀಯಕ್ಕೆ ಪ್ರವೇಶಿಸಿ, ಜನಸೇವೆಯಿಗಿಂತ ಸ್ವಾರ್ಥಪರ ಉದ್ದೇಶಗಳನ್ನು ಮುಂದಿಟ್ಟುಕೊಳ್ಳುತ್ತಿರುವುದು ಪ್ರಜಾಪ್ರಭುತ್ವದ ಮೂಲ ಮೌಲ್ಯಗಳಿಗೆ ಧಕ್ಕೆ ತರುತ್ತಿದೆ. ರಾಜಕೀಯವೆಂದರೆ ಜನರ ಸೇವೆಗೆ ಇರುವ ಪವಿತ್ರ ಕ್ಷೇತ್ರ. ಆದರೆ ಅದನ್ನು ವ್ಯಾಪಾರಿಕ ಲಾಭದ ಸಾಧನವಾಗಿ ಬಳಸುವ ಪ್ರವೃತ್ತಿ ಹೆಚ್ಚುತ್ತಿರುವುದು ದುಃಖಕರ ಸಂಗತಿ.

ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಅಪಾರ ಹಣದ ಹರಿವು ಇರುವುದರಿಂದ, ಅದನ್ನು ರಾಜಕೀಯದಲ್ಲಿ ಬಳಸಿಕೊಂಡು ಅಧಿಕಾರವನ್ನು ಪಡೆಯಲು ಕೆಲವರು ಪ್ರಯತ್ನಿಸುತ್ತಿದ್ದಾರೆ. ಇದರಿಂದ ಚುನಾವಣಾ ಪ್ರಕ್ರಿಯೆ ದುರ್ಬಲವಾಗುತ್ತದೆ. ಹಣದ ಬಲದಿಂದ ಮತದಾರರನ್ನು ಪ್ರಭಾವಿಸಲು ಯತ್ನಿಸುವುದು, ನಿಷ್ಠಾವಂತ ಮತ್ತು ಸಾಮಾನ್ಯ ಹಿನ್ನಲೆ ಹೊಂದಿರುವ ಅಭ್ಯರ್ಥಿಗಳಿಗೆ ಅನ್ಯಾಯ ಮಾಡುತ್ತದೆ. ಇದು ಸಮಾನ ಅವಕಾಶದ ತತ್ವವನ್ನೇ ಹಾಳು ಮಾಡುತ್ತದೆ.

ರಾಜಕೀಯದಲ್ಲಿ ಪ್ರವೇಶಿಸುವವರ ಹಿನ್ನೆಲೆ ಮುಖ್ಯವಲ್ಲ, ಅವರ ನಿಷ್ಠೆ ಮತ್ತು ಜನಸೇವೆಯ ಮನೋಭಾವ ಮುಖ್ಯ. ಆದರೆ ಹಣ ಮತ್ತು ಪ್ರಭಾವವನ್ನು ದುರುಪಯೋಗಪಡಿಸಿಕೊಂಡು ಅಧಿಕಾರಕ್ಕೆ ಬರುವವರಿಂದ ಭ್ರಷ್ಟಾಚಾರ,

ಅಕ್ರಮ ಭೂ ವ್ಯವಹಾರಗಳು, ಅಧಿಕಾರದ ದುರುಪಯೋಗ ಹೆಚ್ಚುವ ಅಪಾಯವಿದೆ. ಇದರಿಂದ ಸರ್ಕಾರದ ವ್ಯವಸ್ಥೆಯ ಮೇಲಿನ ಜನರ ನಂಬಿಕೆ ಕುಸಿಯುತ್ತದೆ.

ಇದಕ್ಕೆ ತಕ್ಷಣವೇ ಕಟ್ಟುನಿಟ್ಟಿನ ಕ್ರಮಗಳು ಅಗತ್ಯ. ಚುನಾವಣಾ ವೆಚ್ಚಗಳ ಮೇಲೆ ಕಠಿಣ ನಿಯಂತ್ರಣ, ಅಭ್ಯರ್ಥಿಗಳ ಆಸ್ತಿ-ಪಾಸ್ತಿಗಳ ಪಾರದರ್ಶಕ ಘೋಷಣೆ, ಅಪರಾಧ ಹಿನ್ನೆಲೆ ಇರುವವರಿಗೆ ಅವಕಾಶ ನಿರಾಕರಣೆ ಇವು ಅನಿವಾರ್ಯ. ಜೊತೆಗೆ, ಮತದಾರರು ಸಹ ಜಾಗೃತರಾಗಬೇಕು. ಹಣ, ಮದ್ಯ, ಪ್ರಲೋಭನೆಗಳಿಗೆ ಒಳಗಾಗದೆ, ಪ್ರಾಮಾಣಿಕ ಮತ್ತು ಜನಪರ ನಾಯಕರನ್ನು ಆಯ್ಕೆ ಮಾಡಬೇಕು.

ಪ್ರಜಾಪ್ರಭುತ್ವವನ್ನು ಬಲಪಡಿಸುವುದು ಕೇವಲ ಕಾನೂನುಗಳಿಂದ ಮಾತ್ರ ಸಾಧ್ಯವಲ್ಲ; ಅದು ಜನರ ಜಾಗೃತಿ ಮತ್ತು ಹೊಣೆಗಾರಿಕೆಯಿಂದ ಸಾಧ್ಯ. ಹಣದ ಪ್ರಭಾವಕ್ಕೆ ಕಡಿವಾಣ ಹಾಕಿ, ಮೌಲ್ಯಾಧಾರಿತ ರಾಜಕೀಯವನ್ನು ಉಳಿಸುವುದು ನಮ್ಮೆಲ್ಲರ ಕರ್ತವ್ಯ. ಸ್ವಚ್ಛ ಮತ್ತು ಸಮರ್ಥ ಆಡಳಿತ ವ್ಯವಸ್ಥೆಯನ್ನು ನಿರ್ಮಿಸಲು ಸಾಧ್ಯ.

# ಸಮಸಮಾಜ ನಿರ್ಮಾಣಕ್ಕೆ ಬಸವಣ್ಣನವರ ತತ್ವಗಳೇ ಆಧಾರ: ಇಒ

• **ಮಲ್ಲಮ್ಮ ನುಡಿ ವಾರ್ತೆ, ಕಮಲನಗರ**

ಸಮಾಜದಲ್ಲಿ ಬೇರೂರಿರುವ ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಿ ಸಮಸಮಾಜವನ್ನು ನಿರ್ಮಿಸಲು ಪ್ರತಿಯೊಬ್ಬರೂ ಬಸವಣ್ಣನವರ ತತ್ವಗಳನ್ನು ಅಳವಡಿಸಿಕೊಂಡು ಶ್ರಮಿಸಬೇಕು ಎಂದು ತಾಲೂಕು ಪಂಚಾಯಿತಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ (ಇಒ) ಹಣಮಂತರಾಯ ಕೌಟಗೆ ತಿಳಿಸಿದರು. ಪಟ್ಟಣದ ತಹಶೀಲ್ದಾರ್ ಕಚೇರಿ ಆವರಣದಲ್ಲಿ ತಾಲೂಕಾಡಳಿತದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ವಿಶ್ವಗುರು ಬಸವಣ್ಣನವರ 893ನೇ ಜಯಂತಿ ಉತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಬಸವಣ್ಣವರು ವಚನ ಸಾಹಿತ್ಯ ಮೂಲಕ ನಮ್ಮಗೆ ಜೀವನ ದಾರಿ ತೋರಿಸಿದ್ದಾರೆ, ಎಲ್ಲರೂ ಸಮಾನರು ಎಲ್ಲರಿಗೆ ಸಮಾನ ಭಾವನೆಯಿಂದ ಕಾಣಬೇಕು ಭೇದ ಭಾವ ಮರೆತು ಬಾಳಿದ್ದಾರೆ, ನಮ್ಮ ಸಮಾಜ ಒಂದು ಸುಂದರ ಸಮಾಜವಾಗುತ್ತದೆ ಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರೊ. ಎಸ್.ಎನ್.ಶಿವಣಕರ್ ಮಾತನಾಡಿ, "ನಮ್ಮ ಸಂವಿಧಾನವು ಜಾತ್ಯತೀತ ತತ್ವದ ಮೇಲೆ ನಿಂತಿದೆ. ಅಂದೇ ಬಸವಣ್ಣನವರು ಜಾತಿ ಆಧಾರಿತ ಸಮಾಜ ವ್ಯವಸ್ಥೆಯನ್ನು ತೀವ್ರವಾಗಿ ವಿರೋಧಿಸಿದ್ದರು. 'ದಯವೇ ಧರ್ಮದ ಮೂಲವಯ್ಯ' ಎಂಬ ಅವರ ಸಂದೇಶ ಸಾರ್ವಕಾಲಿಕವಾದುದು. ಅವರ ಕೊಡುಗೆಯನ್ನು ಪರಿಗಣಿಸಿ ಸರ್ಕಾರ ಅವರನ್ನು 'ಸಾಂಸ್ಕೃತಿಕ ನಾಯಕ' ಎಂದು ಘೋಷಿಸಿರುವುದು ಹೆಮ್ಮೆಯ ವಿಷಯ" ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತಹಶೀಲ್ದಾರ್ ಅಮಿತ್‌ಕುಮಾರ್ ಕುಲಕರ್ಣಿ ಅವರು ಮಾತನಾಡಿ, "ಮನುಷ್ಯ ಹುಟ್ಟುವಾಗ ವಿಶ್ವಮಾನವನಾಗಿರುತ್ತಾನೆ, ಆದರೆ ಬೆಳೆಯುತ್ತಾ ಜಾತಿ-ಧರ್ಮಗಳ ಸಂಕೋಲೆಯಲ್ಲಿ ಸಿಲುಕಿ ಅಲ್ಪಮಾನವನಾಗುತ್ತಿದ್ದಾನೆ. ಸಂಕುಚಿತ ಮನೋಭಾವ ಬಿಟ್ಟು ಸಮಾಜದ ಹಿತಕ್ಕಾಗಿ ಶ್ರಮಿಸುವ ವಿಶ್ವಮಾನವರಾಗಿ ನಾವು ರೂಪಗೊಳ್ಳಬೇಕು" ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ರೇಡ್-2 ತಹಶೀಲ್ದಾರ್ ರಮೇಶ್ ಪೆದ್ದೆ, ಗೋಪಾಲಕೃಷ್ಣ, ಲಿಂಗಾನಂದ ಮಹಾಜನ, ಜ್ಞಾನೋಬಾ ಕಾಂಬಳೆ, ಶೇಖರ ಮಹಾಜನ, ಉತ್ಸವ ಸಮಿತಿ ಅಧ್ಯಕ್ಷ ಸೂರ್ಯಕಾಂತ ಶಿವಣಕರ್ ಹಾಗೂ ಪ್ರಮುಖರಾದ ಚಂದ್ರಕಾಂತ ಸಂಗಮೆ, ಶಿವಾನಂದ ವಡ್ಡೆ, ಅವಿನಾಶ ಶಿವಣಕರ್, ಮಡಿವಾಳಪ್ಪ ಮಹಾಜನ, ನಾಗೇಶ ಪತ್ರೆ, ಸಾಗರ ಮಿರ್ಚೆ, ದತ್ತು ಮಹಾಜನ, ರಾಜಕುಮಾರ ಎನಗುಂದೆ, ಜಿತೇಂದ್ರ ಮಹಾಜನ, ವಿಜಯಕುಮಾರ ಕೊಡಗೆ, ಅಮರ ಶಿವಣಕರ್, ಶಿವಶರಣಪ್ಪ ಚಿಕ್ಕಮುರ್ಗೆ, ಸೂರ್ಯಕಾಂತ ಸೋಲಾಪುರೆ, ಬಸವರಾಜ ಭವರಾ, ಶಿವಕುಮಾರ ಜುಲ್ಪೆ, ಶಾಂತಕುಮಾರ ಅಸ್ತೂರೆ, ರಾಮೇಶ್ವರ ಶಿವಣಕರ್, ಮನೋಜಕುಮಾರ, ಆನಂದ ಸುಲಾಖೆ, ಅವಿನಾಶ ಮಂಗಳೂರೆ, ಸಂತೋಷ ಟೊಣ್ಣೆ, ನಾಗೇಶ ಟೊಣ್ಣೆ, ನಿತಿನ್ ಸೇರಿದಂತೆ ತಾಲೂಕಾಡಳಿತದ ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು



# ಭೂ ದಿನಾಚರಣೆ ಕುರಿತು ಕಾನೂನು ಅರಿವು ನೆರವು ಕಾರ್ಯಕ್ರಮ



• **ಮಲ್ಲಮ್ಮ ನುಡಿ ವಾರ್ತೆ ಬೀದರ**

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಹಿರಿಯ ಭೂ ವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಬೀದರ ಇವರ ಸಂಯುಕ್ತಾಶ್ರಯದಲ್ಲಿ ಇಂದು ಬಿದ್ರಿ ಚೌಕ ಹೈದರಾಬಾದ ರಸ್ತೆ ಹತ್ತಿರ ಹಿರಿಯ ಭೂ ವಿಜ್ಞಾನಿಯವರ ಕಛೇರಿ, ಬೀದರ ಇಲ್ಲಿ ಹಮ್ಮಿಕೊಂಡಿದ್ದ "ಭೂ ದಿನಾಚರಣೆ" ಅಂಗವಾಗಿ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮಕ್ಕೆ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ

ಕಾರ್ಯದರ್ಶಿಗಳು ಪ್ರಕಾಶ ಅರ್ಜುನ ಬನಸೋಡೆ ಸಸಿಗೆ ನೀರು ಎರೆಯುವುದರ ಮೂಲಕ ಉದ್ಘಾಟಿಸಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸವಲತ್ತುಗಳ ಬಗ್ಗೆ ಮಾತನಾಡಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಸನ್ಮುಖಯ್ಯಾ ಬಿ. ಸ್ವಾಮಿ ಅವರು ಭೂ ದಿನಾಚರಣೆ ಕುರಿತು ಮಾತನಾಡಿದರು .ಉಪನ್ಯಾಸಕರಾಗಿ ಬೀದರ ವಕೀಲ ಉದಯಕುಮಾರ ಅವರು ಭೂಮಿಯ ಉಳಿಕೆ ಬಗ್ಗೆ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಬೀದರನ ಹಿರಿಯ ಭೂ ವಿಜ್ಞಾನಿ ಎಂ. ವಿಶ್ವನಾಥ ಅವರು ಅಧ್ಯಕ್ಷತೆ ಮಾತನಾಡಿದರು. ಹಾಗೂ ಬೀದರನ ಸಹ ಶಿಕ್ಷಕ ಬಕ್ಕಪ್ಪಾ ಅವರು ಕಾರ್ಯಕ್ರಮ ನಿರುಪಣೆ ಮಾಡಿದರು. ಬೀದರನ ಭೂ ವಿಜ್ಞಾನಿಗಳು ಲೋಕೇಶ, ಧನರಾಜ, ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಿಬ್ಬಂದಿ ಆಕಾಶ ಸಜ್ಜನಶೇಟ್ಟಿ ಹಾಗೂ ಹಿರಿಯ ಭೂ ವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಬೀದರನ ಸಿಬ್ಬಂದಿ ವರ್ಗದವರು ಸೇರಿದಂತೆ ಕಾರ್ಮಿಕರು ಉಪಸ್ಥಿತರಿದ್ದರು.

# ಕ್ರೆಸೆಂಟ್ ವಿದ್ಯಾರ್ಥಿಗಳ ಜೆಇಇಯಲ್ಲಿ ಅದ್ಭುತ ಸಾಧನೆ



• **ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ**

ಶಿಕ್ಷಣ ಕ್ಷೇತ್ರದಲ್ಲಿ ಹೊಸ ಇತಿಹಾಸ ನಿರ್ಮಿಸಿ, ಕ್ರೆಸೆಂಟ್ ಪಿಯು ಕಾಲೇಜ್ ಆಫ್ ಸೈನ್ಸ್, ವಿದ್ಯಾರ್ಥಿ ಸಯ್ಯದ್ ಅಝುಹದ್ ಓವೈಸ್ (ತಂದೆ: ಸಯ್ಯದ್ ಅಶ್ರಫ್ ಅಲಿ) ಅವರು ರಾಷ್ಟ್ರೀಯ ಮಟ್ಟದ ಎಇಇ ಪರೀಕ್ಷೆಯಲ್ಲಿ 98.22 ಪರ್ಸೆಂಟೈಲ್ ಗಳಿಸಿ ತಮ್ಮ ಕಾಲೇಜು ಮಾತ್ರವಲ್ಲದೆ ನಗರದ ಹೆಸರೂ ಉಜ್ವಲಗೊಳಿಸಿದ್ದಾರೆ. ಅದೇ ರೀತಿ ಮೊಹಮ್ಮದ್ ಆಫ್ತಾಬ್ (ತಂದೆ: ಶಫಿಯುದ್ದೀನ್) 92.94 ಪರ್ಸೆಂಟೈಲ್, ಆಮ್ನಾ ಸದಫ್ (ತಂದೆ: ಮೊಹಮ್ಮದ್ ಶಕೀಲ್) 92.89 ಪರ್ಸೆಂಟೈಲ್ ಮತ್ತು ಬುಶ್ರಾ ಅಫೀಫಾ (ತಂದೆ: ಅಬ್ದುಲ್ ಗಫೂರ್) 91.25 ಪರ್ಸೆಂಟೈಲ್ ಅಂಕಗಳನ್ನು ಪಡೆದಿದ್ದಾರೆ.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಶೇಕ್ ಜ

ಜಬಿ. ಕರ್ನಾಟಕ ರಾಜ ನೀರಾವರಿ ನಿವೃತ್ತ ನಿರ್ದೇಶಕರಾದ ಮಲ್ಲಿಕಾರ್ಜುನ ಗುಂಗೆ. ಉಪನ್ಯಾಸಕರಾದ ನರಸಿಂಗ ರೆಡ್ಡಿ ಗದಲೆಗಾಂವ ಮತ್ತು ನಾಗಪ್ಪ ನಿಣ್ಣೆ ಈ ಸಾಧನೆಗೆ ಸಂತೋಷ ವ್ಯಕ್ತಪಡಿಸಿ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಮತ್ತು ಕಾಲೇಜು ಆಡಳಿತಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ. ಆಡಳಿತ ಮಂಡಳಿಯ ಸದಸ್ಯರಾದ ಮಿನ್ನಾಜೋದ್ದಿನ ಭೋಲೆ, ಎಹತೆಶಾಮ ಅಕ್ತರ್, ಇಸ್ಮಾಯಿಲ್ ಖಾನ್, ಅಬ್ದುಲ್ ರಸೂಲ್, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ವ್ಯಕ್ತಿ ಕಾಣೆ; ಪತ್ತೆಗೆ ಮನವಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಗರದ ಬ್ರೂಸ್‌ಪೇಟೆ ಪೊಲೀಸ್ ಠಾಣೆಯ ವ್ಯಾಪ್ತಿಯ ನಗರದ ಕಾಳಮ್ಮ ಬೀದಿಯ ನಿವಾಸಿಯಾದ ಬಿ.ನರಸಣ್ಣ ಎನ್ನುವ 50 ವರ್ಷದ ವ್ಯಕ್ತಿ ಏ.06 ರಂದು ಹೊರ ಹೋಗಿ ಬರುವುದಾಗಿ ಹೇಳಿ ಮರಳಿ ಮನೆಗೆ ಬಾರದೇ ಕಾಣೆಯಾಗಿರುವ ಕುರಿತು ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಠಾಣಾಧಿಕಾರಿ ಮನವಿ ಮಾಡಿದ್ದಾರೆ.

ವ್ಯಕ್ತಿಯ ಚಹರೆ: ಅಂದಾಜು ಎತ್ತರ 5.5 ಅಡಿ, ದುಂಡು ಮುಖ, ಗೋಧಿ ಮೈಬಣ್ಣ, ಸಾಧಾರಣ ಮೈಕಟ್ಟು, ಸಣ್ಣ ಕೂದಲು, ಚಿಕ್ಕ ಮೀಸೆ ಹೊಂದಿದ್ದು, ಎಡ ಮೊಣಕೈಯ ಮೇಲೆ ಮಚ್ಚೆ ಇರುತ್ತದೆ. ಕಾಣೆಯಾದ ಸಂದರ್ಭದಲ್ಲಿ ಬಿಳಿ ಬಣ್ಣದ ಅಂಗಿ ಹಾಗೂ ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ. ಕನ್ನಡ, ತೆಲುಗು, ಹಿಂದಿ, ಭಾಷೆ ಮಾತನಾಡುತ್ತಾನೆ.

ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬ್ರೂಸ್‌ಪೇಟ್ ಪೊಲೀಸ್ ಠಾಣೆ ದೂ.08392-272022, ಪಿಎಸ್‌ಐ ಮೊ.9480803081, ಪಿಐ ಮೊ.9480803045, ಅಥವಾ ಬಳ್ಳಾರಿ ಪೊಲೀಸ್ ಕಂಟ್ರೋಲ್ ರೂಂ ದೂ.08392-258100 ಕರೆ ಮಾಡಿ ಮಾಹಿತಿ ನೀಡಬಹುದಾಗಿದೆ ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಬಸವ ಜಯಂತಿ ಭವ್ಯ ಮೆರವಣಿಗೆಗೆ ಸಂಸದರಿಂದ ಚಾಲನೆ



• **ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ**

ಪಟ್ಟಣದ ಹಿರೇಮಠದಿಂದ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಜಯಂತಿ, ವಚನ ಜಾತ್ರೆ-2026, ಡಾ.ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೋತ್ಸವ ಮತ್ತು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಅಂಗವಾಗಿ ಹಮ್ಮಿಕೊಂಡ ಶ್ರೀ ಗುರುಬಸವ ನೇತೃತ್ವದಲ್ಲಿ ಸಂಸದ ಸಾಗರ ಖಂಡ್ರೆ ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು ,ಬಸವಣ್ಣನವರು ವಚನ ಕ್ರಾಂತಿಯ ರೂವಾರಿ, ಕಾಯಕ, ದಾಸೋಹ ಸಂಸ್ಕೃತಿ ಪರಿಚಯಿಸಿ ,ಸಮ ಸಮಾಜ ಸ್ಥಾಪಿಸಿದರು. ಅವರ ತತ್ವ ಸಿದ್ಧಾಂತಗಳು ನೈಜ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿ, ವಿವಿಧ ಕಲಾ ತಂಡಗಳು ಮೆರವಣಗೆಗೆ ಮೆರಗು ನೀಡಿವೆ ಎಂದು ಹೇಳಿದರು. 22 ರಂದು ನಡೆಯುವ ಕಾರ್ಯಕ್ರಮದಲ್ಲಿ ಅತ್ಯಾಧಿಕ ಸಂಖ್ಯೆಯಲ್ಲಿ ಬಸವಾಭಿಮಾನಿಗಳು ಉಪಸ್ಥಿತರಿರಬೇಕು ಎಂದು ಮನವಿ ಮಾಡಿದರು.

ಮೆರವಣಿಗೆಯು ಹಿರೇಮಠದಿಂದ ಆರಂಭಗೊಂಡು ಪಟ್ಟಣದ ಪ್ರಮುಖ ವೃತ್ತಗಳ ಮೂಲಕ ಚನ್ನಬಸವಾಶ್ರಮದಲ್ಲಿ ಸಮಾವೇಶಗೊಂಡಿತ್ತು. ಮೆರವಣಿಗೆಯುದ್ದಕ್ಕೂ ಯುವಕ, ಯುವತಿಯರು ಡಿಜೆ ಸೌಂಡಿಗೆ ಹೆಜ್ಜೆ ಹಾಕಿ ಎಲ್ಲರ ಗಮನ ಸೆಳೆದರು.

ಈ ಸಂದರ್ಭದಲ್ಲಿ ಅರಣ್ಯ ಅಭಿವೃದ್ಧಿ ನಿಗಮದ ಉಪಾಧ್ಯಕ್ಷ ಹಣಮಂತರಾವ ಚವ್ಹಾಣ, ಸಮಿತಿ ಅಧ್ಯಕ್ಷ ಯೋಗೇಶ ಅಷ್ಟೂರೆ ,ಪ್ರಮುಖರಾದ ಡಿ.ಕೆ.ಸಿದ್ರಾಮ ,ಪ್ರಸನ್ ಖಂಡ್ರೆ, ಚನ್ನಬಸವಣ್ಣ ಬಳತೆ, ಶಿವು ಲೋಖಂಡೆ, ಬಸವರಾಜ ವಂಕೆ, ವಿಲಾಸ ಬಕ್ಕಾ, ಜಗದೀಶ ಖಂಡ್ರೆ, ಸೋಮನಾಥಪ್ಪ ಅಷ್ಟೂರೆ, ಸುಭಾಷ ಕಾರಾಮುಂಗೆ, ಜೈರಾಜ ಪಾತ್ರೆ, ಪ್ರಕಾಶ ಮಾಶಟ್ಟೆ, ಡಾ.ಅಮೀತ ಅಷ್ಟೂರೆ, ಬಸವರಾಜ ಕನ್ನಾಳೆ, ಚಂದ್ರಶೇಖರ ವಂಕೆ, ಉಮಾಕಾಂತ ವಾರದ, ಚಂದ್ರಶೇಖರ ಎಮ್ಮೆ, ಚಂದ್ರಕಾಂತ ಬಿರಾದಾರ, ಕಿರಣಕುಮಾರ ಖಂಡ್ರೆ, ಓಂಕಾರ ಕನಶೆಟ್ಟೆ, ಕಪಿಲ ಕಲ್ಯಾಣೆ, ಸಂಗಮೇಶ ವಾಲೆ, ಡಾ. ಅನೀಲ ಸುಕಾಳೆ, ಡಾ.ಶಶಿಕಾಂತ ಭೂರೆ, ಡಾ. ಸಜ್ಜಲ ಬಳತೆ, ಅಮರ ಜಲ್ದೆ, ಅನೀಲ ಲೋಖಂಡೆ, ಡಾ.ವಸಂತ ಪವಾರ, ಡಾ.ನಿತೀನ ಪಾಟೀಲ್, ಜೈಕಿಶನ ಬಿಯಾಣಿ, ಡಾ.ವಿಲಾಸ ಕನಸೆ, ಕೈಲಾಸ ಮಡ್ಡೆ, ನಾಗೇಶ ತಮಾಸಂಗೆ, ಟಿಂಕು ರಾಜಭವನ, ಮಹಾಂತೇಶ ದಶಮುಖೆ, ಪ್ರಭು ಡಿಗ್ಗೆ, ಅಶೋಕ ಬಾವುಗೆ, ಅಶೋಕ ಲದ್ದೆ, ಸಂಗಮೇಶ ಕೊಡಗೆ, ಸಂತೋಷ ಮುದಾಳೆ, ಶುಬಾಂಗಿ ಬಳತೆ, ಸುನೀತಾ ಮೆನಕೆರಿ, ದೀಪಾ ಅಷ್ಟೂರೆ, ಮಲ್ಲಮ್ಮ ಪಾಟೀಲ್ ,ಸ್ನೇಹಲ್ ಅಷ್ಟೂರೆ, ಡಾ.ಕವಿತಾ ಪಾಟೀಲ್, ವಂದನಾ ಕಾಳೆ, ಅನೀತಾ ಪವಾರ ಸೇರಿದಂತೆ ಅನೇಕರು ಭಾಗವಹಿಸಿದ್ದರು.



ಬಸವಕಲ್ಯಾಣ :- ಮಹಾತ್ಮ ಬಸವೇಶ್ವರರ 76,ನೇಯ ಜಾತ್ರಾ ಮಹೋತ್ಸವ ನಿಮಿತ್ತವಾಗಿ ಸೋಮವಾರ ಬಸವಣ್ಣನವರ ಬೆಳ್ಳಿ ತೊಟ್ಟಿಲು ಮೆರವಣಿಗೆಯಲ್ಲಿ ಕಲಾವಿದರು ವೇಷ ಭೂಷಣ ಅಲ್ಲದೆ ಮುಖವಾಡ ಧರಿಸಿ ನೋಡುಗರಿಗೆ ಮನೋರಂಜನೆ ನೀಡುತ್ತಿರುವ ದೃಶ್ಯ ಕಾಣಬಹುದು. (ಮಲ್ಲಮ್ಮ ನುಡಿ ಚಿತ್ರ)

# ಕೊಪ್ಪಳ ಈಜಲು ಹೋದ ವಿದ್ಯಾರ್ಥಿ ಕೆರೆಯಲ್ಲಿ ಮುಳುಗಿ ಸಾವು

ಮಲ್ಲಮ್ಮ ನುಡಿವಾರ್ತೆ
ಕೊಪ್ಪಳ



ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ ನಂತರದ ವಸತಿ ನಿಲಯದಲ್ಲಿದ್ದ ವಿದ್ಯಾರ್ಥಿ ಕುಕನೂರು ತಾಲೂಕಿನ ಚಿಕ್ಕಮನ್ನಾಪುರ ಗ್ರಾಮದ ಆಕಾಶ ಹರಿಜನ( 18) ವಿದ್ಯಾರ್ಥಿ ಕೊಪ್ಪಳದ ಸರಕಾರಿ ಪಾಲಿಟೆಕ್ನಿಕ್ ನಲ್ಲಿ ಓದುತ್ತಿದ್ದ ವಿದ್ಯಾರ್ಥಿ ಇಂದು ಭಾನುವಾರವಾದ ಕಾರಣ ಮಾದಿನೂರು ಬಳಿ ಈಜು ಹೋಗಿದ್ದಸ್ನೇಹಿತರೊಂದಿಗೆ ಈಜು ಹೋಗಿದ್ದಾಗ ವಿದ್ಯಾರ್ಥಿ ಸಾವುಮುಂಜಾನೆ 11 ಗಂಟೆಗೆ ಕೆರೆಯಲ್ಲಿ ನಾಪತ್ತೆಯಾಗಿದ್ದ ವಿದ್ಯಾರ್ಥಿಮದ್ಯಾಹ್ನ 3.30 ಕ್ಕೆ ಮೃತ ದೇಹ ಪತ್ತೆ ಇಷ್ಟೆಲ್ಲಾ ಆದರೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಬಾರದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಪ್ರತಿಭಟನೆಕೊಪ್ಪಳ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಶವವಿಟ್ಟು ಪ್ರತಿಭಟನೆಗೆ ಮುಂದಾಗಿದ್ದ ಗ್ರಾಮಸ್ಥ

ಉಪವಿಭಾಗಾಧಿಕಾರಿ ಮನವೊಲಿಕೆಯ ನಂತರ ಪ್ರತಿಭಟನೆ ಕೈ ಬಿಟ್ಟ ಗ್ರಾಮಸ್ಥರ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳ ಮೇಲೆ ಕ್ರಮಕ್ಕೆ ಆಗ್ರಹಿಸಿದ ಗ್ರಾಮಸ್ಥರು.

# ಇಂದಿನ ಕೇಡುಗಾಲಕ್ಕೆ ಸಹಬಾಳ್ವೆ ಶಾಂತಿಯ ಅಗತ್ಯ




ಮಲ್ಲಮ್ಮ ನುಡಿವಾರ್ತೆ

ಬಳ್ಳಾರಿ: ಪರಸ್ಪರ ಸ್ನೇಹ, ಸಹಬಾಳ್ವೆ ,ಸೌಜನ್ಯ,ಸೌಹಾರ್ದತೆ, ಶಾಂತಿಯಿಂದ ನಾವೆಲ್ಲರೂ ಬದುಕಿ ಭಾರತದ ನೆಲದಲ್ಲಿ ಬಹುತ್ವವನ್ನು ಎತ್ತಿ ಹಿಡಿಯಬೇಕಾದ ಅಗತ್ಯ ಇಂದಿನ ಕೇಡುಗಾಲಕ್ಕಿದೆ ಎಂದು ಪ್ರಾಧ್ಯಾಪಕ ದಸ್ತಗೀರಸಾಬ್ ದಿನ್ನಿ ಅಭಿಪ್ರಾಯಪಟ್ಟರು.

ತಾಲೂಕಿನ ದಮ್ಮೂರು ಗ್ರಾಮದ ವೆಂಕಾವಧೂತ ಮಠದಲ್ಲಿ ಸರಳಾದೇವಿ ಸರಕಾರಿ ಪ್ರಥಮ ದರ್ಜೆ (ಸ್ವಾಯತ್ತ ) ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕಗಳ ವತಿಯಿಂದ ಆಯೋಜಿಸಿದ್ದ ವಾರ್ಷಿಕ ವಿಶೇಷ ಶಿಬಿರದಲ್ಲಿ 'ಹೊಸ ತಲೆಮಾರು ಮತ್ತು ಸೌಹಾರ್ದತೆ' ವಿಷಯದ ಕುರಿತು ಮಾತನಾಡಿದರು.

ನಮ್ಮ ಸುತ್ತಲಿನ ಸಮಾಜದಲ್ಲಿ ಮೋಸ, ವಂಚನೆ, ಶೋಷಣೆ, ಅತ್ಯಾಚಾರ, ದೌರ್ಜನ್ಯ, ಮರ್ಯಾದೆಗೇಡು ಹತ್ಯೆ ,ಜಾತಿ ತಾರತಮ್ಯ ಕೃತ್ಯಗಳು ಢಾಳಾಗಿ ಗೋಚರಿಸುತ್ತಿವೆ. ಇವುಗಳ ಸಂಕಟದ ಮಗ್ಗುಲು ಕಲಕಬೇಕಿದೆ. ಹೊಸ ತಲೆಮಾರು ಗಂಭೀರವಾಗಿ ಆಲೋಚಿಸಿ,ಮಾನವ ಸಂಬಂಧಗಳನ್ನು ಗಟ್ಟಿಗೊಳಿಸಿ ನವ ಸಮಾಜಕ್ಕೆ ಕೈಜೋಡಿಸಬೇಕಿದೆ ಎಂದು ವಿಶ್ಲೇಷಿಸಿದರು.

ಸಹಾಯಕ ಪ್ರಾಧ್ಯಾಪಕ ದೊಡ್ಡ ಬಸವರಾಜ್ ಸಾಮಾಜಿಕ ಮೌಲ್ಯಗಳು ಕುಸಿಯುತ್ತಿರುವ ವರ್ತಮಾನಕ್ಕೆ ಸೌಹಾರ್ದತ ಮೌಲ್ಯಗಳು ಬದುಕಿನ ಗುರಿಯಾಗಲಿ ಎಂದು ಆಶಿಸಿದರು.

ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕಾರ್ಯಕ್ರಮಾಧಿಕಾರಿ ಕೆ. ಬಸಪ್ಪ ಸಕರಾತ್ಮಕ ಮಾನವ ಮೌಲ್ಯಗಳು ಮತ್ತು ನೈತಿಕ ತತ್ವಗಳನ್ನು ಬೆಳೆಸಿಕೊಳ್ಳಲು ರಾಷ್ಟ್ರೀಯ ಸೇವಾ ಯೋಜನಾ ಘಟಕವು ಸಹಕಾರಿಯಾಗಲಿದೆ. ಭಾರತೀಯ ಸಂಸ್ಕೃತಿ ಮತ್ತು ಕನ್ನಡ ಸಾಹಿತ್ಯವು ಸೌಹಾರ್ದತೆಯ ವಿಚಾರಗಳನ್ನೇ ಪ್ರಧಾನ ಆಶಯವಾಗಿಸಿಕೊಂಡಿದೆ. ಯುವ ಸಮುದಾಯ ನವ ಮಾಧ್ಯಮಗಳ ಈ ಕಾಲಘಟ್ಟದಲ್ಲಿ ಬಹಳ ಎಚ್ಚರಿಕೆಯಿಂದ ಬದುಕನ್ನು ರೂಪಿಸಿಕೊಂಡು ಹೆಜ್ಜೆಗಳನ್ನು ಇಡಬೇಕಾಗಿದೆ ಎಂದರು.

ವೇದಿಕೆಯ ಮೇಲೆ ಎನ್.ಎಸ್.ಎಸ್. ಘಟಕಗಳ ಕಾರ್ಯಕ್ರಮಾಧಿಕಾರಿಗಳಾದ ಬಿ.ರಾಮಸ್ವಾಮಿ, ಎಂ. ಎನ್. ಪ್ರವೀಣಕುಮಾರ,ಅತಿಥಿ ಉಪನ್ಯಾಸಕ ಮಾರೆಪ್ಪ,ಯುವ ಕಲಾವಿದ ಆಂಜನೇಯ ಇದ್ದರು.

# ಬಸವೇಶ್ವರನ ಭಾವಚಿತ್ರದೊಂದಿಗೆ ಜೋಡೆತ್ತುಗಳ ಭವ್ಯ ಮೇರವಣಿಗೆ



• ಮಲ್ಲಮ್ಮ ನುಡಿ ವಾರ್ತೆ, ಯಲಬುರ್ಗಾ

ಮಹಾ ಮಾನವತವಾದಿ ಜಗಜ್ಯೋತಿ ಶ್ರೀ ಬಸವೇಶ್ವರ ಭಾವಚಿತ್ರದೊಂದಿಗೆ ಭವ್ಯವಾದ ಮೇರವಣಿಗೆಯು ಯಲಬುರ್ಗಾ,ಹೊಸಳ್ಳಿ,ಚಿಕ್ಕೊಪ್ಪ, ಕುದ್ರಿಕೊಟಗಿ,ಮಲಕಸಮುದ್ರ ಹಾಗು ಸುತ್ತ ಮುತ್ತಲಿನ

ಗ್ರಾಮದ ರೈತರ ಜೋಡೆತ್ತುಗಳೊಂದಿಗೆ ಹಾಗು ಡೊಳ್ಳು,ಬ್ಯಾಂಡು ಬಾಜ , ಸಕಲವಾದ್ಯಗಳೊಂದಿಗೆ ಪಟ್ಟಣದ ರಾಜ ಬೀದಿಯಲ್ಲಿ ಭವ್ಯ ಮೇರವಣಿಗೆಯು ಸಾಗಿ ಬಂದಿತು,ಜಾತ್ರೆಯಲ್ಲಿ ಶ್ರೀ ಮೊಗ್ಗಿ ಬಸವೇಶ್ವರ ಜಾತ್ರಾ ಮಹೋತ್ಸವ

ಸಮಿತಿಯ ಪದಾಧಿಕಾರಿಗಳು,ಸದಸ್ಯರು,ಗ್ರಾಮದ ಗುರುಹಿರಿಯರು ಯುವ ಸಮುದಾಯದವರು, ರೈತರು ಸಂತಸದಿಂದ ಸಡಗರ ಸಂಭ್ರಮದಿಂದ ಮೆರವಣಿಗೆಯಲ್ಲಿ ಭಾಗವಹಿಸಿದ್ದು ಕಂಡು ಬಂದಿತು.

# ಸಾರ್ವಜನಿಕ ಸ್ಥಳಗಳಲ್ಲಿ ಮಲ, ಮೂತ್ರ ವಿಸರ್ಜನೆ ನಿಷೇಧ: ಜುಬಿನ್ ಮೊಹೊಪಾತ್ರ

ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ರಾಯಚೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಕಾರಣಕ್ಕೂ ಮಲ, ಮೂತ್ರ ವಿಸರ್ಜನೆ ಮಾಡುವುದನ್ನು ನಿಷೇಧಿಸಲಾಗಿದೆ ಎಂದು ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಅವರು ತಿಳಿಸಿದ್ದಾರೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಇವರ ಪತ್ರದನ್ವಯ ಸ್ವಚ್ಛ ಭಾರತ್ ಮಿಷನ್ ಯೋಜನೆಗೆ ಸಂಬಂಧಿಸಿದಂತೆ ನೀಡಿರುವ ಮಾರ್ಗ ಸೂಚಿಗಳನ್ವಯ ರಾಯಚೂರು ಮಹಾನಗರ ಪಾಲಿಕೆ ವ್ಯಾಪ್ತಿಯ 35 ವಾರ್ಡಗಳನ್ನು ಓ.ಡಿ.ಎಫ್ (ಬಯಲು ಶೌಚ ಮುಕ್ತ) ನಗರವೆಂದು ಘೋಷಿಸಿ ಪ್ರಮಾಣ ಪತ್ರ ಪಡೆಯಲಾಗಿದೆ. ಅದರಂತೆ ಓ.ಡಿ.ಎಫ್+ ಮರು ಪ್ರಮಾಣೀಕರಣ ಬಯಲು ಶೌಚ ಮುಕ್ತ ನಗರ ಎಂದು 35 ವಾರ್ಡಗಳನ್ನು ಘೋಷಿಸಲಾಗಿದೆ. ಪಾಲಿಕೆಯ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಕಾರಣಕ್ಕೂ ಮಲ, ಮೂತ್ರ ವಿಸರ್ಜನೆ ಮಾಡಬಾರದು.

ಮಾಡಿದಲ್ಲಿ ಮೂತ್ರ ವಿಸರ್ಜನೆಗೆ 500ರೂ. ಮತ್ತು ಮಲ ವಿಸರ್ಜನೆಗೆ 1000 ರೂ. ದಂಡ ವಿಧಿಸಲಾಗುವುದು. ಸಾರ್ವಜನಿಕರು, ಸಾರ್ವಜನಿಕ ಶೌಚಾಲಯಗಳು, ಹೋಟೆಲ್ ಮತ್ತು ಪೆಟ್ರೋಲ್ ಬಂಕ್‌ಗಳ ಶೌಚಾಲಯಗಳನ್ನು ಉಚಿತವಾಗಿ ಬಳಸಬಹುದಾಗಿದೆ.

ಈ ಬಗ್ಗೆ ಸಾರ್ವಜನಿಕರಿಂದ ಸಲಹೆ, ಸೂಚನೆ ಹಾಗೂ ಆಕ್ಷೇಪಣೆಗಳನ್ನು ಪ್ರಕಟಣೆ ಪ್ರಚುರ ಪಡಿಸಿದ 07 ದಿವಸಗಳೊಗಾಗಿ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸಬಹುದಾಗಿದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಶಿಸ್ತು ಮುಂದುವರೆಸಿದರೆ ಅಧಿಕಾರಿಗಳು, ಸಿಬ್ಬಂದಿ ಮೇಲೆ ಕ್ರಮ: ಇಟ್ನಾಳ

ಮಲ್ಲಮ್ಮ ನುಡಿವಾರ್ತೆ
ಕೊಪ್ಪಳ

ಜಿಲ್ಲೆಯಲ್ಲಿ ಕಾರ್ಯನಿರ್ವಜಿಸುತ್ತಿರುವ ಎಲ್ಲಾ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಶಿಸ್ತಿನಿಂದ ಹಾಗೂ ಸಮಯ ಪ್ರಜ್ಞೆಯೊಂದಿಗೆ ಕಾರ್ಯನಿರ್ವಹಿಸಬೇಕು. ಅಶಿಸ್ತು ಮುಂದುವರೆಸಿದರೆ ಶಿಸ್ತು ಕ್ರಮ ಜರುಗಿಸುವುದಾಗಿ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏಪ್ರಿಲ್ 21ರಂದು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿ ಅವರು ಮಾತನಾಡಿದರು.

ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಕಚೇರಿಗೆ ಬರಬೇಕು ಎಂದು ಹೇಳುವ ಪರಿಸ್ಥಿತಿ ಬರಬಾರದು ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಜಿಲ್ಲಾಧಿಕಾರಿಗಳು, ನೀವೆಲ್ಲಾ ಜಿಲ್ಲಾಮಟ್ಟದ ಅಧಿಕಾರಿಗಳು, ನಿಮಗೆ ಸಮಯ ಪ್ರಜ್ಞೆ ಇರಬೇಕು. ನೀವೇ ಕಚೇರಿಗೆ ಲೇಟಾಗಿ ಬಂದು ಸಿಬ್ಬಂದಿಗೆ ಇನ್ನೇನು ಪಾಠ ಹೇಳುತ್ತೀರಿ. ನಾನು ಜವಾಬ್ದಾರಿಯುತ ಸ್ಥಾನದಲ್ಲಿರುವ ಅಧಿಕಾರಿ ಎಂಬುದಾಗಿ ನಿಮಗೆ ನೀವೇ ಅರಿತು ಕಚೇರಿಗೆ ಸರಿಯಾದ ಸಮಯಕ್ಕೆ ಹಾಜರಾಗಿ ಕಚೇರಿಯ ಇನ್ನಿತರ ಸಿಬ್ಬಂದಿಗೆ ಉತ್ತಮ ಪರಿಪಾಠ ಹಾಕಬೇಕು ಎಂದು ಜಿಲ್ಲಾಧಿಕಾರಿಗಳು ಸಲಹೆ ಮಾಡಿದರು.

ನೀವು ಯಾವ ಸಮಯಕ್ಕೆ ಕಚೇರಿಗೆ ಬಂದಿದ್ದೀರಿ? ನೀವು ಬಂದಾಗ ನಿಮ್ಮ ಸಿಬ್ಬಂದಿ ಕಚೇರಿಯಲ್ಲಿದ್ರಾ? ಎಂದು ಇಲಾಖಾವಾರು ಅಧಿಕಾರಿಗಳ ಹಾಜರಾತಿಯ ಬಗ್ಗೆ ಜಿಲ್ಲಾಧಿಕಾರಿಗಳು ಇದೇ ವೇಳೆ ಪರಿಶೀಲಿಸಿ, ಅಧಿಕಾರಿಗಳಿಗೆ ಅರ್ಧಗಂಟೆಗೂ ಹೆಚ್ಚು ಕಾಲ ಶಿಸ್ತಿನ ಪಾಠ ಮಾಡಿದರು.

ಬಿಸಿಲಿನ ಪ್ರಖರತೆ ಮತ್ತು ತೀವ್ರತೆ ಕಾರಣದಿಂದಾಗಿ ಕಲ್ಯಾಣ ಕರ್ನಾಟಕ ಒಳಗೊಂಡಂತೆ ಉತ್ತರ ಕರ್ನಾಟಕ ಭಾಗದ ವಿವಿಧ ಜಿಲ್ಲೆಗಳಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಕಚೇರಿ ಕೆಲಸದ ಸಮಯವನ್ನು ಬೆಳಿಗ್ಗೆ 8 ರಿಂದ ಮಧ್ಯಹ್ನ 1.30 ರವರೆಗೆ ಬದಲಾವಣೆ ಮಾಡಿ ಸರ್ಕಾರವು ಆದೇಶಿಸಿದೆ. ಜಿಲ್ಲೆಯ ಕೆಲ ಇಲಾಖೆಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ನಿಗದಿತ ಸಮಯಕ್ಕೆ ಕಚೇರಿಗೆ ಹಾಜರಾಗುತ್ತಿಲ್ಲ; ಕಚೇರಿಯಲ್ಲಿ ಕಾಣುವುದಿಲ್ಲ ಎಂದು ಕೆಲವು ಪತ್ರಿಕೆಗಳಲ್ಲಿ ವರದಿಯಾಗಿದ್ದನ್ನು ಜಿಲ್ಲಾಡಳಿತವು ಗಂಭೀರವಾಗಿ ಪರಿಗಣಿಸಿದೆ. ಅದಕ್ಕಾಗಿಯೇ ಏಪ್ರೀಲ್ 21ರಂದು ಖುದ್ದು ಕೆಲ ಕಚೇರಿಗಳಿಗೆ ಆಕಸ್ಮಿಕ ಭೇಟಿ ನೀಡಿ



ಪರಿಶೀಲನೆ ಮಾಡಿಸಿದ್ದೇವೆ. 10 ಗಂಟೆಯಾದರು ಕೆಲ ಅಧಿಕಾರಿಗಳು ಕಾಣಿಸಿರುವುದಿಲ್ಲ. ಸಿಬ್ಬಂದಿಯು ಇರಲಿಲ್ಲ. ಇದು ನಾಚಿಕೆಗೇಡಿನ ಸಂಗತಿ. ನಿಮಗೆ ಅರಿವಿಲ್ಲವೇ? ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಕಾರಣ ಕೇಳಿ ನೋಟೀಸ್: ಅಧಿಕಾರಿಗಳ ತಂಡ ರಚಿಸಿ ಇನ್ಮುಂದೆ ವಾರಕ್ಕೊಮ್ಮೆ ಆಯಾ ಕಚೇರಿಗಳಿಗೆ ಆಕಸ್ಮಿಕ ಭೇಟಿ ಮಾಡಲಾಗುತ್ತದೆ. ಆ ವೇಳೆಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಕಚೇರಿಯಲ್ಲಿ ಕಾಣಿಸದಿದ್ದರೆ ಆಯಾ ಅಧಿಕಾರಿಗಳು ಮತ್ತು ಸಿಬ್ಬಂದಿಯ ಮೇಲೆ ಶಿಸ್ತುಕ್ರಮಕ್ಕಾಗಿ ಮೇಲಧಿಕಾರಿಗಳಿಗೆ ವರದಿ ಮಾಡುವುದಾಗಿ ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು. ಕಚೇರಿಗೆ ವಿಳಂಬವಾಗಿ ಆಗಮಿಸುವುದನ್ನು ಮುಂದುವರೆಸಿದರೆ ಅಂತಹ ಅಧಿಕಾರಿಗಳಿಗೆ ಇನ್ಮುಂದೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಗುವುದು ಎಂದು ತಿಳಿಸಿದರು.

ಚಲನವಲನ ವಹಿ ಪಾಲನೆಗೆ ಸೂಚನೆ: ಕಚೇರಿಯಲ್ಲಿ ಚಲನವಲನ ವಹಿ ಇದ್ದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಎಲ್ಲಿದ್ದಾರೆ ಎಂಬುದು ತಿಳಿಯುತ್ತದೆ. ಹಾಗಾಗಿ ಇನ್ನುಂದೆ ಎಲ್ಲಾ ಇಲಾಖೆಗಳಲ್ಲಿ ಕಡ್ಡಾಯವಾಗಿ ಚಲನವಲನ ವಹಿಯನ್ನು ನಿರ್ವಹಣೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ವೈದ್ಯರ ಮೇಲೆ ಸಾಕಷ್ಟು ದೂರು: ವೈದ್ಯಾಧಿಕಾರಿಗಳು ಮತ್ತು ವೈದ್ಯರ ಮೇಲೆ ಸಾಕಷ್ಟು ದೂರುಗಳು ಬರುತ್ತಿವೆ. ಇದು ಇಲ್ಲಿಗೆ ನಿಲ್ಲಬೇಕು. ಬರೀ ದೂರುಗಳನ್ನು ಕೇಳತ್ತ ಕೂಡುವುದೇ ನಮ್ಮ ಕೆಲಸವಲ್ಲ. ಯಾವುದೇ ದೂರುಗಳನ್ನು ಹಗುರವಾಗಿ ಪರಿಗಣಿಸದೇ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಬೇಕು. ಈ ಬಗ್ಗೆ ಸರಿಯಾಗಿ ಮೇಲ್ವಿಚಾರಣೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಏಪ್ರೀಲ್ 21ರಂದು ಬೆಳಗಿನ ಅವಧಿಯಲ್ಲಿ ಕೆಲ ಕಚೇರಿಗಳಿಗೆ ಭೇಟಿ ನೀಡಿದಾಗ ಕಚೇರಿ ಮುಂದಿನ ಕಾರಿಡಾರದಲ್ಲಿ ಅಶುಚಿತ್ವ ಕಾಣಿಸಿತು. ಎಲ್ಲೆಂದರಲ್ಲಿ ಪೋಸ್ಟರ್ ಅಂಟಿಸಿದ್ದು ಕಾಣಿಸಿತು. ಯಾವುದೇ ಪತ್ರವನ್ನು ಅಚ್ಚುಕಟ್ಟಾಗಿ ಸೂಚನಾ ಫಲಕದಲ್ಲಿ ಹಾಕಲು ತಿಳಿಸಿದ್ದರೂ ಎಲ್ಲೆಂದರಲ್ಲಿ ಹಾಕಿರುವುದು ಗಮನಕ್ಕೆ ಬಂದಿತು. ಈ ಅಶಿಸ್ತು ದೂರಾಗಬೇಕು. ಕಚೇರಿಯಲ್ಲಿ ಶಿಸ್ತು ಕಾಯ್ದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚನೆ ನೀಡಿದರು. ಇನ್ಮುಂದೆ ಪ್ರತಿ ತಿಂಗಳು ಕಚೇರಿಯಲ್ಲಿ ಶುಚಿತ್ವ ಅಭಿಯಾನ ಹಮ್ಮಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಹೇಮಂತಕುಮಾರ, ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಡಿ.ಮಂಜುನಾಥ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಮಂಜುನಾಥ ಗುಂಡೂರು, ಜಂಟಿ ಕೃಷಿ ನಿರ್ದೇಶಕರಾದ ಜಿ.ಡಿ.ಕೃಷ್ಣಮೂರ್ತಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಅಜ್ಜಪ್ಪ ಸೋಗಲದ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಟಿ.ಲಿಂಗರಾಜು, ಪಶು ಇಲಾಖೆ ಉಪನಿರ್ದೇಶಕರಾದ ಡಾ. ಪಿ.ಎಂ. ಮಲ್ಲಯ್ಯ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಜಗದೀಶ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಮೇರುನಟ ರಾಜ್‌ಕುಮಾರ್ ಜನ್ಮ ದಿನಾಚರಣೆಗೆ ಸಿದ್ಧತೆ

• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ



ಕೊಪ್ಪಳ ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿಯ ಸಹಯೋಗದಲ್ಲಿ ಡಾ.ರಾಜ್‌ಕುಮಾರ್ ಜನ್ಮ ದಿನಾಚರಣೆಯ ಕಾರ್ಯಕ್ರಮ ರಾಜ್ ಸಂಭ್ರಮವು ಏಪ್ರಿಲ್ 24ರಂದು ಸಂಜೆ 5.30ಕ್ಕೆ ನಗರದ ಸಾಹಿತ್ಯ ಭವನದಲ್ಲಿ ಆಯೋಜಿಸಲಾಗಿದ್ದು, ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಡಾ.ರಾಜಕುಮಾರ ಜಯಂತಿ ಆಚರಣೆಯ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕನ್ನಡದ ಮೇರು ನಟ, ನಟಸಾರ್ವಭೌಮ ಡಾ.ರಾಜ್‌ಕುಮಾರ್ ಅವರು ಈ ನಾಡು ಕಂಡ ನೆಚ್ಚಿನ ನಟರಾಗಿದ್ದಾರೆ. ಗೋಕಾಕ ಚಳವಳಿ ಸೇರಿದಂತೆ ಅನೇಕ ಕನ್ನಡಪರ ಹೋರಾಟಗಳಲ್ಲಿ ಭಾಗಿಯಾಗಿ ನಾಡು-ನುಡಿಗಾಗಿ ಮಹತ್ತರ ಸೇವೆ ಸಲ್ಲಿಸಿದ ಮಹನಿಯರಾಗಿದ್ದಾರೆ. ತಮ್ಮದೇ ಆದ ವಿಶೇಷ ನಟನೆಯಿಂದಾಗಿ ಕನ್ನಡಿಗರ ಮನೆಮಾತಾದ ಡಾ.ರಾಜಕುಮಾರ ಅವರು ಎಲ್ಲ ಬಗೆಯ ಪಾತ್ರಗಳಲ್ಲಿ ಮನಮಿಡಿಯುವಂತೆ ನಟಿಸಿ ಕಲಾರಾಧಕರ ಹೃದಯಗೆದ್ದಿದ್ದಾರೆ. ಅಂತಹ ಮಹನಿಯರ ಜಯಂತಿ ಕಾರ್ಯಕ್ರಮ ಕೊಪ್ಪಳ ಜಿಲ್ಲೆಯಲ್ಲಿ ಸಹ ವಿಶೇಷವಾಗಿ ನಡೆಯಬೇಕು. ಇದಕ್ಕಾಗಿ ಜವಾಬ್ದಾರಿ ಹಂಚಿಕೆ ಮಾಡಿದಂತೆ ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳು ಸಮನ್ವಯದಿಂದ ಕೆಲಸ ನಿರ್ವಹಿಸಿ, ಡಾ.ರಾಜ್ ಸಂಭ್ರಮ ಕಾರ್ಯಕ್ರಮವು ಅದ್ದೂರಿಯಾಗಿ ನಡೆಯುವಂತೆ ವ್ಯವಸ್ಥೆ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ, ಕನ್ನಡಾಭಿಮಾನಿಗಳ ಸಲಹೆಯಂತೆ ಹಾಗೂ ಸರ್ವ ಸದಸ್ಯರೆಲ್ಲರೂ ಚರ್ಚಿಸಿ ನಿರ್ಣಯಿಸಿದಂತೆ ಡಾ.ರಾಜ್ ಸಂಭ್ರಮ ಕಾರ್ಯಕ್ರಮದಲ್ಲಿ ಡಾ.ರಾಜಕುಮಾರ ಅವರ ಚಲನಚಿತ್ರ ಗೀತೆಗಳನ್ನು ಹಾಡಲು ಮತ್ತು ಡಾ.ರಾಜಕುಮಾರ ಅವರ ಸಿನೇಮಾದ ಡೈಲಾಗ್ (ಮಿಮಿಕ್ರಿ) ಹೇಳಲು ಆಸಕ್ತ ಕಲಾವಿದರು ಮತ್ತು ಎಲ್ಲ ಸಾರ್ವಜನಿಕರಿಗೆ ಅವಕಾಶ ಕಲ್ಪಿಸಬೇಕು. ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ ವ್ಯಾಪಕ ಪ್ರಚಾರ ನಡೆಸಬೇಕು. ಡಾ.ರಾಜಕುಮಾರ ಅಭಿಮಾನಿಗಳು ಯಾರೇ ಇದ್ದರೂ ವಯಸ್ಸಿನ ಮಿತಿ ಹಾಕದೇ ಎಲ್ಲರಿಗೂ ಅವಕಾಶ ನೀಡಬೇಕು. ಕಾರ್ಯಕ್ರಮದಲ್ಲಿ ಕರೋಕೆ ಹಾಡುಗಾರರಿಗೆ ಆದ್ಯತೆ ನೀಡಿ ಡಾ.ರಾಜ್ ಸಂಭ್ರಮ ಕಾರ್ಯಕ್ರಮದ ಮೆರಗನ್ನು ಹೆಚ್ಚಿಸಲು ಅಗತ್ಯ ವ್ಯವಸ್ಥೆ ಮಾಡಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಶಿಷ್ಟಾಚಾರದಂತೆ ಆಮಂತ್ರಣ ಪತ್ರಿಕೆ ಮುದ್ರಿಸಿ ವಿತರಿಸಬೇಕು. ನಗರಸಭೆ ಅಧಿಕಾರಿಗಳು ಸಾಹಿತ್ಯ ಭವನದಲ್ಲಿ ಕುಡಿಯುವ ನೀರಿನ ಮತ್ತು ಶುಚಿತ್ವದ ವ್ಯವಸ್ಥೆ ಮಾಡಬೇಕು. ಕಾರ್ಯಕ್ರಮದ ಅವಧಿಯಲ್ಲಿ ನಿರಂತರ ವಿದ್ಯುತ್ ಪೂರೈಸಲು ಜೆಸ್ಕಾಂ ಅಧಿಕಾರಿಗಳಿಗೆ ಪತ್ರ ಬರೆದು ತಿಳಿಸಲು ನಿರ್ದೇಶನ ನೀಡಿದರು. ಕಾರ್ಯಕ್ರಮದಲ್ಲಿ ಹಾಸ್ಟೇಲ್ ವಿದ್ಯಾರ್ಥಿಗಳು ಪಾಲ್ಗೊಳ್ಳುವಂತೆ ಅಗತ್ಯ ಏರ್ಪಾಡು ಮಾಡಲು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿ ಕಲಾವಿದರ ಸಮನ್ವಯ ಮಾಡಲು ಸೂಚನೆ ನೀಡಿದರು.

ಬೆಂಗಳೂರಿನ ಕರ್ನಾಟಕ ಚಲನಚಿತ್ರ ಅಕಾಡೆಮಿಯ ಸದಸ್ಯರಾದ ಶ್ರೀಮತಿ ಸಾವಿತ್ರಿ ಮುಜಮದಾರ ಅವರು ಮಾತನಾಡಿ, ಈ ಕಾರ್ಯಕ್ರಮಕ್ಕೆ ಕರ್ನಾಟಕ ಚಲನಚಿತ್ರ ಅಕಾಡೆಮಿ, ಬೆಂಗಳೂರು ಇವರ ಸಹಯೋಗ ಪಡೆದುಕೊಳ್ಳಬೇಕು. ಕೊಪ್ಪಳ ಜಿಲ್ಲೆಯಲ್ಲಿ ಡಾ.ರಾಜ್‌ಕುಮಾರ್ ಅಭಿಮಾನಿಗಳ ಪಡೆಯಿದ್ದು ಅವರೆಲ್ಲರೂ ಭಾಗವಹಿಸುತ್ತಾರೆ. ಡಾ.ರಾಜ್‌ಕುಮಾರ್ ಅಭಿನಯದ ಚಲನಚಿತ್ರಗಳ ಹಾಡುಗಳು ಮತ್ತು ಅವರು ಹಾಡಿರುವ ಗೀತೆಗಳ ಗಾಯನಕ್ಕೆ ಮತ್ತು ಮಿಮಿಕ್ರಿ ಕಾರ್ಯಕ್ರಮಕ್ಕೆ ಅವಕಾಶ ನೀಡಿ ರಾಜ್ ಸಂಭ್ರಮ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಬೇಕು. ಗೋಕಾ-ಕ್ ಚಳುವಳಿ ಸಂದರ್ಭದಲ್ಲಿ ಕೊಪ್ಪಳ ಜಿಲ್ಲೆಗೆ ಆಗಮಿಸಿದ್ದ ಡಾ.ರಾಜ್‌ಕುಮಾರ್ ಅವರೊಂದಿಗೆ ಮುಂಚೂಣಿಯಲ್ಲಿ ಭಾಗವಹಿಸಿದ ಹೋರಾಟಗಾರರು ಕೊಪ್ಪಳ ಜಿಲ್ಲೆಯಲ್ಲಿದ್ದು, ಅವರಿಗೆ ಈ ಕಾರ್ಯಕ್ರಮದಲ್ಲಿ ಸನ್ಮಾನಿಸುವ ವ್ಯವಸ್ಥೆ ಆಗಬೇಕು ಎಂದು ಮನವಿ ಮಾಡಿದರು.

ಕೊಪ್ಪಳ ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ ಅವರು, ಡಾ.ರಾಜಕುಮಾರ ಜನ್ಮ ದಿನಾಚರಣೆ ಕುರಿತಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರು ಕಳುಹಿಸಿದ ಸುತ್ತೋಲೆಯನ್ನು ಸಭೆಗೆ ಓದಿ ಹೇಳಿದರು. ಪ್ರತಿ ವರ್ಷದಂತೆ ಈ ವರ್ಷವು ಸಹ ಜಿಲ್ಲಾಡಳಿತದ ಸಹಯೋಗದಲ್ಲಿ ಡಾ.ರಾಜ್‌ಕುಮಾರ್ ಜನ್ಮ ದಿನಾಚರಣೆಗೆ ಸಿದ್ಧತೆ ಮಾಡಲಾಗುತ್ತಿದೆ. ಈ ಬಾರಿ ಕೊಪ್ಪಳ ನಗರದ ಪ್ರಸಿದ್ಧ ಅಶೋಕ ವೃತ್ತದಲ್ಲಿನ ಸಾಹಿತ್ಯ ಭವನದಲ್ಲಿ ಕಾರ್ಯಕ್ರಮ ಆಯೋಜನೆ ಮಾಡಲಾಗುತ್ತಿದೆ. ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ನಿರ್ಣಯಿಸಿದಂತೆ, ಡಾ.ರಾಜಕುಮಾರ ಸಿನೇಮಾ ಗೀತೆಗಳ ಗಾಯನ ಮತ್ತು ಡಾ.ರಾಜ್ ಮಿಮಿಕ್ರಿಗೆ ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸುವ ಬಗ್ಗೆ ವ್ಯಾಪಕ ಪ್ರಚಾರ ನೀಡಲಾಗುವುದು. ವಿದ್ಯಾರ್ಥಿಗಳು, ಯುವಜನರು, ನೌಕರರು, ಅಧಿಕಾರಿಗಳು, ಕಲಾವಿದರು, ಮಹಿಳೆಯರು ಯಾರೇ ಇರಲಿ ಹೆಸರು ನೋಂದಾಯಿಸುವ ಪ್ರತಿಯೊಬ್ಬರಿಗೂ ನಿಯಮಾನುಸಾರ ಅವಕಾಶಕ್ಕೆ ಏರ್ಪಾಡು ಮಾಡಲಾಗುವುದು. ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳ ಸಮನ್ವಯದೊಂದಿಗೆ ಕಾರ್ಯಕ್ರಮದ ಸಿದ್ಧತೆ ನಡೆಸಲಾಗುವುದು ಎಂದು ತಿಳಿಸಿದರು.

ಕನ್ನಡ ಪರ ಹೋರಾಟಗಾರರಾದ ಮಹಾಂತೇಶ ಕೊತಬಾಳ ಅವರು ಮಾತನಾಡಿ, ಕೊಪ್ಪಳ ಜಿಲ್ಲೆಯಲ್ಲಿ ಡಾ.ರಾಜಕುಮಾರ ಅಭಿಮಾನಿಗಳ ಸಂಖ್ಯೆ ದೊಡ್ಡದಿದೆ. ಈ ಕಾರ್ಯಕ್ರಮದಲ್ಲಿ ಡಾ.ರಾಜ್ ಕುಮಾರ ಅಭಿಮಾನಿಗಳು ಸೇರಿದಂತೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ ಎಸ್.ಆರ್ ಪೂಜಾರ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಜಗದೀಶ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕರ್ಣಕುಮಾರ್, ಸಮಾಜ ಕಲ್ಯಾಣ ಇಲಾಖೆಯ ಲೆಕ್ಕ ಅಧಿಕ್ಷಕರಾದ ಎ.ಆಂಜನೇಯ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯವಸ್ಥಾಪಕಾರದ ಉಷಾ ಮುಜುಮ್‌ದಾರ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳಾದ ಎ.ಬಸವರಾಜ, ಸಹಾಯಕ ಕೃಷಿ ನಿರ್ದೇಶಕರಾದ ರೇವಣಪ್ಪ ಮನಗೂಳಿ, ವಾರ್ತಾ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

# ನಾಲಾ ಕಾಮಗಾರಿಯಲ್ಲಿ ಎಲ್ಲಾ ಕೂಲಿಕಾರರು ಕೆಲಸಕ್ಕೆ ಹಾಜರಾಗಿರಿ: ದೇವರಾಜ ಪತ್ತಾರ



ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ :- ಮಹಾತ್ಮಾ ಗಾಂಧಿ ನರೇಗಾ ಯೋಜನೆಯಡಿ ಲೇಬಗೇರಿ ಗ್ರಾಮ ಪಂಚಾಯತಿ ವತಿಯಿಂದ ನಾಲಾ ಹೂಳೆತುವ ಕಾಮಗಾರಿಯಲ್ಲಿನ ಎಲ್ಲಾ ಕೂಲಿಕಾರರು ಕೂಲಿ ಕೆಲಸಕ್ಕೆ ಹಾಜರಾಗುವಂತೆ ತಾಲೂಕ ಪಂಚಾಯತ ಐಇಸಿ ಸಂಯೋಜಕ ದೇವರಾಜ ಪತ್ತಾರ* ಕರೆ ನೀಡಿದರು.

ಲೇಬಗೇರಾ ಗ್ರಾಮ ಪಂಚಾಯತಿಯ ಲೇಬಗೇರಾ ಗ್ರಾಮದ ನಾಲಾ ಹೂಳೆತ್ತುವ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಕಾಮಗಾರಿ ಸ್ಥಳದಲ್ಲಿ ಮಾತನಾಡಿ ಪ್ರತಿ ಮಾನವ ದಿನಕ್ಕೆ 370/- ಕೂಲಿ ನಿಗದಿಪಡಿಸಿದ್ದು ಸಂಪೂರ್ಣವಾಗಿ ಕೂಲಿ ಕೆಲಸ ನಿರ್ವಹಿಸಿ ಪೂರ್ತಿ ಹಣ ಪಡೆಯುವಂತೆ ಕರೆ ನೀಡಿದರು. ಬಿಸಿಲಿನ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದ್ದು ಕೆಲಸ ಜೊತೆಗೆ ಆರೋಗ್ಯ ಕಡೆ ಕಾಳಜಿವಹಿಸಬೇಕೆಂದರು.18 ವರ್ಷ ಮೇಲ್ಪಟ್ಟ ಕುಟುಂಬದ ಸದಸ್ಯರು ಜಾಬಕಾರ್ಡ ಬಳಕೆ ಮಾಡಿಕೊಂಡು ಕೂಲಿ ಕೆಲಸ ಪಡೆಯಲು ಕಡ್ಡಾಯವಾಗಿ ನಮೂನೆ-6 ಸಲ್ಲಿಸಬೇಕೆಂದರು. ಏಪ್ರಿಲ್ ರಿಂದ ಜೂನ್ ವರೆಗೆ 90 ದಿನಗಳ ಕೂಲಿ ಕೆಲಸ ಪಡೆಯಬೇಕೆಂದರು. ಕೂಲಿ ಹಣದಿಂದ ಮಕ್ಕಳ ಶಾಲಾ, ಕಾಲೇಜು ಶುಲ್ಕ ಭರಿಸಲು, ಮಕ್ಕಳ ಸ್ಪರ್ಧಾತ್ಮಕ ಪರೀಕ್ಷೆಗೆ ಶುಲ್ಕ ಹಾಗೂ ಕುಟುಂಬ ನಿರ್ವಹಣೆಗೆ ಅನುಕೂಲವಾಗುತ್ತದೆ ಎಂದರು. ಜಾಬಕಾರ್ಡನಲ್ಲಿರುವ ಕುಟುಂಬದ ಎಲ್ಲ ಸದಸ್ಯರು ಜ-ಏಜಅ ಹೊಂದಿದ ನಂತರವೇ ಎನ್ ಎಂಆರ್‌ನಲ್ಲಿ ಕೂಲಿಕಾರರು ಕೂಲಿ ಕೆಲಸಕ್ಕೆ ಹಾಜರಾಗತಕ್ಕದ್ದು.1&2ನೇ ಹಾಜರಾತಿ ಕಡ್ಡಾಯವಾಗಿರುತ್ತದೆ.

ತಾಂತ್ರಿಕ ಸಹಾಯಕ ಮಂಜುನಾಥ ಮಾದಾಪುರ, ಬೇರ್‌ಫೂಟ್ ಟೆಕ್ನಿಷಿಯನ್ ರವಿಶಂಕರ ಪೂಜಾರ, ಕರವಸೂಲಿಗಾರ ರಾಜಪ್ಪ ಬಂಗಾರಿ, ಗ್ರಾಮ ಕಾಯಕ ಮಿತ್ರ ಅಂಬಮ್ಮ ದೇವದುರ್ಗ, ಗ್ರಾಮ ಪಂಚಾಯತಿ ಸಿಬ್ಬಂದಿಗಳಾದ ನಿಂಗಪ್ಪ, ಈರಪ್ಪ, ಕಾಯಕ ಬಂಧು ಮಂಜುಳಾ ಗೊಲ್ಲರ, ಶಾಶ್ವತ ಗೊಲ್ಲರ, ಗಾಳೆಪ್ಪ ಹರಿಜನ 282 ಕೂಲಿಕಾರರು ಹಾಜರಿದ್ದರು.

# ನಜರಾಪುರದಲ್ಲಿ ಜನಮನ ಸೆಳೆದ ಪಂಚಪಾಂಡವರ ಬಯಲಾಟ



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ತಾಲೂಕಿನ ನಜರಾಪುರ ಗ್ರಾಮದಲ್ಲಿ ದ್ರೌಪದಿ ವಸ್ತ್ರಭರಣ ಬಯಲಾಟ ಬುಧವಾರ ಸಮಾರೋಪಗೊಂಡಿತು. ಗ್ರಾಮದಲ್ಲಿ ಆಯೋಜಿಸಿರುವ ಈ ಪೌರಾಣಿಕ ಬಯಲಾಟಕ್ಕೆ ಸುತ್ತಮುತ್ತಲಿನ ಗ್ರಾಮಗಳ ಜನರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಣ್ತುಂಬಿಕೊಂಡಿದ್ದಾರೆ.

ಪಾಂಡವರು ಹಾಗೂ ಕೃಷ್ಣ ಸೇರಿದಂತೆ ಹಲವು ಪೌರಾಣಿಕ ಪಾತ್ರಗಳ ಅಭಿನಯ, ಭರ್ಜರಿ ವೇಷಭೂಷಣ, ಸಂಗೀತ ಮತ್ತು ಸಂಭಾಷಣೆಗಳು ಪ್ರೇಕ್ಷಕರನ್ನು ಆಕರ್ಷಿಸಿವೆ.

ಗ್ರಾಮೀಣ ಭಾಗದಲ್ಲಿ ಇಂತಹ ಜನಪದ ಆಟಗಳು ದಿನೇದಿನೇ ಮರೆಯಾಗುತ್ತಿದ್ದು, ಇವುಗಳನ್ನು ಉಳಿಸಿ ಬೆಳೆಸಬೇಕಾದ ಅಗತ್ಯ ಇದೆ ಎಂದು ಗ್ರಾಮದ ಹಿರಿಯರು ಅಭಿಪ್ರಾಯಪಟ್ಟರು.

ಪೌರಾಣಿಕ ನಾಟಕಗಳು ಇಂದಿನ ಯುವ ಪೀಳಿಗೆಗೆ ಸಂಸ್ಕೃತಿ, ಮೌಲ್ಯಗಳು ಮತ್ತು ಧರ್ಮದ ಕುರಿತು ಅರಿವು ಮೂಡಿಸುವುದರ ಜೊತೆಗೆ ಉತ್ತಮ ಪ್ರೇರಣೆಯನ್ನೂ ನೀಡುತ್ತವೆ ಎಂದು ನಾಟಕದ ಮಾಸ್ಟರ್ ಆಗಿರುವ ಶರಣಪ್ಪ. ಬಿ ಹೇಳಿದರು.

ಇಂತಹ ಬಯಲಾಟಗಳು ಗ್ರಾಮೀಣ ಸಂಸ್ಕೃತಿಯ ಪ್ರತೀಕವಾಗಿದ್ದು, ಮುಂದಿನ ತಲೆಮಾರಿಗೆ ಪರಿಚಯಿಸುವ ನಿಟ್ಟಿನಲ್ಲಿ ಇವುಗಳನ್ನು ಹೆಚ್ಚಾಗಿ ಆಯೋಜಿಸಬೇಕು ಎಂಬ ಅಭಿಪ್ರಾಯವೂ ತಬಲಾ ಮಾಸ್ಟರ್ ಭೀಮಶಪ್ಪ , ಹಾರ್ಮೋನಿಯಂ ಮಾಸ್ಟರ್ ಮಹೇಂದ್ರ ಬಂಟು ಅವರ ಅಭಿಪ್ರಾಯ.

# ಮಕ್ಕಳಿಗೆ ಬೇಸಿಗೆಯಲ್ಲಿ ಶಿಬಿರ ಅವಶ್ಯ: ಜಮಾದಾರ

• ಮಲ್ಲಮ್ಮ ನುಡಿ ವಾರ್ತೆ, ಯಾದಗಿರಿ



ಜಿಲ್ಲೆಯಲ್ಲಿ ಮಕ್ಕಳಿಗೆ ಬೇಸಿಗೆ ಸಮಯದಲ್ಲಿ ಇಂತಹ ಶಿಬಿರಗಳು ತುಂಭ ಅವಶ್ಯಕತೆ ಇದೆ ಎಂದು ರಾಜ್ಯ ಬಾಲ ಭವನ ಸೊಸೈಟಿ ಉಪಾಧ್ಯಕ್ಷ ಅನಿಲಕುಮಾರ ಜಮಾದಾರ ರವರು ನಗರದ ಜಿಲ್ಲಾ ಬಾಲ ಭವನದಲ್ಲಿ ನಡೆದ ರಾಜ್ಯ ಬಾಲ ಭವನ ಸೊಸೈಟಿ, ಬೆಂಗಳೂರು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲ ಭವನ ಯಾದಗಿರಿ ವತಿಯಿಂದ ಜಿಲ್ಲೆಯಲ್ಲಿ 05 ರಿಂದ 16 ವರ್ಷದ ಮಕ್ಕಳಿಗೆ ಜಿಲ್ಲಾ ಮಟ್ಟದಲ್ಲಿ ಬೇಸಿಗೆ ಶಿಬಿರ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಮಕ್ಕಳಿಗೆ ಸೃಜನಾತ್ಮಕ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳಾದ ಚಿತ್ರಕಲೆ, ಕರಕುಶಲ, ನಾಟಕ, ನೃತ್ಯ, ಯೋಗ, ಕರಾಟೆ, ಮಲ್ಲಕಂಭ, ಪ್ರಕೃತಿ ಪರಿಸರ, ಓದುವ ಕೌಶಲ್ಯ ಕುರಿತು 15 ದಿನದ ಶಿಬಿರವನ್ನು ನಡೆಸಲಾಯಿತು.

ಇವತ್ತಿನ ದಿನಗಳಲ್ಲಿ ಮಕ್ಕಳಿಗೆ ಶಾಲೆಯ ಪರಿಕ್ಷೆಗಳು ಮುಕ್ತಾಯ ಆದಮೇಲೆ ಮಕ್ಕಳನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಪಾಲಕರು ತರಬೇತಿ ಶುಲ್ಕ ನೀಡುವುದರ ಮುಂಖಾತರ ಮಕ್ಕಳನ್ನು ಕೋಚಿಂಗ್ ಕ್ಲಾಸ ಸೇರಿಸಿಬಿಡುತ್ತಾರೆ ಆದರೆ ಮಕ್ಕಳಿಗೆ ಓದುವದರ ಜೋತೆಗೆ ಮಕ್ಕಳ ಪಠ್ಯೇತರ ಚಟುವಟಿಕೆಗಳು ತುಂಭ ಅವಶ್ಯಕತೆ ಇದೆ ಜಿಲ್ಲೆಯಲ್ಲಿ ಬಿಸಿಲಿನ ತಾಪಮಾನ ಹೆಚ್ಚಿರುವುದರಿಂದ ಮಕ್ಕಳು ಇಂತಹ ಪಠ್ಯೇತರ ಚಟುವಟಿಕೆಯಲ್ಲಿ ಭಾಗವಹಿಸಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಯಾದಗಿರಿ ಲವೀಶ್ ಒರಡಿಯಾ ರವರು ಮಾತನಾಡಿ ಬೇಸಿಗೆ ದಿನಗಳಲ್ಲಿ ಮಕ್ಕಳಿಗೆ ಶಿಬಿರವನ್ನು ಆಯೋಜನೆ ಮಾಡಿ ಜಿಲ್ಲೆಯಲ್ಲಿರುವ ಮಕ್ಕಳಿಗೆ ಅನುಕೂಲವಾಗುವಂತೆ ಅವಶ್ಯವಿರುವ ಚಟುವಟಿಕೆಗಳನ್ನು ಚಿತ್ರಕಲೆ, ನೃತ್ಯ, ಮಲ್ಲಕಂಭ ಈಜು ಇತರೆ ತರಬೇತಿಯನ್ನು ನೀಡುತ್ತಿದ್ದು, ಜಿಲ್ಲಾ ಬಾಲ ಭವನ ಕಾರ್ಯಕ್ರಮಗಳು ಗ್ರಾಮೀಣ

ಭಾಗದ ಮಕ್ಕಳಿಗೆ ಅನೂಕುಲವಾಗುವಂತೆ ವಿವಿಧ ಕಾರ್ಯಕ್ರಮಗಳು ಆಯೋಜನೆ ಮಾಡಲಾಗುತ್ತದೆ ಶಿಭಿರದಲ್ಲಿ ಭಾಗವಹಿಸಿದ ಮಕ್ಕಳು ತುಂಭ ಸಂತೋಶದಿಂದ ತಮ್ಮ ಕಲೆಯನ್ನು ಗುರುತಿಸಲು ಸದುಪಯೋಗ ಮಾಡಿಕೊಳ್ಳಿ ಎಂದು ಮಲ್ಲಕಂಭ ಚಾಲನೆ ನೀಡುವುದರ ಮುಂಖಾತರ ಕಾರ್ಯಕ್ರಮ ಉದ್ಗಾಟಿಸಿ ಮಾತನಾಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ತಿಪ್ಪಣ್ಣ ಸಿರಸಗಿ ರವರು ಮಾತನಾಡಿ 15 ದಿನದ ಬೇಸಿಗೆ ಶಿಬಿರದಲ್ಲಿ ಜಿಲ್ಲೆಯ ಸುತ್ತ ಮುತ್ತ ಹಳ್ಳಿಗಳಿಂದ ಭಾಗವಹಿಸಿದ್ದಿರಿ ತುಂಭ ಸಂತೋಷಕರವಾಗಿದ್ದು, ಯಾಕಂದರೆ ಮಕ್ಕಳು ತಮ್ಮ ಆಟ ಓಟಗಳು ಮರೆತು ಹೋಗತ್ತಿದ್ದಾರೆ, ಇತ್ತಿಚಿನ ದಿನಗಳಲ್ಲಿ ಮಕ್ಕಳು ಮೋಬೈಲ್ ಬಳಸುವುದರಲ್ಲಿ ದಿನ್ಯ ನಿತ್ಯ ತಮ್ಮ ಸಮಯವನ್ನು ವ್ಯರ್ಥ ಮಾಡುತ್ತಿದ್ದಾರೆ ಬೇಸಿಗೆಯಲ್ಲಿ ಮಕ್ಕಳು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸದರೆ ತಮ್ಮ ಆತ್ಮ ವಿಶ್ವಾಸ ಹೆಚ್ಚಿಸುತ್ತದೆ ಮತ್ತು ತಾವುಗಳ ವಿವಿಧ ತಮ್ಮ ಕಲೆಗಳನ್ನು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಿಂದ ಗುರುತಿಸಲು ಸಾದ್ಯವಾಗುತ್ತದೆ ಎಂದು ಮಕ್ಕಳಿಗೆ ಮನವರಿಕೆ ಮಾತುಗಳನ್ನು ಹೇಳಿದರು.

ಸಹಾಯಕ ನಿರ್ದೇಶಕರು, ಜಿಲ್ಲಾ ಯುವಜನ ಮತ್ತು ಸೇವಾ ಕ್ರೀಡಾ ಇಲಾಖೆ ಯಾದಗಿರಿ ರಾಜು ಭಾವಿಹಳ್ಳಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಶ್ರೀಮತಿ ಸಾವಿತ್ರಿ ಗುಗ್ಗರಿ, ಅಧ್ಯಕ್ಷರು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಯಾದಗಿರಿ ದಿನೇಶ್ ಕುಮಾರ, ಸಹಾಯಕ

ಶಿಶುಅಭಿವೃದ್ಧಿ ಯೋಜನಾಧಿಕಾರಿಗಳು ನರೇಂದ್ರರೆಡ್ಡಿ,

ಜಿಲ್ಲಾ ಸಂಯೋಜಕರು ಜಿಲ್ಲಾ ಬಾಲ ಭವನ ಯಾದಗಿರಿ ಅನಿಲಕುಮಾರ, ಬೇಸಿಗೆ ಶಿಬಿರದರ ತರಬೇತಿಯ ಸಂಪನ್ಮೂಲ ವ್ಯಕ್ತಿಗಳು ದೇವಿಂದ್ರಪ್ಪ, ಶ್ರೀಮತಿ ಅಶ್ವಿನಿ, ಶ್ರೀಮತಿ ನಾಗರತ್ನ, ರವಿಕುಮಾರ, ಪ್ರಶಾಂತಕುಮಾರ ಮುಂತಾದವರು ಇದ್ದರು.

# ಇನ್ನೊಬ್ಬರ ಕಣ್ಣೀರು ವರೆಸುವುದೇ ಬಸತತ್ವದ ಮುಖ್ಯಸಾರ: ನಾಡೋಜ ಡಾ। ಪಟ್ಟದ್ದೇವರು




• ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ

ಇನ್ನೊಬ್ಬರ ಕಣ್ಣೀರು ವರೆಸುವುದೇ ಬಸತತ್ವದ ಮುಖ್ಯಸಾರವಾಗಿದೆ ಎಂದು ಹಿರೇಮಠ ಸಂಸ್ಥಾನದ ಹಿರಿಯ ಸ್ವಾಮೀಜಿ ನಾಡೋಜ ಡಾ। ಬಸವಲಿಂಗ ಪಟ್ಟದ್ದೇವರು ಹೇಳಿದರು. ಪಟ್ಟಣದ ಚನ್ನಬಸವಾಶ್ರಮದಲ್ಲಿ ಬುಧವಾರ ನಡೆದ ನಾಡೋಜ ಡಾ। ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಉದ್ಘಾಟನಾ ಸಮಾರಂಬದಲ್ಲಿ ಅವರು ಮಾತನಾಡಿದರು. ಮೂರು ಗಂಟೆಗಳ ಕಾಲ ಲಿಂಗಪೂಜೆ ಮಾಡಿಕೊಳ್ಳುವುದಕ್ಕಿಂತ ಇನ್ನೋಬ್ಬರ ಕಣ್ಣೀರು ವರೆಸುವ ಕಾರ್ಯಮಾಡಿದರೆ ಬಸವಣ್ಣನವರ ಅಖಂಡ ಆಶೀರ್ವಾದ ನಮ್ಮಮೇಲಾಗುತ್ತದೆ. ಯಾರಿಗೂ ಬೇಡವಾದವರಿಗೆ ಅಪ್ಪಿಕೊಂಡು ಆಶ್ರಯ ನೀಡಿದರೆ ಬಸವತತ್ವ ಒಪ್ಪುವುದು. ಅಸ್ಪುಶ್ಯತೆಯ ನಿವಾರಣೆಯಲ್ಲಿ ಭಾಲ್ಕಿ ಶ್ರೀಗಳ ಶ್ರಮಸಾಕಷ್ಟಿದೆ, ಅಸ್ಪುಶ್ಯತೆ ತಾಂಡವವಾಡುವ ಸಂದರ್ಭದಲ್ಲಿ ಸವರ್ಣೀಯರ ಬಾವಿಯಲ್ಲಿ, ದಲಿತರಿಗೆ ನೀರು ಕೊಟ್ಟ ಶ್ರೇಯ ಭಾಲ್ಕಿ ಹಿರೇಮಠದ ಲಿಂ.ಡಾ। ಚನ್ನಬಸವ ಪಟ್ಟದ್ದೇವರಿಗೆ ಸಲ್ಲುತ್ತದೆ. ದೀನ ದಲಿತರಿಗೆ ಲಿಂಗ ದೀಕ್ಷೆ ಇತ್ತು, ಸಮ ಸಮಾಜ ನಿರ್ಮಿಸುವಲ್ಲಿ ಭಾಲ್ಕಿ ಮಠದ ಪಾತ್ರ ಬಹುಮುಖ್ಯವಾಗಿದೆ ಎಂದು ಹೇಳಿದರು. ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಸದ ಸಾಗರ ಖಂಡ್ರೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ರಾಷ್ಟ್ರಾಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗ್ರಂಥ ಲೋಕಾರ್ಪಣೆ ಮಾಡಿ ಮಾತನಾಡಿದರು. ಜಗದ್ಗುರು ಡಾ। ತೋಂಟದ ಸಿದ್ದರಾಮ ಮಹಾಸ್ವಾಮಿಗಳು ಗದದ–ಡಂಬಳ ದಿವ್ಯ ಸನ್ನಿದಾನವಹಿಸಿ ಮಾತನಾಡಿದರು.

ರಾಜ್ಯಪಾಲ ಥಾವರಚಂದ ಗೆಹ್ಲೋಟ್ ಪಟ್ಟದ್ದೇವರಿಗೆ ಸನ್ಮಾನಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ, ಬೀದರ ದಕ್ಷಿಣ ಕ್ಷೇತ್ರದ ಶಾಸಕ ಡಾ। ಶೈಲೇಂದ್ರ ಬೆಲ್ದಾಳೆ, ಮಾಜಿ ಶಾಸಕ ಪ್ರಕಾಶ ಖಂಡ್ರೆ, ಸಚಿವ ರಹೀಂ ಖಾನ ಉಪಸ್ಥಿತರಿದ್ದರು. ಅನುಭವ ಮಂಟಪ ಸಂಸ್ಕೃತಿ ವಿದ್ಯಾಲಯದ ವಿದ್ಯಾರ್ಥಿಗಳು ಬಸವಗೀತೆ ಹಾಡಿದರು. ಸಾಗರ ಖಂಡ್ರೆ ಸ್ವಾಗತಿಸಿದರು. ಬಾಬುವಾಲಿ ನಿರೂಪಿಸಿದರು. ಶಶಿಧರ ಕೋಸಂಬೆ ವಂದಿಸಿದರು.

# ಬಸವ ಜ್ಯೋತಿ ಸಮರ್ಪಣೆ ಅಮೃತ ಮಹೋತ್ಸವದ ಭಕ್ತಿ ಸಂಗಮ



• ಮಲ್ಲಮ್ಮ ನುಡಿ ವಾರ್ತೆ, ಕಮಲನಗರ

ನಾಡೋಜ ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರ 75ನೇ ಅಮೃತ ಮಹೋತ್ಸವದ (ಅಮೃತ ನಮನ) ಅಂಗವಾಗಿ ನಡೆದ ಕಾರ್ಯಕ್ರಮವು ಅತ್ಯಂತ ವೈಭವದಿಂದ ಜರುಗಿತು.

ಈ ಐತಿಹಾಸಿಕ ಸಂದರ್ಭವನ್ನು ಸ್ಮರಣೀಯವಾಗಿಸಲು ವಿವಿಧ 75 ಹಳ್ಳಿಗಳಿಂದ ಭಕ್ತರು ಪಾದಯಾತ್ರೆಯ ಮೂಲಕ ಭಕ್ತಿಭಾವದಿಂದ 75 ಬಸವ ಜ್ಯೋತಿಗಳನ್ನು ತಂದು ಶ್ರೀ ಚನ್ನಬಸವಾಶ್ರಮಕ್ಕೆ ಸಮರ್ಪಿಸಿದರು.

ಈ ಪವಿತ್ರ ಜ್ಯೋತಿ ಯಾತ್ರೆಯಲ್ಲಿ ಕಮಲನಗರ ತಾಲೂಕಿನ ಖೇಡ ಖೇಡ ಬಳತ, ಹೊಳಸಮುದ್ರ, ಮುಧೋಳ(ಬಿ) ಹಾಗೂ ಇನ್ನಿತರ ಗ್ರಾಮದ ಭಕ್ತರು ಉತ್ಸಾಹದಿಂದ ಭಾಗವಹಿಸಿದ್ದರು.

ಗ್ರಾಮದಿಂದ ಹೊತ್ತು ತಂದ ಬಸವ ಜ್ಯೋತಿಯನ್ನು ಪೂಜ್ಯರಿಗೆ ಅರ್ಪಿಸುವ ಮೂಲಕ ತಮ್ಮ ಭಕ್ತಿಯನ್ನು ಮೆರೆದರು.

# ಮಹಿಳಾ ವಿರೋಧಿ ಪಕ್ಷಗಳಿಗೆ ತಕ್ಕ ಪಾಠ : ನಾಗರತ್ನ ಮೂರ್ತಿ




• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ತರಲು ಉದ್ದೇಶಿಸಿದ್ದ ಮಹಿಳಾ ಮೀಸಲಾತಿಗೆ ಸೊಲಾಗುವಂತೇ ನೋಡಿಕೊಂಡ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ನಡೆಯನ್ನು ಖಂಡಿಸಿ ಜಾತ್ಯಾತೀತ ಜನತಾ ದಳದ ಜಿಲ್ಲಾ ಮಹಿಳಾ ಘಟಕದ ನೇತೃತ್ವದಲ್ಲಿ ಬುಧವಾರ ನಗರದಲ್ಲಿ ಬೃಹತ್ ಪ್ರತಿಭಟನೇ ನಡೆಯಿತು. ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ನಾಗರತ್ನ ಮೂರ್ತಿ ಅನಪುರ ನೇತೃತ್ವದಲ್ಲಿ ಜಿಲ್ಲೆಯ ಎಲ್ಲೆಡೆಯಿಂದ ಸಾವಿರಾರು ಸಂಖ್ಯೆಯ ಎಲ್ಲಿ ಆಗಮಿಸಿದ್ದ ಮಹಿಳಾ ಕಾರ್ಯಕರ್ತರು ಇಲ್ಲಿನ ನೇತಾಜಿ ಸರ್ಕಲ್‌ನಲ್ಲಿ ಜಮಾಯಿಸಿ ಕಾಂಗ್ರೆಸ್ ವಿರುದ್ಧ ಘೋಷಣೆ ಕೂಗಿದರು. ಈ ವೇಳೆ ಮಾತನಾಡಿದ ಅನಪುರ, ದೇಶದ ಮಹಿಳೆಯರಿಗೆ ರಾಜಕೀಯವಾಗಿ ಮೀಸಲು ಒದಗಿಸಲು ಜಾರಿ ಮಾಡಲು ಉದ್ದೇಶದಿಂದ ಮಂಡಿಸಲಾಗಿದ್ದ ಬಿಲ್ ಉದ್ದೇಶಪೂರ್ವಕವಾಗಿ ಸೋಲಿಸಿದ್ದು ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು. ಇದರಿಂದಾಗಿ ಮಹಿಳೆಯರ ಬಗ್ಗೆ ಅವರಿಗಿರುವ ನಿಜಬಣ್ಣ ಈಗ ಬಯಲಾಗಿದೆ ಎಂದು ದೂರಿದರು. ಮಾಜಿ ಪ್ರಧಾನಿ ದೇವೇಗೌಡರು ಸಹ ಇದನ್ನು ತರಲು ಮುಂದಾಗಿದ್ದಾಗ ಆಗಲು ಇದೇ ಕುತಂತ್ರ ಬುದ್ದಿ ಉಪಯೋಗಿಸಿದ್ದರು. ಅವರಿಗೆ ಮಹಿಳೆಯರು ರಾಜಕೀಯವಾಗಿ ಮುಂದೇ ಬರುವ ಉದ್ದೇಶವಿಲ್ಲ ಎಂದು ಅನಪುರ ಜರಿದರು ದೇಶದಲ್ಲಿ ಗಂಡು ಮತ್ತು ಹೆಣ್ಣು ಸಮ ಸಂಖ್ಯೆಯಲ್ಲಿ ಇದ್ದೇವೆ. ಆದರೇ ರಾಜಕೀಯವಾಗಿ ಶೇ.33ರಷ್ಟು ಮೀಸಲು ಎಂದೋ ಸಿಗಬೇಕಿತ್ತು. ಆದರೆ ಕಾಂಗ್ರೆಸ್ ಪಕ್ಷದ ಕೆಟ್ಟ ಮನಸ್ಥಿತಿಯಿಂದಾಗಿ ಮತ್ತು ಅದಕ್ಕೆ ಬೆಂಬಲಿಸುವ ಕೆಲವು ಪಕ್ಷಗಳಿಂದ ಇದಕ್ಕೆ ಹಿನ್ನಡೆಯಾಗುತ್ತಿದೆ. ಕಾರಣ ಮುಂದಿನ ದಿನಗಳಲ್ಲಿ ಇದಕ್ಕೇ ಜನರು ತಕ್ಕಪಾಠ ಕಲಿಸಲಿದ್ದಾರೆಂದರು. ಪಕ್ಷದ ಯುವ ಮುಖಂಡೆ ಪರಿಮಳ ಪಾಟೀಲ ಚಾಮನಳ್ಳಿ ಮಾತನಾಡಿ, ಕಳೆದ 70ವರ್ಷಗಳಿಂದಲ್ಲೂ ಕಾಂಗ್ರೆಸ್ ಪಕ್ಷ ಮಹಿಳೆಯರ ವಿರೋಧಿಯಾಗಿದ್ದು, ಈಗ ಮೀಸಲಾತಿಗೆ ಸೋಲಿಸುವ ಮೂಲಕ ಮತ್ತೊಮ್ಮೆ ಅದನ್ನು ಸಾಬಿತು ಮಾಡಿದೆ ಎಂದರು. ರಾಜ್ಯದಲ್ಲಿ ಗ್ಯಾರಂಟಿ ಹೆಸರಲ್ಲಿ ಮಹಿಳೆಯರಿಗೆ ಕೆಲವು ಸೌಲತ್ತುಗಳನ್ನು ನೀಡುವ ಮೂಲಕ ನಮ್ಮ ಆತ್ಮಸ್ಥೈರ್ಯ ಕಡಿಮೆ ಮಾಡುತ್ತಿದ್ದಾರೆ. ಇದನ್ನು ಮಹಿಳೆಯರು ಅರ್ಥ ಮಾಡಿಕೊಂಡು ಬರುವ ದಿನಗಳಲ್ಲಿ ಮಹಿಳಾ ಮೀಸಲಾತಿ ವಿರೋಧಿಸಿರುವ ಪಕ್ಷಗಳಿಗೆ ತಕ್ಕ ಪಾಠ ಕಲಿಸಬೇಕೆಂದರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿ ಕಚೇರಿಯ ಅಪರ ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದವರು.

ಶಾರದಾ ಕಡೇಚೂರ ಗುರುಮಠಕಲ್, ಜಯಶ್ರೀ ಪೋಲಿಸ್ ಪಾಟೀಲ್ ಗುರುಮಠಕಲ್, ನರ್ಮದಾ ಅವಂಗಪೂರ ಗುರುಮಠಕಲ್, ಪರಿಮಳ ಪಾಟೀಲ್ ಚಾಮನಹಳ್ಳಿ, ಅಶ್ವಿನಿ ಹೊಸಮನಿ ಯಡ್ಡಳ್ಳಿ, ಸಾವಿತ್ರಮ್ಮ ಯಡ್ಡಳ್ಳಿ, ವಿಜಯಲಕ್ಷ್ಮಿ ಹತ್ತಿಕುಣಿ, ಇಂದಿರಾ ಕೊಳ್ಳಿ ಹೊನಗೇರಾ, ಶಶಿಕಲಾ ಬಿರಾದಾರ ಹುಣಸಗಿ, ಸಂಗೀತ ಚವ್ಹಾಣ ಚಾಮನಹಳ್ಳಿ ತಾಂಡಾ, ಅನಸೂಯಾ ದಂತಾಪೂರ, ಸಿಂದಿಂಗಮ್ಮ ಯಲ್ಲೇರಿ, ಸುಭಾಶ್ಚಂದ್ರ ಕಟಕಟಿ ಹೊನಗೇರಾ, ವಿಶ್ವನಾಥ್ ಸಿರವಾರ, ಬಂದಪ್ಪ ಅರಳಿ, ಮಲ್ಲನಗೌಡ ಹಳಮನಿ ಕೌಳೂರ, ಅಜಯ್ ರೆಡ್ಡಿ ಯಲ್ಲೇರಿ, ದೇವಿಂದ್ರಪ್ಪ ಸುರಪೂರ, ಕುಮಾರ್ ಗೌಡ ಹುಣಸಗಿ, ಶರಣಗೌಡ ಆರ್ ಹೊಸಳ್ಳಿ, ಈಶ್ವರ ರಾಠೋಡ, ಜಯೇಂದ್ರ ಚೌವ್ಹಾಣ, ಯಂಕೋಬಾ ಕಂಚಗಾರಹಳ್ಳಿ, ಮಲ್ಲಿಕಾರ್ಜುನ ಮರಂಕಲ್, ಧರ್ಮಶ್ ಟಿ.ವಡಗೇರಾ ಭಾಗವಹಿಸಿದ್ದರು.

## ಸುಡುವ ಬಿಸಿಲಲ್ಲಿ ೪೦ನಿಮಿಷ ಪ್ರತಿಭಟನೆ

ಬೆಳಗ್ಗೆ 10ರ ಸುಮಾರಿಗೆ ನೇತಾಜಿ ಸರ್ಕಲ್ ಬಳಿ ಜಮಾಯಿಸಿದ ಮಹಿಳಾ ಕಾರ್ಯಕರ್ತರು ಹಾಗೂ ಪಕ್ಷದ ಜಿಲ್ಲಾಧ್ಯಕ್ಷ ಸುಭಾಷಚಂದ್ರ ಕಟಕಟಿ ಹಾಗೂ ಮುಖಂಡರು 40 ನಿಮಿಷ ಪ್ರತಿಭಟನೆ ನಡೆಸಿದರು. ಇದರಿಂದಾಗಿ ಅಲ್ಪ ಹೊತ್ತು ಸಂಚಾರಕ್ಕೆ ತೊಂದರೆ ಆಗಿತ್ತು. ಆದರೇ ಪ್ರತಿಭಟನೆಗೆ ಬಿಗಿ ಬಂದೋಬಸ್ತ ನೀಡಿದ ಪೊಲೀಸ್ ಅಧಿಕಾರಿ, ಸಿಬ್ಬಂದಿ ಪಕ್ಕದ ರಸ್ತೆಯಿಂದ ವಾಹನಗಳಿಗೆ ಬಿಡುವ ಮೂಲಕ ಸುಗಮ ವ್ಯವಸ್ಥೆ ಮಾಡಿದರು. ಈ ವೇಳೆ ಸರ್ಕಲ್ ಸುತ್ತಲ್ಲಿ ಜೆಡಿಎಸ್ ಧ್ವಜಗಳನ್ನು ಕೈಯಲ್ಲಿ ಹಿಡಿದ ಮಹಿಳಾ ಕಾರ್ಯಕರ್ತರು ಜೆಡಿಎಸ್, ದೇವೇಗೌಡ, ಕೇಂದ್ರ ಮಂತ್ರಿ ಕುಮಾರಸ್ವಾಮಿ ಹಾಗೂ ಶಾಸಕ ಶರಣಗೌಡ ಕಂದಕೂರ ಪರ ಘೋಷಣೆಗಳನ್ನು ಕೂಗಿದರು. ಸುಡುವ ಬಿಸಿಲು ಲೆಕ್ಕಿಸದೇ ಮಹಿಳೆಯರು ತುಂಬಾ ಉತ್ಸಾಹದಲ್ಲಿ ಭಾಗಹಿಸುವ ಮೂಲಕ ಹೋರಾಟಕ್ಕೆ ಶಕ್ತಿ ತುಂಬಿದರು.

# 27 ಕ್ಕೆ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಕಾರ್ಮಿಕರ ಭವಿಷ್ಯ ಸಂಸ್ಥೆ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ ಎಂಬ ಅಂಶದಡಿ ಏ.27 ರಂದು ಬೆಳಿಗ್ಗೆ 09 ರಿಂದ ಸಂಜೆ 06 ಗಂಟೆಯವರೆಗೆ ಕುಡಿತಿನಿ ಸಮೀಪದ ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರ(ಕೆಪಿಸಿಎಲ್) ಸಭಾಂಗಣದಲ್ಲಿ 'ನಿಧಿ ಆಪ್ಕೆ ನಿಕಟ್' ಕಾರ್ಯಕ್ರಮ ಏರ್ಪಡಿಸಲಾಗಿದೆ.ಕಾರ್ಯಕ್ರಮದಲ್ಲಿ ಕಾರ್ಮಿಕರ, ಪಿಂಚಣಿದಾರರ ಮತ್ತು ಉದ್ಯೋಗದಾತರರ ಕುಂದು ಕೊರತೆ ಪರಿಹಾರ, ಮಾಹಿತಿ ವಿನಿಮಯ ಮಾಡಿಕೊಳ್ಳಬಹುದು. ಉದ್ಯೋಗದಾತರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಅರಿವು, ಕಾರ್ಮಿಕರಿಗೆ, ಉದ್ಯೋಗದಾತರಿಗೆ, ಪ್ರಧಾನ ಉದ್ಯೋಗದಾತರಿಗೆ ಮತ್ತು ಗುತ್ತಿಗೆದಾರರಿಗೆ ಲಭ್ಯವಿರುವ ಆನ್‌ಲೈನ್ ಸೇವೆಗಳ ಮಾಹಿತಿ, ಹೊಸ ಉಪಕ್ರಮಗಳು ಹಾಗೂ ಸುಧಾರಣೆ ಕ್ರಮಗಳ ಕುರಿತು ಮಾಹಿತಿ ಸಹ ಒದಗಿಸಲಾಗುತ್ತದೆ.ಹಾಗಾಗಿ ಕಾರ್ಮಿಕರು, ಪಿಂಚಣಿದಾರರು, ಉದ್ಯೋಗದಾತರು ಏ.27 ರಂದು ನಡೆಯುವ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಪ್ರಾದೇಶಿಕ ಭವಿಷ್ಯ ನಿಧಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಆಯುಕ್ತ ಕೆ.ವಿ ಪ್ರವೀಣ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಗಣ್ಣ ದೂರನಹಳ್ಳಿಗೆ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ, ಯಾದಗಿರಿ

ಜೆ.ಎಸ್.ಎಸ್ ಮಹಾವಿದ್ಯಾಪೀಠ ಮೈಸೂರು ಅವರ ಆಶ್ರಯದಲ್ಲಿ ಪ್ರತಿ ವರ್ಷ ನೀಡುವ ವಚನ ಚಿತ್ರರಚನಾ ಪಿತಾಮಹ ಎಂದೇ ಖ್ಯಾತರಾಗಿದ್ದ ಎಂ ವೀರಪ್ಪನವರ ಹೆಸರಿನ ರಾಜ್ಯಮಟ್ಟದ ದತ್ತಿ ಪ್ರಶಸ್ತಿಗೆ ಯಾದಗಿರಿ ಜಿಲ್ಲೆಯ ಚಿತ್ರಕಲಾವಿದ ಸಂಗಣ್ಣ ಮಲಗೊಂಡ ದೋರನಹಳ್ಳಿ ಅವರು ಪ್ರಶಸ್ತಿಯನ್ನು ಸ್ವೀಕರಿಸಿದ್ದಾಕ್ಕಾಗಿ ಸಗರನಾಡು ಸೇವಾ ಪ್ರತಿಷ್ಠಾನ ಸುರಪುರ ವತಿಯಿಂದ ಇಂದು ದೊರನಹಳ್ಳಿಯ ಅವರ ನಿವಾಸದಲ್ಲಿ ಅಭಿನಂದಿಸಲಾಯಿತು,

ಈ ಸಂದರ್ಭದಲ್ಲಿ ಸನ್ಮಾನಿಸಿ ಮಾತನಾಡಿದ ಪ್ರತಿಷ್ಠಾನ ಅಧ್ಯಕ್ಷ ಪ್ರಕಾಶ ಅಂಗಡಿ ಕನ್ನಳ್ಳಿ ಮಾತನಾಡಿ ಎಂ ವೀರಪ್ಪನವರು ಕರ್ನಾಟಕದ ಚಿತ್ರಕಲೆ ಹಾಗೂ ಕರಕುಶಲ ಕ್ಷೇತ್ರಕ್ಕೆ ನೀಡಿದ ಕೊಡುಗೆಯ ಸ್ಮರಣೆಗಾಗಿ ಅವರ ಮಕ್ಕಳು ಮೊಮ್ಮಕ್ಕಳು ಸ್ಥಾಪಿಸಿರುವ ದತ್ತಿ ಹಣದಲ್ಲಿ ಪ್ರತಿ ವರ್ಷ ಒಬ್ಬ ಕಲಾವಿದರಿಗೆ ರಾಜ್ಯಮಟ್ಟದ ಪ್ರಶಸ್ತಿಯನ್ನು ನೀಡುತ್ತಾ ಬಂದಿದ್ದು

ಈ ಸಾಲಿನ ಪ್ರಶಸ್ತಿಯು ಯಾದಗಿರಿ ಜಿಲ್ಲೆಯ ಚಿತ್ರಕಲಾವಿದ ಸಂಗಣ್ಣ ದೂರನಹಳ್ಳಿ ಅವರಿಗೆ ಲಭಿಸಿರುವುದು ಜಿಲ್ಲೆಯ ಕಲಾಬಳಗಕ್ಕೆ ಹೆಚ್ಚು ಸಂತಸ ತಂದಿದೆ. ದತ್ತಿ ಪ್ರಶಸ್ತಿಗಳಲ್ಲಿಯೇ ಇದೊಂದು ಮಹತ್ವದ ಪ್ರಶಸ್ತಿಯಾಗಿದ್ದು,ಇದೇ ಮೊದಲು ಬಾರಿಗೆ ಹೈದರಾಬಾದ ಕರ್ನಾಟಕ ಭಾಗದ ಚಿತ್ರ ಕಲಾವಿದರೊಬ್ಬರು ಈ ಪ್ರಶಸ್ತಿಗೆ ಆಯ್ಕೆಯಾಗಿರುವುದು ಸಂತಸದ ಸಂಗತಿಯಾಗಿದೆ,ಇತ್ತೀಚಿಗೆ ಮೈಸೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಪ್ರಶಸ್ತಿ ಪ್ರಧಾನ ಮಾಡಿದರು, ಈ ಸಂದರ್ಭದಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಡಾ. ಎಂ ಎಸ್ ಮೂರ್ತಿ ಪ್ರಮುಖರಾದ

ಡಾ. ಬಿ.ಎಸ್ ಮಂಜುನಾಥ ಸ್ವಾಮಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು ದತ್ತಿ ಪ್ರಶಸ್ತಿಯು 68,000 ನಗದು ಮೊತ್ತ, ಪ್ರಶಸ್ತಿ ಪತ್ರ, ಸ್ಮರಣಿಕೆ,ಫಲ ತಾಂಬೂಲ ನೀಡಿ ಪೂಜ್ಯರು ಗೌರವಿಸಿದ್ದಾರೆ,ಈ ಪುರಸ್ಕಾರಕ್ಕೆ ಬಾಜನರಾದ ಸಂಗಣ್ಣ ದೂರನಳ್ಳಿ ಅವರಿಗೆ ಮುಂದಿನ ದಿನಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಲಭಿಸಲಿ ಎಂದು ಪ್ರಕಾಶ ಅಂಗಡಿ ಕನ್ನೆಳ್ಳಿ ಹಾರೈಸಿದರು, ಈ ಸಂದರ್ಭದಲ್ಲಿ ದೋರನಹಳ್ಳಿ ವಲಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮಹೇಶ ಪತ್ತಾರ ದೊರನಳ್ಳಿ ಸೇರಿದಂತೆ ಇತರರಿದ್ದರು.

# 24 ಕ್ಕೆ ನೇರ ಸಂದರ್ಶನ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಏ.24 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 02 ಗಂಟೆಯವರೆಗೆ ನಗರದ ಹಳೆಯ ತಾಲ್ಲೂಕು ಕಚೇರಿ ಆವರಣದಲ್ಲಿನ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೇರ ಸಂದರ್ಶನ ಏರ್ಪಡಿಸಲಾಗಿದೆ.

ಈ ನೇರ ಸಂದರ್ಶನದಲ್ಲಿ ಎಪ್ಸಿಲಾನ್ ಕಾರ್ಬನ್ ಪ್ರೈ.ಲಿ. ಮತ್ತು ಧ್ರುವ ಸೋಲಾರ್ ಪವರ್ ಕಂಪನಿಗಳು ಭಾಗವಹಿಸಲಿದ್ದು, ಇವರು ತಮ್ಮಲ್ಲಿನ ಖಾಲಿ ಇರುವ ಹುದ್ದೆಗಳನ್ನು ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳುವರು.

ವಿದ್ಯಾರ್ಹತೆ: ಐಟಿಐ (ಫಿಟ್ಟರ್) ಅಥವಾ ಯಾವುದೇ ಪದವಿ ಪೂರ್ಣಗೊಳಿಸಿದ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ.

ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ. ಅಭ್ಯರ್ಥಿಗಳು ತಮ್ಮ ಆಧಾರ್ ಕಾರ್ಡ್ ಪ್ರತಿ, ಸ್ವ-ವಿವರ ಪ್ರತಿ (ಬಯೋಡೇಟಾ) ಗಳೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದೋಗ ವಿನಿಮಯ ಕಚೇರಿ ಅಥವಾ ಮೊ.7619207762, 9663263086, 7676774293, 6360408094 ಗೆ ಕರೆ ಮಾಡಿ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನ ಅಪಚಾರ 23ಕ್ಕೆ ಬೆಂಗಳೂರು ಚಲೋ




• **ಮಲ್ಲಮ್ಮ ನುಡಿ ವಾರ್ತೆ, ಸಿಂಧನೂರು**

ಭಾರತದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಎಂದೆಂದೂ ನಡೆಯದ ಅಪಚಾರ ಏಪ್ರಿಲ್ 23ರಂದು ನಡಿಯುತ್ತಿದೆ. ಹೆಚ್ಚು ಕಡಿಮೆ ಅರ್ಧ ಕೋಟಿ ಜನರ ಮತದಾನದ ಹಕ್ಕನ್ನು ಕಸಿದು ಚುನಾವಣೆ ನಡೆಸಲಾಗುತ್ತಿದೆ. ಸುಪ್ರೀಂ ಕೋರ್ಟು 'ಮಾತಿನಲ್ಲಿ ಚಾಟಿ – ಮಾಡುವುದರಲ್ಲಿ ಸಾಥಿ' ಎಂಬಂತೆ ನಡೆದುಕೊಳ್ಳುತ್ತಿದೆ. ಇದು ಪ್ರಜಾತಂತ್ರಪ್ರೇಮಿಗಳೆಲ್ಲರ ಎದೆಗಳಿಗೆ ಇರಿದಿರುವ ಚೂರಿ ಕೇಂದ್ರಸರ್ಕಾರಮತ್ತುಚುನಾವಣೆ ಆಯೋಗ ಹೊಂದಾಣಿಕೆ ಮಾಡಿಕೊಂಡು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನದ ವಿರುದ್ಧವಾಗಿದೆ ಎಂದು ಎಸ್. ಐ. ಆರ್. ವಿರೋಧಿ ಜಾತ್ಯಾತೀತ ಪಕ್ಷಗಳು ಜನಪರ ಸಂಘಟನೆಗಳು ಒಕ್ಕೂಟದ ಸಂಚಾಲಕ ಬಸವರಾಜ ಬಾದರ್ಲಿ ಹೇಳಿದರು

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿನಡೆಸಿ ಮಾತನಾಡಿದ ಅವರು ಬಂಗಾಳಕ್ಕೆ ಬಂದಿರುವ ಸ್ಥಿತಿ ನಾಳೆ ಕರ್ನಾಟಕ್ಕೂ ಬರಲಿದೆ. ಈಗಾಗಲೇ 13 ರಾಜ್ಯಗಳ 6.5 ಕೋಟಿ ಜನರ ಮತದಾನದ ಹಕ್ಕು ರದ್ದಾಗಿದೆ. ಹಂತಹಂತವಾಗಿ ಇದು ಇಡೀ ದೇಶದ ವಿದ್ಯಮಾನವಾಗಲಿದೆ ಪ್ರಜಾತಂತ್ರ ವ್ಯವಸ್ಥೆಯಿಂದ ಹೊರದಬ್ಬಲ್ಪಟ್ಟಿರುವ ಲಕ್ಷಾಂತರ ಜನರ ಜೊತೆ ಸಾಲಿಡಾರಿಟಿ ವ್ಯಕ್ತಪಡಿಸಿ, ಕರ್ನಾಟಕದಲ್ಲೂ ಇದನ್ನೇ ಮುಂದುವರಿಸಲು ಅವಕಾಶ ನೀಡುವುದಿಲ್ಲ ಎಂದು ಎಚ್ಚರಿ ಅದೇ ದಿನ (ಏಪ್ರಿಲ್ 23) ಕರ್ನಾಟಕದಲ್ಲಿ ಖಖಖ ಅನ್ನು ವಿರೋಧಿಸುತ್ತಿರುವ ಪ್ರಗತಿಪರ ಸಂಘಟನೆಗಳು ಹಾಗೂ ಜಾತ್ಯಾತೀತ ಪಕ್ಷಗಳೆಲ್ಲಾ ಕೂಡಿ ಫ್ರೀಡಂ ಪಾರ್ಕಿನಲ್ಲಿ "ಖಖಖ ವಿರೋಧಿ ಪ್ರತಿಭಟನಾ ಸಮಾವೇಶ"ವನ್ನು ಆಯೋಜಿಸುವ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು. ಸಂದರ್ಭದಲ್ಲಿ ಮಾತನಾಡಿದ ಇನ್ನೋರ್ವ ಸಂಚಾಲಕ ಹಾಗೂ ಸಾಮಾಜಿಕ ಹೋರಾಟಗಾರರು ನಾರಾಯಣ ಬೆಳೆಗುರ್ಕಿ ಅವರು ಈ ಸಮಾವೇಶದಲ್ಲಿ ಭಾಗವಹಿಸಲು ಮತದಾನದ ಹಕ್ಕನ್ನು ಕಳೆದುಕೊಂಡಿರುವ ಬಂಗಾಳದ ಸಂತ್ರಸ್ತರು ಸ್ವಯಂ ಬಂದು ಭಾಗವಹಿಸುತ್ತಿದ್ದಾರೆ.

ಕರ್ನಾಟಕದ ರೈತ, ಕಾರ್ಮಿಕ, ಮಹಿಳಾ, ವಿದ್ಯಾರ್ಥಿ, ಕನ್ನಡಪರ, ನಾಗರೀಕ ಹಕ್ಕು ಹೋರಾಟಗಾರ ಮುಂತಾದ ಸಂಘಟನೆಗಳ ಮುಖ್ಯಸ್ಥರು ಹಾಗೂ ಬಿಜೆಪಿ, ಜೆಡಿಎಸ್ ಹೊರತುಪಡಿಸಿದಂತೆ ಮಿಕ್ಕೆಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಭಾಗವಹಿಸುತ್ತಿದ್ದಾರೆ.

ಇದು ಇಡೀ ಕರ್ನಾಟಕದ ಕೂಗಾಗಿ ಹೊರಹೊಮ್ಮಲಿದೆ. ಈ ಸಮಾವೇಶಕ್ಕೆ ನಮ್ಮ ಜಿಲ್ಲೆಯಿಂದ ನೂರಾರು ಜನರು ಹೋಗಲು ತೀರ್ಮಾನಿಸಿದ್ದೇವೆ. ಸಮಾವೇಶ ಧಿಡೀರಾಗಿಯೋಜನೆಗೊಂಡಿದ್ದ□□ಂದ ಪ್ರಯಾಣದ ವ್ಯವಸ್ಥೆ ಮಾಡಿಕೊಳ್ಳುವುದು ಕಷ್ಟವಾಗಿದೆ. ಆದರೂ ಸಾಧ್ಯವಾದ ವ್ಯವಸ್ಥೆಗಳನ್ನು ಮಾಡಿಕೊಂಡು ಹೊರಟಿದ್ದೇವೆ ಎಂದು ಹೇಳಿದರು


ಈ ಸುದ್ದಿ ತಿಳಿದ ಪ್ರತಿಯೊಬ್ಬ ಸಂವಿಧಾನಪರ ಮಿತ್ರರು ಸಹ ಹೊರಡಲು ತಯಾರಿಗಳನ್ನು ಮಾಡಿಕೊಳ್ಳುತ್ತೇವೆ.

ಬನ್ನಿ, ಬೆಂಗಳೂರಿಗೆ ಹೋಗೋಣ. ಬಂಗಾಳದ ಸಂತ್ರಸ್ತರ ಜನರಿಗೆ "ನಾವೂ ನಿಮ್ಮ ನೋವಿನ ಇದ್ದೇವೆ" ಎಂಬ ಸಂದೇಶ ರವಾನಿಸೋಣ. ಕರ್ನಾಟಕದಲ್ಲಿ ಇದನ್ನು ಪುನಾರವರ್ತನೆ ಮಾಡ ಬಿಡುವುದಿಲ್ಲ ಎಂದು ಚುನಾವಣಾ ಆಯೋಗಕ್ಕೆ ಕಡಕ್ ಸಂದೇಶ ಸಹ ನೀಡಿ ಬರೋಣ ಎಂದು ಸಿಂಧನೂರು ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂಪ್ರೇರಿತರಾಗಿ ಭಾಗವಹಿಸಿ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ. ಬಾಬರ್ ಪಾಷಾ ಧಣಿ ವಕೀಲರು. ಡಾ. ಅಸ್ಲಾಮ್ ಮಂಜುನಾಥ ಗಾಂಧಿನಗರ. ಹುಸೇನ್ ಸಾಬ್ ಸಂಗ್ರಾಮ್ ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿ ಇದ್ದರು

# ಡಾ.ರಾಜಕುಮಾರ್ ಜಯಂತಿ

## ಅರ್ಥಪೂರ್ಣ ಆಚರಣೆ: ಎಡಿಸಿ ಶಿವಾನಂದ




**ಮಲ್ಲಮ್ಮ ನುಡಿ ವಾರ್ತೆ ರಾಯಚೂರು**

ನಟ ಸಾರ್ವಭೌಮ, ವರನಟ ಡಾ.ರಾಜ್ ಕುಮಾರ್ ಅವರ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಪ್ರತಿ ವರ್ಷದಂತೆ ಈ ವರ್ಷವು ಇದೇ ಏ.24ರಂದು ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ಹೇಳಿದರು. ಏಪ್ರಿಲ್ 24ರ ಮಂಗಳವಾರದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಅಪರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಡಾ.ರಾಜಕುಮಾರ ಜಯಂತಿ ಅರ್ಥಪೂರ್ಣವಾಗಿ ಆಚರಿಸುವ ಕುರಿತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿ ಅವರು ಮಾತನಾಡಿದರು.

ಡಾ.ರಾಜಕುಮಾರ್ ಅಭಿಮಾನಿಗಳನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕು. ವಿಶೇಷ ಉಪನ್ಯಾಸಕರನ್ನು ಕರೆಸಿ ಡಾ. ರಾಜಕುಮಾರ ಅವರ ಜೀವನ ಹಾಗೂ ಸಾಧನೆಗಳ ಕುರಿತು ವಿಶೇಷ ಉಪನ್ಯಾಸ ನೀಡುವಂತಾಗಬೇಕು. ಪ್ರತಿ ವರ್ಷದಂತೆ ಈ ವರ್ಷ ರಾಯಚೂರು ನಗರದ ಕನ್ನಡ ಭವನದಲ್ಲಿ ಏಪ್ರಿಲ್ 24ರ ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ಅಚ್ಚುಕಟ್ಟಾಗಿ ಆಯೋಜನೆ ಮಾಡಬೇಕು ಎಂದರು.

ಅಂದು ಬೆಳಿಗ್ಗೆ ಡಾ. ರಾಜಕುಮಾರ ಅವರ ಭಾವಚಿತ್ರಕ್ಕೆ ಪುಷ್ಪ ನಮನ, ಅವರ ಚಲನಚಿತ್ರಗೀತೆಗಳ ಗಾಯನ, ಡಾ. ರಾಜಕುಮಾರ ಕುರಿತು ಇತರೆ ಕಾರ್ಯಕ್ರಮಗಳನ್ನು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ ರಾಯಚೂರು ಸೇರಿದಂತೆ ಇತರೆ ಡಾ.ರಾಜಕುಮಾರ ಅಭಿಮಾನಿ ಬಳಗ, ಕಲಾ ತಂಡಗಳ ಸಹಯೊಗದೊಂದಿಗೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಇದೇ ಸಂದರ್ಭದಲ್ಲಿ ರಾಯಚೂರಿನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಸುರೇಶ ಜಿ, ವಾರ್ತಾ ಇಲಾಖೆಯ ಸಿಬ್ಬಂದಿಗಳಾದ ಎ.ಪ್ರಕಾಶ್, ರಮೇಶ ಗೌಡೂರು ಜಾಲಹಳ್ಳಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಗಡಿಯಲ್ಲಿ ಕನ್ನಡದ ದೀಪ ಹೊತ್ತಿಸಿದ ಪರಮಪೂಜ್ಯರು




• **ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ**

ನಿಜಾಂನ ಆಳ್ವಿಕೆಯಲ್ಲಿ ಕನ್ನಡ ಉಳಿಸಿ, ಬೆಳೆಸಿದ ಶ್ರೇಯಸ್ಸು ಶತಾಯಷಿ ಡಾ.ಚನ್ನಬಸವಪಟ್ಟದ್ದೇವರಿಗೆ ಸಲ್ಲುತ್ತದೆ ಎಂದು ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ ಹೇಳಿದರು. ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ಹಿರೇಮಠ ಸಂಸ್ಥಾನದ ವತಿಯಿಂದ ಮಂಗಳವಾರ ಆಯೋಜಿಸಿದ್ದ ಶತಾಯಷಿ ಡಾ.ಚನ್ನಬಸವ ಪಟ್ಟದ್ದೇವರ 27ನೆಯ ಸ್ಮರಣೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಗಡಿಭಾಗದಲ್ಲಿ ನಿಜಾಂನ ಆಡಳಿತದಲ್ಲಿ ಉರ್ದು ಭಾಷೆಯ ಪ್ರಾಬಲ್ಯ ಇದ್ದ ಸಂದರ್ಭದಲ್ಲಿ ಪರಮ ಪೂಜ್ಯರು ಹೊರಗಡೆ ಉರ್ದು ನಾಮಫಲಕ ಹಾಕಿ ಒಳಗಡೆ ಕನ್ನಡ ಕಲಿಸಿ ಕನ್ನಡದ ದೀಪ ಹೊತ್ತಿಸಿದರು. ಪೂಜ್ಯರ ತೋರಿದ ದಿಟ್ಟತನ, ಭಾಷಾಭಿಮಾನ ಮತ್ತು ಕನ್ನಡ ಪ್ರೇಮ ಯಾರೊಬ್ಬರು ಮರೆಯಬಾರದು ಎಂದರು.

ಪರಮ ಪೂಜ್ಯರ ಗರಡಿಯಲ್ಲಿ ಬೆಳೆದಿರುವ ಡಾ.ಬಸವಲಿಂಗ ಪಟ್ಟದ್ದೇವರು ಧರ್ಮ ಸೇವೆ ಜತೆಗೆ ಶೈಕ್ಷಣಿಕ ಕ್ರಾಂತಿಗೈದಿದ್ದಾರೆ. ಅವರ ಸೇವೆ ಹೀಗೆ ಮುಂದುವರೆಯಲಿ, ಶತಾಯಷಿಯಾಗಿ ನಮ್ಮೆಲ್ಲರನ್ನು ಸದಾ ಆಶೀರ್ವದಿಸಲಿ ಎಂದು ಹಾರೈಸಿದರು.

ಸಾನ್ನಿಧ್ಯ ವಹಿಸಿದ್ದ ಹಂದಿಗುಂದಿ ಸಿದ್ದೇಶ್ವರ ಮಠದ ಶಿವಾನಂದ ಸ್ವಾಮೀಜಿ, ಡಾ.ಬಸವಲಿಂಗ ಪಟ್ಟದ್ದೇವರು ಅವರು ವಿವಿಧ ಸಮಾಜಪರ ಸೇವೆ ಮೂಲಕ ಮಠಾಧೀಶರಿಗೆ ತಂದು ಕೊಟ್ಟಿದ್ದಾ–ರೆ. ಇಂದಿನ ದಿನಮಾನಗಳಲ್ಲಿ ಮಠಾಧೀಶರಿಗೆ ಗೌರವ ಕಡಿಮೆ ಆಗುತ್ತಿದೆ ಎನ್ನುವ ಆತಂಕದ ನಡುವೆಯು ಕಳೆದ ನಾಲ್ಕು ದಶಕಗಳಿಂದ ಡಾ.ಬಸವಲಿಂಗ ಪಟ್ಟದ್ದೇವರು ಗಂಧದಂತೆ ಬದುಕು ಸವಿದು ಗಡಿಭಾಗವನ್ನು ಬೆಳಗಿಸುವ ಕೆಲಸ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು.

ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿದರು.

ಮೋಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಜಿ ಮಾತನಾಡಿದರು. ದಾವಣಗೆರೆ ವಿರಕ್ತಮಠದ ಬಸವಪ್ರಭು ಸ್ವಾಮೀಜಿ, ಶಂಭುಲಿಂಗೇಶ್ವರ ಸ್ವಾಮೀಜಿ, ಹರ್ಷಾನಂದ ಸ್ವಾಮೀಜಿ, ಅಮೃತಾನಂದ ಸ್ವಾಮೀಜಿ, ಜಗದ್ಗುರು ಗುರುಸಿದ್ಧ ಸ್ವಾಮೀಜಿ, ಡಾ.ಗುರುಬಸವ ಸ್ವಾಮೀಜಿ ನೇತೃತ್ವ ವಹಿಸಿದ್ದರು.

ಈ ಸಂದರ್ಭದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಸಂತೋಷ ಹಾನಗಲ್, ಹಿರಿಯ ಸಾಹಿತಿ ಡಾ.ಕೆ.ರವೀಂದ್ರನಾಥ, ಡಾ.ಸೋಮನಾಥ ಯಾಳವಾರ, ವೀರಶೆಟ್ಟಿ ಬಾವುಗೆ, ಡಾ.ರಘುಶಂಖ ಭಾತಂಬ್ರಾ, ಮಹೇಶ ಬನ್ನಾಳೆ ಇದ್ದರು. ನವಲಿಂಗ ಪಾಟೀಲ್ ನಿರೂಪಿಸಿ, ವಂದಿಸಿದರು.

> “ಭಾಲ್ಕಿಯ ಹಿರೇಮಠ ಸಂಸ್ಥಾನದಲ್ಲಿ ನಿರಂತರ ದಾಸೋಹ ನಡೆಯುತ್ತದೆ. ಇದು ಉಳಿದ ಎಲ್ಲ ಮಠಗಳಿಗೂ ಪ್ರೇರಣೆಯಾಗಬೇಕು. ಮಠಗಳು ದಾಸೋಹದ ಮನೆಗಳಾಗಿ ಬಡವರ ಹಸಿವು ನೀಗಿಸುವ ಪ್ರಯತ್ನ ಮಾಡಬೇಕು.
>
> **ಶಿವಾನಂದ ಸ್ವಾಮೀಜಿ, ಸಿದ್ದೇಶ್ವರ ಮಠ ಹಂದಿಗುಂದ**

> “ಶತಾಯಷಿ ಡಾ.ಚನ್ನಬಸವ ಪಟ್ಟದ್ದೇವರು ಮೇರುವ್ಯಕ್ತಿತ್ವದ ಸ್ವಾಮೀಜಿ ಆಗಿದ್ದರು. ಬಸವಣ್ಣವರ ವಿಚಾರಧಾರೆ ಬದುಕಿನುದ್ದಕ್ಕೂ ಪಾಲಿಸಿದರು. ಪರಮ ಪೂಜ್ಯರ ನಡೆ, ನುಡಿ, ಸರಳತೆ ಎಲ್ಲರೂ ಅನುಸರಿಸಬೇಕು.
>
> **ಡಾ.ಸಿದ್ದರಾಮ ಬೆಲ್ದಾಳ ಶರಣರು ಬಸವಯೋಗಾಶ್ರಮ ಕೌಠಾ**

### “ ಗ್ರಂಥಗಳು ಬದುಕಿಗೆ ದಾರಿ ತೋರುತ್ತವೆ: ಚನ್ನಬಸಪ್ಪ

ಉತ್ತಮ ಗ್ರಂಥಗಳು ಓದುಗರಿಗೆ ಮಾರ್ಗದರ್ಶನ ಮಾಡುವ ಜತೆಗೆ ಉತ್ತಮ ಬದುಕಿಗೆ ದಾರಿ ತೋರುತ್ತವೆ ಎಂದು ಬೆಂಗಳೂರಿನ ಹಿರಿಯ ಚಿಂತಕ ಗೊ.ರು. ಚನ್ನಬಸಪ್ಪ ಹೇಳಿದರು. ಗ್ರಂಥಗಳು ಓದುಗರ ಮನಸ್ಸನ್ನು ತಟ್ಟುತ್ತವೆ. ಆ ಮೂಲಕ ಬದುಕನ್ನು ಅರಳಿಸುತ್ತವೆ. ನಡೆಯಲು ದಾರಿ ತೋರುತ್ತವೆ. ಗ್ರಂಥಗಳಿಗೆ ನಮ್ಮನ್ನು ತಿದ್ದುವ ಅದ್ಭುತ ಶಕ್ತಿ ಇದೆ ಎಂದು ಹೇಳಿದರು. ಗ್ರಂಥಗಳ ಅಗಾಧ ಶಕ್ತಿಯ ಅರಿವಿರುವ ಬಸವಲಿಂಗ ಪಟ್ಟದ್ದೇವರು ಗ್ರಂಥಗಳ ಅಧ್ಯಯನ, ರಚನೆ, ಪ್ರಕಾಶನಕ್ಕೆ ಅತಿ ಹೆಚ್ಚಿನ ಮಹತ್ವ ನೀಡಿದ್ದಾರೆ. ನಾವು, ನಮ್ಮ ಸಂಸ್ಕೃತಿ ಅಳಿಯದೆ ಉಳಿಯಬೇಕಾದರೆ ಗ್ರಂಥ ಬರೆಯಬೇಕು ಎನ್ನುತ್ತಾರೆ ಜ್ಞಾನಿಗಳು. ಮಾನವ ಸಮಾಜದಲ್ಲಿರುವ ಅನಿಷ್ಟಗಳಾದ ಕೋಪ, ದ್ವೇಷ, ಅಸೂಯೆ, ಅಹಂಕಾರ ಅಳಿದು ಸಾತ್ವಿಕ ಬದುಕಿಗೆ ಅವಶ್ಯಕವಾದ ಪ್ರಾಮಾಣಿಕತೆ ಪರೋಪಕಾರ, ಎನಗಿಂತ ಕಿರಿಯರಿಲ್ಲ ಎಂಬ ಶರಣ ವಾಣಿ ಹೃದಯದಲ್ಲಿ ನೆಲೆಗೊಳ್ಳಲು ಗ್ರಂಥಗಳ ಅಧ್ಯಯನ ಅತ್ಯಂತ ಅವಶ್ಯಕ ಎಂದು ತಿಳಿಸಿದರು.

### “ 20 ಗ್ರಂಥ ಲೋಕಾರ್ಪಣೆ

ಇದೇವೇಳೆ ಕನ್ನಡ, ತೆಲಗು, ಆಂಗ್ಲ ಮತ್ತು ಹಿಂದಿ ಭಾಷೆಯಲ್ಲಿ ಪ್ರಕಟಗೊಂಡ ಸುಮಾರು 20 ವಿವಿಧ ಗ್ರಂಥಗಳು ಲೋಕಾರ್ಪಣೆಗೊಂಡವು. ಕನ್ನಡ ಭಾಷೆಯಲ್ಲಿ ಪ್ರಕಟಗೊಂಡ ಶರಣ ಲೋಕ, ಬಸವ ವಚನಾರ್ಥ, ಲಿಂಗಾತ ಸಂಕಥನ, ಕಲ್ಯಾಣ ಕಾರುಣ್ಯ, ಬಸವೇಶ್ವರ ವಚನ ವ್ಯಾಖ್ಯಾನ, ಸಾವಧಾನಿ, ಡಾ.ಬಸವಲಿಂಗ ಪಟ್ಟದ್ದೇವರ ಕುರಿತು ಆಧುನಿಕ ವಚನಗಳು, ಬಸವಲೇಖಾ, ಅಕ್ಕರ ಜಂಗಮ, ತ್ಯಾಗಮೂರ್ತಿ, ನಾಥರು ಶರಣರು ಸೂಫಿಗಳು, ಮರಾಠಿ ಭಾಷೆಯ ಲೋಕಜಂಗಮ, ವಿದ್ರೋಹಿ ಅಕ್ಕಮಹಾದೇವಿ, ಶರಣ ಜೀವನ ದರ್ಶನ ಖಂಡ–1, ಬಸವಕಾಲಿನ ಮಂಗಳವೇಡೆ, ತೆಲಗು ಭಾಷೆಯ ಬಸವಯುಗವು ಶಿವರಣುಲ ಚರಿತ್ರೆ ಮತ್ತು ಹಿಂದಿಯ ಮಹಾತ್ಮ ಬಸವೇಶ್ವರಕೆ ವಚನ ಗ್ರಂಥ ಲೋಕಾರ್ಪಣೆಗೊಂಡವು. ಜತೆಗೆ ಭಾಲ್ಕಿಯ ಧವಳಗಿರಿ, ಬಸವ ಕಿರಣ ಪೂಜ್ಯ ಡಾ.ಬಸವಲಿಂಗ ಪಟ್ಟದ್ದೇವರ ಚಿತ್ರ ಸಂಪುಟ ಬಿಡುಗಡೆಗೊಂಡವು.

# ಜಿಲ್ಲಾಡಳಿತದಿಂದ ಇಂದು ಶ್ರೀ ಭಗೀರಥ ಜಯಂತಿ

• **ಮಲ್ಲಮ್ಮ ನುಡಿ ವಾರ್ತೆ, ರಾಯಚೂರು**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮವು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಏಪ್ರಿಲ್ 23ರ ಬೆಳಿಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ. ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟನೆ ನೆರವೇರಿಸುವರು. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್. ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು.

ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ಭಾಗಿಯಾಗಲಿದ್ದಾರೆ.

# ಕೇಂದ್ರ ಮಹಿಳಾ ಮೀಸಲಾತಿ ಮಸೂದೆ

## ವಿರೋಧಕ್ಕೆ ಜೆಡಿಎಸ್ ಮಹಿಳಾ ಘಟಕದ ಪ್ರತಿಭಟನೆ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಕೇಂದ್ರ ಸರ್ಕಾರ ಮಂಡಿಸಿದ ಮಹಿಳಾ ಮೀಸಲಾತಿ ಮಸೂದೆಗೆ ಕಾಂಗ್ರೆಸ್ ಪಕ್ಷ ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಜೆಡಿಎಸ್ ಪಕ್ಷ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ನಗರದ ಜಿಲ್ಲಾ ಜೆಡಿಎಸ್ ಕಚೇರಿಯಿಂದ ರಾಯಲ್ ವೃತ್ತದವರೆಗೆ ಜೆಡಿಎಸ್ ಜಿಲ್ಲಾ ಮಹಿಳಾ ಘಟಕದ ವತಿಯಿಂದ ಬೃಹತ್ ಪ್ರತಿಭಟನಾ ರ್ಯಾಲಿ ನಡೆಯಿತು.



ಜೆಡಿಎಸ್ ಮಹಿಳಾ ಜಿಲ್ಲಾಧ್ಯಕ್ಷೆ ಪುಷ್ಪ ಜಮೀಲಾ ಶಬಾನ ಅವರ ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಕಾಂಗ್ರೆಸ್ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಮಹಿಳೆಯರಿಗೆ 33 ಶೇಕಡಾ ರಾಜಕೀಯ ಮೀಸಲಾತಿ ನೀಡುವ ಮಸೂದೆಗೆ ವಿರೋಧ ವ್ಯಕ್ತಪಡಿಸುವ ಮೂಲಕ ಕಾಂಗ್ರೆಸ್ ಮಹಿಳಾ ವಿರೋಧಿ ಧೋರಣೆ ತೋರಿದೆ ಎಂದು ಆರೋಪಿಸಿದರು.

ಈ ವೇಳೆ ಮಾತನಾಡಿದ ಜೆ,ಪುಷ್ಪ ಮಹಿಳೆಯರಿಗೆ ರಾಜಕೀಯವಾಗಿ ಸಮಾನ ಅವಕಾಶ ಕಲ್ಪಿಸುವುದು ಪ್ರಜಾಪ್ರಭುತ್ವದ ಮೂಲ ತತ್ವವಾಗಿದೆ. 33 ಶೇಕಡಾ ಮೀಸಲಾತಿ ಮಸೂದೆ ಮಹಿಳೆಯರ ಹಕ್ಕುಗಳ ರಕ್ಷಣೆಗೆ ಅತ್ಯಂತ ಅಗತ್ಯವಾಗಿದೆ. ಆದರೆ ಕಾಂಗ್ರೆಸ್ ಪಕ್ಷ ಇದಕ್ಕೆ ವಿರೋಧ ವ್ಯಕ್ತಪಡಿಸುವುದು ಮಹಿಳೆಯರ ಆಶೆಗಳನ್ನೇ ಕುಂಠಿತಗೊಳಿಸುವಂತಾಗಿದೆ. ಇದು ಖಂಡನೀಯ," ಎಂದು ಹೇಳಿದರು. "ಮಹಿಳೆಯರು ಇಂದು ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವ ಸಂದರ್ಭದಲ್ಲಿ, ರಾಜಕೀಯದಲ್ಲೂ ಅವರಿಗೆ ಸಮಾನ ಅವಕಾಶ ನೀಡಬೇಕು. ಜೆಡಿಎಸ್ ಪಕ್ಷ ಸದಾ ಮಹಿಳೆಯರ ಸಬಲೀಕರಣಕ್ಕೆ ಬದ್ಧವಾಗಿದೆ. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಅವಧಿಯಲ್ಲಿಯೇ ಮಹಿಳಾ ಮೀಸಲಾತಿಗೆ ಆದ್ಯತೆ ನೀಡಲಾಗಿತ್ತು," ಎಂದು ಅವರು ನೆನಪಿಸಿದರು. ಇದೇ ವೇಳೆ ಮಾತನಾಡಿದ ಜಿಲ್ಲಾಧ್ಯಕ್ಷರಾದ ಮೀನಳ್ಳಿ ತಾಯಣ್ಣ ಅವರು, ಕಾಂಗ್ರೆಸ್ ಮಹಿಳೆಯರ ರಾಜಕೀಯ ಹಕ್ಕುಗಳನ್ನು ಕಸಿದುಕೊಳ್ಳಲು ಯತ್ನಿಸುತ್ತಿದೆ ಎಂದು ಕಿಡಿಕಾರಿದರು. ಕೇಂದ್ರ ಸರ್ಕಾರ ತಕ್ಷಣವೇ ಮಹಿಳಾ ಮೀಸಲಾತಿ ಮಸೂದೆಯನ್ನು ಜಾರಿಗೆ ತರಬೇಕು, ಕಾಂಗ್ರೆಸ್ ತನ್ನ ನಿಲುವು ಪರಿಷ್ಕರಿಸಿ ಮಹಿಳೆಯರ ಪರವಾಗಿ ನಿಲ್ಲಬೇಕು ಎಂದು ಒತ್ತಾಯಿಸಿದರು.

ಈ ಪ್ರತಿಭಟನೆಯಲ್ಲಿ ವಿಜಯ, ರೆಹಮತ್, ರಾಜೇಶ್ವರಿ, ಮಮತಾ, ಶಿವಗಂಗಾ, ಶಿರೀಷಾ, ಈ ಪ್ರತಿಭಟನೆಯಲ್ಲಿ ಸಹಕರಿಸಿದ ನಗರ ಘಟಕದ ಅಧ್ಯಕ್ಷ ಹೊನ್ನೂರು ಸ್ವಾಮಿ (ವಂಡ್ರಿ), ಕಂಪ್ಲಿ ಅಧ್ಯಕ್ಷ ಮೇಘರಾಜ್, ಶಿವು ನಾರಾಯಣ, ವಸಂತ್ ಕುಮಾರ್, ಮುತ್ತು, ಜಾವೀದ್, ಹೊನ್ನೂರು ಅಲಿ, ಹಾಗೂ ತಾಲ್ಲೂಕು ಮಹಿಳೆಯರು ಪದಾಧಿಕಾರಿಗಳು, ಸ್ಥಳೀಯ ಮುಖಂಡರು ಹಾಗೂ ಹಲವಾರು ಕಾರ್ಯಕರ್ತರು ಭಾಗವಹಿಸಿದ್ದರು.

# ಶಾಸಕರ ಸುಳ್ಳು ಹೇಳಿಕೆ ಬೀದಿ ಬದಿ ವ್ಯಾಪಾರಸ್ಥರ ಆಕ್ರೋಶ

• **ಮಲ್ಲಮ್ಮ ನುಡಿ ವಾರ್ತೆ, ಸಿಂಧನೂರು**

ಈ ದಿನದ ಹೋರಾಟದಲ್ಲಿ ಬೀದಿಬದಿ ವ್ಯಾಪಾರಸ್ಥರ ಅಕ್ಕತಂಗಿಯರ, ಕುಟುಂಬದ ಸದಸ್ಯರ ಭಾಗವಹಿಸಿದ್ದರುರು. ಬೀದಿ ವ್ಯಾಪಾರಸ್ಥರಿಗೆ ವ್ಯಾಪಾರ ಮಾಡಲು. ಜಾಗದ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿ ನಡೆದಿರುವ ಧರಣಿ ಸತ್ಯಾಗ್ರಹ. ಎಂಟನೇ ದಿನಗಳಲ್ಲಿ ಮುಂದುವರೆದಿದೆ. ಇಂದು ಜಗಜ್ಯೋತಿ ವಿಶ್ವಗುರು ಬಸವಣ್ಣನವರ. 893 ನೇ ಜಯಂತಿಯನ್ನು ಆಚರಿಸಲಾಯಿತು. ಜಮಾತೆ ಇಸ್ಲಾಮಿನ ಹಿಂದ ಅಧ್ಯಕ್ಷರಾದ ಖಿ. ಹುಸೇನ್. ಸಾಬ್ ಮಾತನಾಡಿ 12ನೇ ಶತಮಾನದಲ್ಲಿ ಬಸವಣ್ಣನವರು ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಲು ಹೋರಾಡಿದರು.




890 ವರ್ಷ ಕಳೆದರೂ ಜಾತಿ ವ್ಯವಸ್ಥೆ ಇನ್ನೂ ಮುಂದುವರೆದಿದೆ. ಎಲ್ಲ ಜಾತಿ ಧರ್ಮದವರು, ಪ್ರಗತಿಪರರು, ವಿದ್ಯಾವಂತರು ಜಾತಿ ವ್ಯವಸ್ಥೆ ವಿರುದ್ಧ ಹೋರಾಡಬೇಕೆಂದು ಕರೆಕೊಟ್ಟರು.

ಮುಂದುವರೆದು ಮಾತನಾಡಿದವರು ಬೀದಿಬದಿ ವ್ಯಾಪಾರಸ್ಥರು 16 ತಿಂಗಳಿಗಳಿಂದ ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಶಾಸಕರು ಹಾಗೂ ಜಿಲ್ಲಾಧಿಕಾರಿಗಳು ಬೇಗನೆ ಸಮಸ್ಯೆ ಬಗೆಹರಿಸಬೇಕೆಂದು ಕರೆಕೊಟ್ಟರು

ವಿದ್ಯುತ್ ಗುತ್ತೇದರ ಸಂಘದ ರಾಜ್ಯ ಉಪಾಧ್ಯಕ್ಷರಾದ ಅನ್ವರ್ ಸಾಬ್ ಮಾತನಾಡಿ. ಶಾಸಕರು ಮತ್ತು ಎಲ್ಲ ಪಕ್ಷದ ರಾಜಕಾರಣಿಗಳು ಬೀದಿಬದಿ ವ್ಯಾಪಾರಸ್ಥರ ಸಮಸ್ಯೆಯನ್ನು ಬಗೆಹರಿಸದ್ದಿದ್ದರೆ. ಮುಂದೆ ಬರುವ ನಗರಸಭೆ ಮತ್ತು ಎಲ್ಲಾ ಚುನಾವಣೆಯಲ್ಲಿ ಸರಿಯಾದ ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಸಿಪಿಐ(ಎಂಎಲ್) ಮಾಸ್ ಲೈನ್ ರಾಜ್ಯ ಕಾರ್ಯದರ್ಶಿಯಾದ ಡಿ. ಎಚ್ ಪೂಜಾರ್ ಮಾತನಾಡಿ. ಜಗತ್ ಗೆ ಸಮತವಾದ ಸಿದ್ಧಾಂತವನ್ನು. ಪರಿಚಯಿಸಿದ ಬಸವಣ್ಣರ ಜನ್ಮ ದಿನಾಚರಣೆ ಆಚರಿಸುತ್ತಿರುವುದು ಅತ್ಯಂತ ಮಹತ್ವದ ಸಂದರ್ಭವಾಗಿದೆ. ಬಸವಣ್ಣನವರು ಸಾರಿದ ಸಮಾನತೆ ಸಿದ್ಧಾಂತವನ್ನು ಇಂದಿನ ಸರ್ಕಾರಗಳು, ಕಾಲಲ್ಲಿ ತುಳಿಯುತ್ತಿವೆ. ಈಗಿನ ಸರ್ಕಾರಗಳು ಜಾರಿಗೊಳಿಸಿದ ಜನ ವಿರೋಧಿ ಕಾಯ್ದೆಗಳಿಂದ, ದೇಶದಲ್ಲಿ ಬಡವರ ಶ್ರೀಮಂತರ ನಡುವೆ ಕಂದಕ ದೊಡ್ಡಾಗುತ್ತಿದೆ. ಬಡವರು ಇನ್ನಷ್ಟು ಬಡವರಾಗುತ್ತಿದ್ದಾರೆ. ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಿದ್ದಾರೆ. ಹಾಗಾಗಿ ಎಲ್ಲಾ ಜಾತಿಯ ದುಡಿಯುವ ಜನರು ಒಗ್ಗಟ್ಟಾಗಿ ಜನ ವಿರೋಧಿ ಸರ್ಕಾರವನ್ನು ತೊಲಗಿಸಕೆಂದು ಕರೆಕೊಟ್ಟರು.

ಮುಂದುವರೆದ ಮಾತನಾಡಿದ ಅವರು ಎಂಟು ದಿನಗಳಿಂದ ಹೋರಾಟ ನಡೆದಿದೆ. ಜಿಲ್ಲಾಧಿಕಾರಿಗಳು ತಾಶೀಲ್ದಾರರು ಸೇರಿದಂತೆ ಯಾವುದೇ ಅಧಿಕಾರಿಗಳು ಹೋರಾಟದ ಸ್ಥಳಕ್ಕೆ ಬಂದಿರುವುದಿಲ್ಲ.

ನಾಳೆ ಸ್ಥಳಕ್ಕೆ ಬಂದು ಸಮಸ್ಯೆಯನ್ನು ಬಗೆಹರಿಸಲು ಮುಂದಾಗದಿದ್ದರೆ, ಹೋರಾಟವನ್ನು ತೀವ್ರಗೊಳಿಸಬೇಕಾಗುತ್ತದೆ. ಜಿಲ್ಲಾಧಿಕಾರಿಗಳು ರಸ್ತೆಯನ್ನು ಅತಿಕ್ರಮಿಸಿದ ಎಲ್ಲಾ ಕಟ್ಟಡಗಳನ್ನು ತೆರೆವುಗೊಳಿಸದಿದ್ದರೆ ಅವರ ವಿರುದ್ಧ ಹೋರಾಟ ರೂಪಿಸಲಾಗುತ್ತದೆ.

ಜೆಡಿಎಸ್ ಮುಖಂಡರಾದ ಖಾಜಿ ಜಿಲಾನಿ ಸಾಬ್, ನಗರ ಸಭೆಯ ಮಾಜಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಪಾಟೀಲ್ ಧರಣಿ ಸ್ಥಳಕ್ಕೆ ಬಂದು ಧರಣಿಗೆ ಬೆಂಬಲಿಸಿ, ನಾಳೆ ಶಾಸಕರನ್ನು ಧರಣಿ ಸ್ಥಳಕ್ಕೆ ಕರೆದುಕೊಂಡು ಬರುವುದಾಗಿ ತಿಳಿಸಿದರು.

ಕರ್ನಾಟಕ ರೈತ ಸಂಘದ ರಾಜ್ಯ ಕಾರ್ಯದರ್ಶಿ ಚಿಟ್ಟಿಬಾಬು. ತಾಲೂಕ ಅಧ್ಯಕ್ಷರಾದ ರಮೇಶ್ ಪಾಟೀಲ್, ಖಿಗಅಖ ಜಿಲ್ಲಾಧ್ಯಕ್ಷರಾದ ಬಿ.ಎನ್. ಯರದಿಹಾಳ್ ಬೀದಿ ಬದಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷರಾದ ಕಾಶ್ಮಿಸಾಬ ಕಾರ್ಪೆಂಟರ್. ಕಾರ್ಯದರ್ಶಿಗಳು ಜಾಬೀರ್. ಹಜರತ್. ರಹೀಮ ಪಾಷಾ. ಅಸ್ಲಾಂ ಪಾಷ. ಖಜಾಂಚಿ ಹುಸೇನ್ ಬಾಷಾ. ಖಾಜಾ ಮೆಕಾನಿಕ, ರಸೂಲ್ ಸಾಬ್ ಬಿಬಿ ಜಾನ್, ಸೈಫಾನಾಬಿ. ರಿಜ್ವಾನ. ಅಜ್ಮಂತ ಬೇಗಂ . ರಸೂಲ್ ಬಿ ರಜಿಯಾಬೇಗಂ, ಆಲಂಬಿ, ಲಕ್ಷ್ಮಿ ಕೌಸರ್. ಇತರೆ ಬೀದಿ ಬದಿ ವ್ಯಾಪಾರಸ್ಥರಿದ್ದರು. ಭಾಗವಹಿಸಿದ್ದರು.

# ಶ್ರೀ ಮಹಾಲಕ್ಷ್ಮೀ ದೇವಿ, ಜೋಡು ಶ್ರೀ ಹನುಮಂತ ದೇವರ ಪ್ರಾಣ ಪ್ರತಿಷ್ಠಾಪನೆ



• **ಮಲ್ಲಮ್ಮ ನುಡಿ ವಾರ್ತೆ, ಕುಷ್ಟಗಿ**

ತಾಲೂಕಿನ ಚಳಗೇರಿ ಗ್ರಾಮದ ಇತಿಹಾಸ ಪ್ರಸಿದ್ಧ ಶ್ರೀ ಮಹಾಲಕ್ಷ್ಮೀ ದೇವಿ, ಜೋಡು ಶ್ರೀ ಹನುಮಂತದೇವರ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮ ಹಾಗೂ ನವೀಕೃತಗೊಂಡ ಮಂದಿರಗಳ ಭಗವದರ್ಪಣೋತ್ಸವ ಕಾರ್ಯಕ್ರಮ ಶ್ರೀಮದುತ್ತಾರಾಧಿ ಮಠದ ಶ್ರೀ ಶ್ರೀ ಶ್ರೀ ಸತ್ಯಾತ್ಮತೀರ್ಥ ಸ್ವಾಮೀಜಿ ಅವರ ನೇತೃತ್ವದಲ್ಲಿ ಸೋಮವಾರ ಅದ್ದೂರಿಯಾಗಿ ನೆರವೇರಿತು. ಬೆಳಿಗ್ಗೆ ಶ್ರೀ ಸತ್ಯಾತ್ಮತೀರ್ಥ ಸ್ವಾಮೀಜಿ ಅವರು ಕ್ಷೇತ್ರಕ್ಕೆ ಆಗಮಿಸುತ್ತಿದ್ದಂತೆ ವಿವಿಧ ಗಣ್ಯರು, ಸ್ಥಳೀಯ ಮುಖಂಡರು, ಮಹಿಳೆಯರು ಪೂರ್ಣಕುಂಭಗಳೊಂದಿಗೆ ಅದ್ದೂರಿಯಾಗಿ ಸ್ವಾಗತಿಸಿದರು. ನಂತರ ಹೋಮ, ಹವನ, ಪೂರ್ಣಾಹುತಿ ಹಾಗೂ ವಿವಿಧ ಪಂಡಿತರಿಂದ ಉಪನ್ಯಾಸ ಕಾರ್ಯಕ್ರಮಗಳು ನಡೆದವು. ನಂತರ ಶ್ರೀ ಸತ್ಯಾತ್ಮ ತೀರ್ಥ ಸ್ವಾಮೀಜಿ ಅವರಿಂದ ಜಗನ್ಮಾತೆ ಶ್ರೀ ಪದ್ಮಾವತಿ (ಮಹಾಲಕ್ಷ್ಮಿ)ಯ ಹಾಗೂ ಮುಖ್ಯಪ್ರಾಣದೇವರ ಪ್ರತಿಷ್ಠಾಪನಾ ಕಾರ್ಯಕ್ರಮ, ಕಲಶಾಭಿಷೇಕ ಸೇರಿದಂತೆ ವಿವಿಧ ಪೂಜೆಗಳು ಅತ್ಯಂತ ವೈಭವದಿಂದ ನೆರವೇರಿದವು. ನಂತರ ಭಕ್ತರಿಂದ ಶ್ರೀಗಳ ಪಾದಪೂಜೆ, ಶ್ರೀಗಳಿಂದ ತಪ್ತ ಮುದ್ರಧಾರಣೆ, ಶ್ರೀದಿಗ್ವಿಜಯ ಶ್ರೀಮನ್ಮೂಲರಾಮದೇವರ (ಸಂಸ್ಥಾನ) ಪೂಜೆ, ಗುರುಗಳಿಂದ ಅಮೃತೋಪದೇಶ, ಗುರುಪೂಜೆ, ನಂತರ ಶ್ರೀಗಳು ಭಕ್ತರಿಗೆ ಫಲ ಮಂತ್ರಾಕ್ಷತೆ ವಿತರಿಸಿದರು. ತೀರ್ಥ ಪ್ರಸಾದ ವಿತರಿಸಲಾಯಿತು. ಭಾನುವಾರ ಬೆಳಿಗ್ಗೆ ವಿವಿಧ ಪಂಡಿತರಿಂದ ಪುಣ್ಯಾಹವಾಚನ, ಮೃತ್ತಿಕಾಹರಣ, ಜಲಹರಣ, ವಾಸ್ತು ಶುದ್ಧಿ, ಕಳಸ ಪ್ರತಿಷ್ಠಾಪನೆ ಹಾಗೂ ದೇವತಾ ಆವಾಹನ ಸೇರಿದಂತೆ ಸಂಜೆ ಸಚ್ಛಾಸ್ತ್ರ ಹಾಗೂ ವೇದಪರಾಯಣ ಕಾರ್ಯಕ್ರಮ ನಡೆಯಿತು.


# ಹಳೆ ಶಿಲಾಯುಗ ಸ್ಮಾರಕ ಪಳೆಯುಳಿಕೆ ಪರಿಶೀಲನೆ : ಸಿಇಒ

• **ಮಲ್ಲಮ್ಮ ನುಡಿ ವಾರ್ತೆ ಮುದಗಲ್**

ಸಮೀಪದ ನಾಗಲಾಪೂರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಪಿಕಳಿಹಾಳ ಗ್ರಾಮದ ಗುಡ್ಡದಲ್ಲಿರುವ ಹಳೆ ಶಿಲಾಯುಗದ ಸ್ಮಾರಕ ಹಾಗೂ ಪಳೆಯುಳಿಕೆಗಳನ್ನು ರಾಯಚೂರು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕಾಂದೂ ಅವರು ಭೇಟಿ ನೀಡಿ ಪರಿಶೀಲನೆ ಮಾಡಿದರು.

ಹಳೆ ಶಿಲಾಯುಗದ ಸ್ಮಾರಕ ಹಾಗೂ ಪಳೆಯುಳಿಕೆಗಳ ಸಂರಕ್ಷಣೆಗೆ ಅಧಿಕಾರಿಗಳು ಕೂಡಲೇ ಮುಂದಾಗಬೇಕೆಂದು ಸೂಚಿಸಿದರು. ಪಿಕಳಿಹಾಳ ಗ್ರಾಮದ ಹೊರವಲಯ ಗುಡ್ಡದಲ್ಲಿರುವ ಹಳೆಯ ಶಿಲಾಯುಗದ ಬಗ್ಗೆ ಪುರಾತತ್ವಸಂಶೋಧನೆನಡೆಸಿರುವ ಬ್ರಿಟಿಷ್ ಪುರಾತತ್ವ ಶಾಸ್ತ್ರಜ್ಞರು 1960ನೇ ಇಸವಿಯಲ್ಲಿ ಉತ್ಖನನ ನಡೆಸಿದರು. ಉತ್ಖನನದಿಂದ ಶಿಲಾಯುಗದ ಅನೇಕ ಕುರುಹುಗಳು ಪತ್ತೆಯಾಗಿವೆ. ಈ ಐತಿಹಾಸಿಕ ಪ್ರದೇಶದ ಮಹತ್ವದಾಗಿದೆ. ಹಿಂದಿನ ಮಾನವ ವಸಹಾತುಗಳ ಇತಿಹಾಸಕ್ಕೆ ಸಾಕ್ಷಿಯಾಗಿವೆ. ಭೂದೃಶ್ಯ ಮತ್ತು ಬಂಡೆಯ ಆಶ್ರಯಗಳು ಇತ್ತೀಚಿನವರೆಗೂ ಪುರಾತತ್ವಶಾಸ್ತ್ರಜ್ಞಸಂಶೋಧನೆಗಳು ಹೆಚ್ಚಿನ ಅಧ್ಯಯನಕ್ಕೆ ಓತ್ತು ನೀಡಿವೆ ಎಂದರು. ಆದರಿಂದ ಹಳೆಯ ಶಿಲಾಯುಗದ ಕುರುಹುಗಳನ್ನು ಪುನರುಜ್ಜೀವನಗೊಳಿಸಲು ಮತ್ತು ಸಂರಕ್ಷಿಸಲು ಸಂಬಂಧಿಸಿದ ಅಧಿಕಾರಿ ಸಿಬ್ಬಂದಿಗಳಿಗೆ ಸಲಹೆ ಸೂಚನೆ ನೀಡಿದರು.

ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ, ಸಹಾಯಕ ನಿರ್ದೇಶಕ ವೆಂಕಟೇಶ ದೇಸಾಯಿ, ಸಹಾಯಕ ನಿರ್ದೇಶಕ ಪಂಪನಗೌಡ, ಸಹಾಯಕ ನಿರ್ದೇಶಕ, ಪಿಡಿಒ ಬಸವರಾಜ, ಕಾರ್ಯದರ್ಶಿ ಚನ್ನಬಸವ, ತಾಂತ್ರಿಕ ಸಂಯೋಜ-ಕರು, ತಾಂತ್ರಿಕ ಸಹಾಯಕರು, ಐಇಸಿ ಸಂಯೋಜಕರು ಹಾಗೂ ಗ್ರಾ.ಪಂ ಸಿಬ್ಬಂದಿಗಳು ಸೇರಿದಂತೆ ಇತರರಿದ್ದರು.



# ವಿವೇಕಾನಂದ ಕೇಂದ್ರ ರಾಮಕೃಷ್ಣ ಆಶ್ರಮಕ್ಕೆ ಹಸ್ತಾಂತರ



• **ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ**

ನಗರದ ಶ್ರೀರಾಮಕೃಷ್ಣ ವಿವೇಕಾನಂದ ಕೇಂದ್ರವನ್ನು ಕೋಲ್ಕತ್ತಾದ ಬೇಲೂರು ಮಠದ ರಾಮಕೃಷ್ಣ ಮಿಷನ್ಗೆ ಸೋಮವಾರ ಸಂಜೆ ಹಸ್ತಾಂತರ ಮಾಡಲಾಗಿದೆ.

ಮಾಜಿ ಸಚಿವ ಅಲ್ಲಂ ವೀರಭದ್ರಪ್ಪ, ರಾಜ್ಯಸಭಾ ಮಾಜಿ ಸದಸ್ಯ ಕೆ.ಸಿ. ಕೊಂಡಯ್ಯ, ಶಾಸಕ ನಾರಾ ಭರತರೆಡ್ಡಿ, ಮಾಜಿ ಶಾಸಕ ಜಿ. ಸೋಮಶೇಖರರೆಡ್ಡಿ, ಮೇಯರ್ ಪಿ. ಗಾದೆಪ್ಪ, ಶ್ರೀರಾಮಕೃಷ್ಣ ವಿವೇಕಾನಂದ ಆಶ್ರಯದ ಅಧ್ಯಕ್ಷ ಶ್ರೀಧರ ಬೋನಗೇರಿ, ಪದಾಧಿಕಾರಿಗಳಾದ ಪೃಥ್ವಿರಾಜ್ ಭೂಪಾಲ್, ಸಿ. ಎರ್ರಿಸ್ವಾಮಿ ಅವರು ಭಕ್ತಾಧಿಗಳ ಸಮ್ಮುಖದಲ್ಲಿ ಕೋಲ್ಕತ್ತಾದ ಬೇಲೂರು ಮಠದ ರಾಮಕೃಷ್ಣ ಮಿಷನ್ನ ಸಹ ಕಾರ್ಯದರ್ಶಿ ಸತ್ಯೇಶನಂದಾ, ಬೆಂಗಳೂರಿನ ಶಿವನಹಳ್ಳಿಯ ಮಹಾವಾಕ್ಯನಂದ ಮತ್ತು ಬಳ್ಳಾ-ರಿಯ ಉಸ್ತುವಾರಿಗಳಾಗಿರುವ ಮಂಗಳನಾಥಾನಂದ ಅವರು ದಾಖಲೆಗಳನ್ನು ಹಸ್ತಾಂತರ ಮಾಡಿದರು. ದಾಖಲೆಗಳನ್ನು ಸ್ವೀಕರಿಸಿದ ಶ್ರೀಗಳು ಬಳ್ಳಾರಿಯ ಶ್ರೀರಾಮಕೃಷ್ಣ ವಿವೇಕಾನಂದ ಕೇಂದ್ರವನ್ನು ರಾಮಕೃಷ್ಣ ಮಿಷನ್ ವ್ಯಾಪ್ತಿಗೆ ಸೇರ್ಪಡೆ ಮಾಡಿಕೊಳ್ಳಲಾಗಿದೆ ಎಂದು ಘೋಷಣೆ ಮಾಡಿದ್ದಾರೆ.

ಅಲ್ಲಂ ವೀರಭದ್ರಪ್ಪ, ಕೆ.ಸಿ. ಕೊಂಡಯ್ಯ, ನಾರಾ ಭರತರೆಡ್ಡಿ, ಜಿ. ಸೋಮಶೇಖರರೆಡ್ಡಿ ಅವರು ಮಾತನಾಡಿ, ಬಳ್ಳಾರಿಯ ಶ್ರೀರಾಮಕೃಷ್ಣ ವಿವೇಕಾನಂದ ಕೇಂದ್ರವನ್ನು ಕೋಲ್ಕತ್ತಾದ ಬೇಲೂರು ಮಠದ ರಾಮಕೃಷ್ಣ ಮಿಷನ್ಗೆ ಹಸ್ತಾಂತರ ಮಾಡಲಾಗಿದ್ದು, ಬಳ್ಳಾರಿಯ ಆಶ್ರಮವು ರಾಷ್ಟ್ರೀಯ – ಅಂತಾರಾಷ್ಟ್ರೀಯ ಮಟ್ಟಕ್ಕೆ ಬೆಳೆಯಬೇಕು ಎಂದು ಆಶಯ ವ್ಯಕ್ತಪಡಿಸಿದರು. ಲೆಕ್ಕಿಕ ಪರಿಶೋದಕ ಸಿ. ಎರ್ರಿಸ್ವಾಮಿ ದಾನಿಗಳ ಕುರಿತು ಮಾಹಿತಿ ನೀಡಿದರು. ಶ್ರೀರಾಮಕೃಷ್ಣ ವಿವೇಕಾನಂದ ಸೆಂಟರ್ನ ಕಾರ್ಯದರ್ಶಿ ಜಗನ್ನಾಥ್ ಸ್ವಾಗತಿಸಿದರು. ಶಿಕ್ಷಕ ರಾಜಶೇಖರ್ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಕಾರ್ಯಕಾರಿ ಸಮಿತಿ ಸದಸ್ಯ ಗಡಿಗಿ ರಾಕೇಶ್ ವಂದನಾರ್ಪಣೆ ಸಲ್ಲಿಸಿದರು.

# ಸರ್ಕಾರಿ ಜಮೀನು ಒತ್ತುವರಿ ವಿರುದ್ಧ ಜಿಲ್ಲಾಡಳಿತ ಸಮರ



• **ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ**

ಜಿಲ್ಲಾಡಳಿತವು ಸರ್ಕಾರಿ ಜಮೀನು ಒತ್ತುವರಿ ಮಾಡಿಕೊಂಡವರ ವಿರುದ್ಧ ಕಠಿಣ ಕ್ರಮಕ್ಕೆ ಮುಂದಾಗಿದ್ದು, ಬುಧವಾರ ಅಂದ್ರಾಳ್ ಬೈಪಾಸ್ ರಸ್ತೆಯ ಸಮೀಪ ಕಾರ್ಯಾಚರಣೆ ನಡೆಸಿತು. ಅಂದ್ರಾಳ್ ಗ್ರಾಮದ ಸರ್ವೇ ನಂಬರ್ ಒಂದರಲ್ಲಿ ಸುಮಾರು 3 ಎಕರೆಗೂ ಅಧಿಕ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಳ್ಳಲಾಗಿತ್ತು. ಇಲ್ಲಿ ಅಕ್ರಮವಾಗಿ ನಿರ್ಮಿಸಲಾಗಿದ್ದ ಸಿಮೆಂಟ್ ಕಟ್ಟಡಗಳು ಮತ್ತು ಇತರ ನಿರ್ಮಾಣಗಳನ್ನು ಜಿಲ್ಲಾಡಳಿತವು ಜೆಸಿಬಿ ಯಂತ್ರಗಳ ಸಹಾಯದಿಂದ ತೆರವುಗೊಳಿಸಿದೆ.

ಈ ವೇಳೆ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಎನ್. ಅವರು ಮಾತನಾಡಿ, ಜಿಲ್ಲಾಡಳಿತದ ಈ ದಿಟ್ಟ ಕ್ರಮವು ಸರ್ಕಾರಿ ಆಸ್ತಿಯನ್ನು ರಕ್ಷಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆ ಇಟ್ಟಿದ್ದು, ಈ ಒತ್ತುವರಿಯ ಹಿಂದೆ ಯಾರೇ ಇದ್ದರೂ ಮತ್ತು ಯಾರು ಪ್ರಚೋದನೆ ನೀಡುತ್ತಿದ್ದರೂ ಅವರ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು. ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿದರೆ ಅಥವಾ ಸಾರ್ವಜನಿಕರಿಗೆ ತೊಂದರೆ ನೀಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು

ಈ ಸಂದರ್ಭದಲ್ಲಿ ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ., ಡಿಡಿಎಲ್ಆರ್ ಪ್ರಮೋದ್ ಸೇರಿದಂತೆ ಬಳ್ಳಾರಿ ತಾಲ್ಲೂಕು ತಹಸೀಲ್ದಾರ ಕಚೇರಿಯ ಅಧಿಕಾರಿ– ಸಿಬ್ಬಂದಿ ಹಾಗೂ ಮತ್ತೀತರರು ಇದ್ದರು.

# ಕನಕಗಿರಿ ಉತ್ಸವ ಅಗತ್ಯ ಸಿದ್ಧತೆಯಾಗಲಿ: ತಂಗಡಗಿ




• **ಮಲ್ಲಮ್ಮ ನುಡಿ ವಾರ್ತೆ, ಕೊಪ್ಪಳ**

ಕನಕಗಿರಿ ಉತ್ಸವ–2026ರ ಅದ್ದೂರಿ ಆಯೋಜನೆಯ ಪ್ರಕ್ರಿಯೆಗೆ ಏಪ್ರೀಲ್ 21ರಂದು ವಿದ್ಯುಕ್ತ ಚಾಲನೆ ಸಿಕ್ಕಿತು.

ಪೂರ್ವ ನಿಗದಿಯಂತೆ, ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್ ತಂಗಡಗಿ ಅವರ ಅಧ್ಯಕ್ಷತೆಯಲ್ಲಿ ಕನಕಗಿರಿ ಉತ್ಸವ–2026 ಆಚರಣೆ ಸಂಬಂಧ ಏಪ್ರಿಲ್ 21ರಂದು ಸಂಜೆ ವೇಳೆ ಕನಕಗಿರಿ ಪಟ್ಟಣದ ಶ್ರೀ ಕನಕಾಚಲಪತಿ ದೇವಸ್ಥಾನದ ಆವರಣದಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಆರಂಭದಲ್ಲಿ ಸಚಿವರು ಉತ್ಸವಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರ ಸಲಹೆ ಪಡೆದುಕೊಂಡರು. ಸ್ಥಳೀಯ ಜಾತ್ರೆಯ ಸಂಬಂಧ ವಾರ ಕಾಲ ಉತ್ಸವ ಮುಂದೂಡಬೇಕು. ಉತ್ಸವದ ಜೊತೆಗೆ ದೇವಾಲಯ, ಕೋಟೆದ್ವಾರಗಳನ್ನು ದುರಸ್ತಿಗೊಳಿಸಬೇಕು. ಬಿಸಿಲಿನ ಕಾರಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಸಾರ್ವಜನಿಕರು ಸಲಹೆ ಮಾಡಿದರು. ಈ ವೇಳೆ ಸಚಿವರು ಮಾತನಾಡಿ, ಕನಕಾಚಲಪತಿ ಜಾತ್ರೆ ಮತ್ತು ಉತ್ಸವ ಎರಡು ಏಕಕಾಲಕ್ಕೆ ನಡೆದಲ್ಲಿ ಜಾತ್ರೆಗೆ ಸೇರುವ ಜನತೆಗೆ ಉತ್ಸವನೋಡಲು ಅನುಕೂಲವಾಗಲಿದೆ ಎಂದು ಯೋಜಿಸಿ ಮತ್ತು ಉತ್ಸವಕ್ಕೆ ಬರುವ ಜನತೆ ಜಾತ್ರೆಯನ್ನು ಸಹ ನೋಡಬೇಕು ಎಂದು ಆಶಿಸಿ ಜಾತ್ರೆ ಸಂದರ್ಭದಲ್ಲಿ ಉತ್ಸವ ನಿಗದಿಗೆ ಯೋಜಿಸಲಾಗಿತ್ತು ಎಂದು ತಿಳಿಸಿದರು. ಸಾರ್ವಜನಿಕರ ಸಲಹೆಯಂತೆ ಮೇ 9 ಮತ್ತು 10ರ ಬದಲಾಗಿ ಮೇ 16 ಮತ್ತು ಮೇ 17 ರಂದು ಉತ್ಸವ ಮಾಡಲಾಗುವುದು ಎಂದು ತಿಳಿಸಿದರು. ಇದಕ್ಕೆ ಸಾರ್ವಜನಿಕರು ಒಪ್ಪಿಗೆ ಸೂಚಿಸಿದರು.

ಈ ಬಾರಿಯ ಉತ್ಸವದಲ್ಲಿ

ಬೆಳಗ್ಗೆಯಿಂದ ಸಂಜೆವರೆಗೆ ಎರಡು ದಿನ ಹೆಲಿಕ್ಯಾಪ್ಟರ್ ರೈಡ್ ವ್ಯವಸ್ಥೆ ಮಾಡಲಾಗುವುದು. ಕಳೆದ ಬಾರಿ–ಗಿಂತ ಈ ಬಾರಿ ಅದ್ದೂರಿ ಉತ್ಸವ ಆಯೋಜನೆ ಮಾಡಲಾಗುವುದು.

ಮೇ 14 ಮತ್ತು ಮೇ 15ರಂದು ಕ್ರೀಡಾಕೂಟ ಆಯೋಜನೆ ಮಾಡಲಾಗುವುದು ಎಂದು ಸಚಿವರು ತಿಳಿಸಿದರು. ಈಗಾಗಲೇ ರಚನೆಯಾದ ಸಮಿತಿಗಳಿಂದ ಮೇಲಿಂದ ಮೇಲೆ ಸಿದ್ಧತಾ ಸಭೆಗಳು ಆಗಬೇಕು. ಕೃಷಿ ಮತ್ತು ತೋಟಗಾರಿಕಾ ಅಧಿಕಾರಿಗಳು ಉತ್ತಮ ಪ್ರದರ್ಶನಕ್ಕೆ ಆಸಕ್ತಿ ವಹಿಸಬೇಕು. ಬಸ್ ಗಳ ಮೇಲೆ

ಪೋಸ್ಟರ್ ಅಂಟಿಸಿ ಪ್ರಚಾರ ನಡೆಸಬೇಕು ಎಂದು ಸಚಿವರು ತಿಳಿಸಿದರು. ಬೇಸಿಗೆ ಹಿನ್ನೆಲೆಯಲ್ಲಿ ಬೆಳಗಿನ ಅವಧಿಯಲ್ಲೇ ಮೆರವಣಿಗೆ ಆಗಬೇಕು. ಕವಿಗೋಷ್ಠಿ ಸೇರಿದಂತೆ ಬೇರೆ ಬೇರೆ ಗೋಷ್ಠಿಗಳು ಎರಡೂ ದಿನ ನಡೆಯಬೇಕು ಎಂದು ಸಚಿವರು ಸೂಚಿಸಿದರು. ಉತ್ಸವ ಹಿನ್ನೆಲೆಯಲ್ಲಿ ಎರಡು ದಿನ ಕನಕಗಿರಿಯಲ್ಲಿ ಮೈಸೂರ ಮಾದರಿಯಲ್ಲಿ ಲೈಟಿಂಗ್ ವ್ಯವಸ್ಥೆ ಮಾಡಲಾಗುವುದು ಎಂದು ಸಚಿವರು ತಿಳಿಸಿದರು. ಸಾರ್ವಜನಿಕರು ಉತ್ಸವದಲ್ಲಿ ಸ್ವಯಂ ಪ್ರೇರಣೆಯಿಂದ ಭಾಗಿಯಾಗಬೇಕು ಎಂದು ಸಚಿವರು ಮನವಿ ಮಾಡಿದರು.

ಮುಖ್ಯ ವೇದಿಕೆಗೆ ಉಡಚಪ್ಪ ನಾಯಕ ವೇದಿಕೆ ಎಂದು ಮತ್ತು ಕವಿಗೋಷ್ಠಿ ವೇದಿಕೆಗೆ ಜಯತೀರ್ಥ ರಾಜಪುರೋಹಿತ ಅವರ ಹೆಸರನ್ನಿಡಲು ಸಭೆಯಲ್ಲಿ ನಿರ್ಣಯಿಸಲಾಯಿತು.

ಬಸ್ ವ್ಯವಸ್ಥೆಗೆ ಕ್ರಮ:

ಸಾರ್ವಜನಿಕರ ಒತ್ತಾಸೆಯಂತೆ ಸಂಜೆ 7 ಗಂಟೆಯಿಂದ 8, 9 ಗಂಟೆಗೆ ಬಸ್ಸುಗಳನ್ನು ಕೊಪ್ಪಳದಿಂದ ಕನಕಗಿರಿಗೆ ಓಡಿಸಲು ಸಚಿವರು ಕೆಎಸ್ ಆರ್ ಟಿಸಿ ಅಧಿಕಾರಿಗಳಿಗೆ ಸಚಿವರು ನಿರ್ದೇಶನ ನೀಡಿದರು.

ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ ಇಟ್ನಾಳ ಅವರು ಮಾತನಾಡಿ, ಕನಕಗಿರಿ ಉತ್ಸವಕ್ಕಾಗಿ ಈಗಾಗಲೇ 6 ಕೋಟಿ ರೂ ಅನುದಾನ ನಿಗದಿಯಾಗಿದೆ. ಇದಕ್ಕಾಗಿ 18 ಸಮಿತಿಗಳನ್ನು ರಚಿಸಿದ್ದೇವೆ. ಕಾರ್ಯ ಹಂಚಿಕೆ ಮಾಡಿದ್ದೇವೆ.

# ಬಸ್ಟ್ಯಾಂಡ್‌ನಲ್ಲಿ ಮರ ಉರುಳಿ, ಬೈಕ್ ಜಖಂ

• **ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ**

ನಗರದ ಕೇಂದ್ರ ಬಸ್ ನಿಲ್ದಾಣದ ಬೈಕ್ ಪಾರ್ಕಿಂಗ್ ಪ್ರದೇಶದಲ್ಲಿನ ಬೃಹತ್ ಮರವೊಂದು ನಿನ್ನೆ ರಾತ್ರಿ ಬೀಸಿದ ಬಿರುಗಾಳಿಗೆ ಉರುಳಿ ಬಿದ್ದಿದ್ದು ಹತ್ತಾರು ಬೈಕ್ ಗಳು ಜಖಂಗೊಂಡಿವೆ.

ಕಳೆದೊಂದು ವಾರದಿಂದ ನಗರದಲ್ಲಿ ಬಿಸಿಲು ಮೀತಿ ಮೀರಿತ್ತು. ನಿನ್ನೆ ರಾತ್ರಿ ಇದ್ದಕ್ಕಿದ್ದಂತೆ ಹವಾಮಾನ ದಲ್ಲಿ ಬದಲಾವಣೆಯಾಗಿ ಭಾರಿ ಬಿರುಗಾಳಿ ಬೀಸಿತು. ಇದರ ಪರಿಣಾಮ ಬೃಹತ್ ಮರ ಧರೆಗುರುಳಿದೆ.

ಮರ ಬಿದ್ದ ಪರಿಣಾಮ ಇಪ್ಪತ್ತಕ್ಕೂ ಹೆಚ್ಚು ಬೈಕ್ ಗಳು ಜಖಂ ಅಗಿವೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯವಾಗಿಲ್ಲ. ಬೆಳಿಗ್ಗೆ ಮರ ತೆರವು ಕಾರ್ಯ ನಡೆಸಿದ ಪಾಲಿಕೆ ಸಿಬ್ಬಂದಿಯಿಂದ ನಡೆಯಿತು.

ಬೈಕ್ ಗಳು ಜಖಂ ಅಗಿದೆ ಇದಕ್ಕೆ ಯಾರು ಹೊಣೆ. ಇದರಲ್ಲಿ ಅನೇಕ ಬೈಕ್ ಗಳಿಗೆ ಇನ್ಸರೆನ್ಸ್ ಇಲ್ಲದ ಹಿನ್ನೆಲೆ ವಾಹನ ದುರಸ್ತಿ ಮಾಡಿಸೋರು ಯಾರು ಎನ್ನುವದು ದೊಡ್ಡ ಪ್ರಶ್ನೆಯಾಗಿದೆ. ನಷ್ಟದ ಅಂದಾಜು ಮಾಡುತ್ತಿರುವ ಏಖಖಖಿಅ ಅಧಿಕಾರಿಗಳು ಮತ್ತು ಪಾರ್ಕಿಂಗ್ ಸೆಂಟರ್ ಪಡೆದವರು.. ವಾಹನ ದುರಸ್ತಿ ಜವಾಬ್ದಾರಿ ಪಾರ್ಕಿಂಗ್ ನವರದ್ದು ಎನ್ನವದು ವಾಹನ ಸವಾರರ ಅಗ್ರಹವಾಗಿದೆ. ಆದರೆ ಪಾರ್ಕಿಂಗ್ ನವರು ನಮ್ಮದೇನಿದ್ದರೂ ಬೈಕ್ ರಕ್ಷಣೆ ಅಷ್ಟೇ ಪ್ರಕೃತಿ ವಿಕೋಪದಿಂದಾದ ನಷ್ಟ ನಮಗೆ ಬರಲ್ಲ ಎನ್ನುತ್ತಿದ್ದಾರೆ.



# ಅಕ್ರಮ ಪಡಿತರ ಸಾಗಣೆ



• **ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ**

21.04.2026 ರಂದು, ಕುರುಗೋಡು ಪೊಲೀಸ್ ಠಾಣಾ ಸರಹದ್ದಿನ ನೆಲ್ಲುಡಿ ಕೊಬಾಲ್ ಗ್ರಾಮದ, ದೊಡ್ಡ ಕಾಲುವೆ ಹತ್ತಿರ, 1. ಶೇಕ್ಷಾವಲಿ, ವಾಸ ಆದೋನಿ, ಆಂಧ್ರಾಪ್ರದೇಶ. 2. ವಿನೋದ್, ವಾಸ ಮಾನ್ವಿ, ರಾಯಚೂರು ಜಿಲ್ಲೆ & 3. ಹಾಲದಾಳ್ ವೀರಭದ್ರ ವಾಸ ಮಾನ್ವಿ, ರಾಯಚೂರು ಜಿಲ್ಲೆ ರವರುಗಳು ಆಕ್ರಮವಾಗಿ ಪಡಿತರ ಅಕ್ಕಿ ಸಾಗಣೆ ಮಾಡುತ್ತಿದ್ದಾಗ, ಕುರುಗೋಡು ಪೊಲೀಸ್ ಠಾಣೆಯ ಪಿ.ಎಸ್.ಐ ಸುಪ್ರೀತ್.ವಿ, ಸಿಬ್ಬಂದಿಯವರಾದ ವಿಜಯಕುಮಾರ್, ರಾಜಶೇಖರ್, ಆಂಜಿನಿ ಹಾಗೂ ಬಿ.ವಿರುಪಾಕ್ಷ ಗೌಡ, ಆಹಾರ ನೀರಿಕ್ಷಕರು ರವರುಗಳು ಜಂಟಿಯಾಗಿ ದಾಳಿ ಮಾಡಿ, ರೂ 87300 ಮೌಲ್ಯದ, 17.460 ಟನ್ ಪಡಿತರ ಅಕ್ಕಿ, ಒಂದು ಇಚರ್ ಕಂಪನಿಯ 3 ಜನ ಆರೋಪಿಗಳನ್ನು ವಶಕ್ಕೆ ಮಿನಿ ಲಾರಿ ಜಪ್ತುಪಡಿಸಿಕೊಳ್ಳಲಾಗಿದೆ. ಪಡೆಯಲಾಗಿದೆ.

ಘಟನೆ ಕುರಿತು ಕುರುಗೋಡು ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 93/2026 ಗ/ಖ 7,3,6(೦) ಇಅ ೦ಟಿಃಣ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

## ವಾಗ್ದೇವಿ ಭಜನಾ ಮಂಡಳಿಯ 36ನೇ ವಾರ್ಷಿಕೋತ್ಸವ

# ಶ್ರೀಹರಿಯ ದಶಾವತಾರ ಕೃತಿ ಬಿಡುಗಡೆ




• **ಮಲ್ಲಮ್ಮ ನುಡಿ ವಾರ್ತೆ, ಬಸವನಗುಡಿ**

ನಗರದ ಬಸವನಗುಡಿಯ ಶ್ರೀ ಉತ್ತರಾದಿ ಮಠದಲ್ಲಿ ವಾಗ್ದೇವಿ ಭಜನಾ ಮಂಡಳಿಯ 36ನೇ ವಾರ್ಷಿಕೋತ್ಸವವನ್ನು ಆಯೋಜಿಸಲಾಗಿತ್ತು. ಜಯತೀರ್ಥ ವಿದ್ಯಾಪೀಠದ ಪ್ರಾಂಶುಪಾಲ ಡಾ.ಸತ್ಯಧ್ಯಾನಚಾರ್ ಕಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ವಾಗ್ದೇವಿ ಭಜನಾ ಮಂಡಳಿಯ ಅಧ್ಯಕ್ಷಿಣಿ ಡಾ. ಎ.ಕುಮುದರವರು ಸಂಪಾದಿಸಿರುವ ವಿವಿಧ ಯತಿಗಳು ಮತ್ತು ಹರಿದಾಸ ರಚಿಸಿದ ಶ್ರೀಹರಿಯ ದಶಾವತಾರ ಕೀರ್ತನೆಗಳ ಕೃತಿಯನ್ನು ವಿದ್ವಾನ್ ಕರ್ನೂಲ್ ಶ್ರೀನಿವಾಸ ಆಚಾರ್ಯರು ಲೋಕಾರ್ಪಣೆಗೊಳಿಸಿದರು. 83ರ ಇಳಿ ವಯಸ್ಸಿನಲ್ಲೂ ಲವಲವಿಕೆಯಿಂದ ದಾಸ ಸಾಹಿತ್ಯದಲ್ಲಿ ಅನೇಕ ಕೃತಿಗಳನ್ನು ಪ್ರಕಟಪಡಿಸಿರುವ ಇವರ ಕ್ರಿಯಾಶೀಲತೆ ಯುವ ಜನಾಂಗಕ್ಕೆ ಮಾದರಿ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶ್ರೀಮತಿ ರಾಜಲಕ್ಷ್ಮಿ ಪಾರ್ಥಸಾರಥಿ ಮಾತನಾಡುತ್ತಾ ಶ್ರೀಹರಿಯ ದಶಾವತಾರಗಳು ವಿಕಾಸವಾದಕ್ಕೆ ಪೂರಕವಾಗಿದ್ದು ಸಂಶೋಧನಾತ್ಮಕ ದೃಷ್ಟಿಯೊಂದಿಗೆ ಭಕ್ತಿಯ ಸುಧೆಯು ಇಲ್ಲಿ ಮೇಳಯಿಸಿದೆ. ಸುಮಾರು 132 ಕೀರ್ತನೆಗಳ ಸಂಗ್ರಹ ಇದಾಗಿದ್ದು ಸಂಗೀತಾಸಕ್ತರಿಗೆ ಆಕರ ಗ್ರಂಥವಾಗಿ ಶೋಭಿಸುತ್ತದೆ ಎಂದು ತಿಳಿಸಿದರು. ವೇದಿಕೆಯಲ್ಲಿ ಅಂಕಣಕಾರ ಡಾ. ಗುರುರಾಜ ಪೋಶೆಟ್ಟಿಹಳ್ಳಿ ಮತ್ತು ಶ್ರೀನಿವಾಸ ಉತ್ಸವ ಬಳಗದ ಸಂಸ್ಥಾಪಕ ಅಧ್ಯಕ್ಷ ಡಾ. ಟಿ ವಾದಿರಾಜ ರವರು ಉಪಸ್ಥಿತರಿದ್ದರು .

ಕಾರ್ಯಕ್ರಮದ ಆರಂಭದಲ್ಲಿ ಕು. ಸಾಚಿ ವರುಣ್ ರಿಂದ ಭರತನಾಟ್ಯ ನಡೆಯಿತು. ದೇವಗಿರಿ ಲಕ್ಷ್ಮಿಕಾಂತ ಸಂಘದ ಅಧ್ಯಕ್ಷಣಿ ಶ್ರೀಮತಿ ಜಿ.ವಿ ಶಾಂತ ಬಾಯಿ, ಶ್ರೀಮತಿ ಭಾಗ್ಯ ಸತೀಶ್, ಶ್ರೀಮತಿ ರೇಖಾ ಲಕ್ಷ್ಮೇಶ್ವರ ರವರುಗಳನ್ನು ಸನ್ಮಾನಿಸಲಾಯಿತು. ವಿವಿಧ ಭಜನಾ ಮಂಡಳಿಗಳ ಮಾತೆಯರಿಗೆ ರಸಪ್ರಶ್ನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಶ್ರೀವಾರಿ ಫೌಂಡೇಶನ್ ನ ವೆಂಕಟೇಶಮೂರ್ತಿ ರವರ ನೇತೃತ್ವದಲ್ಲಿ ವೈಭವದ ಶ್ರೀನಿವಾಸ ಕಲ್ಯಾಣೋತ್ಸವದೊಂದಿಗೆ ಸಂಪನ್ನವಾಯಿತು.

# 25 ಕ್ಕೆ ನ್ಯಾಯಾಲಯ ಉದ್ಘಾಟನೆ



• **ಮಲ್ಲಮ್ಮ ನುಡಿ ವಾರ್ತೆ, ಕಂಪ್ಲಿ**

ಪಟ್ಟಣದ ಜನರಿಗೆ ದೀರ್ಘಕಾಲದ ನಿರೀಕ್ಷೆಯಾಗಿದ್ದ ನ್ಯಾಯಾಂಗ ಸೌಲಭ್ಯ ಇದೀಗ ಸಾಕಾರವಾಗುತ್ತಿದೆ. ಕಂಪ್ಲಿ ಪಟ್ಟಣದ ಮಾರುತಿ ನಗರದಲ್ಲಿರುವ ಪುರಸಭೆಯ ಉದ್ಯಾನವನ ಕಟ್ಟಡದಲ್ಲಿ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಲಯ ಇದೇ ಏಪ್ರಿಲ್ 25ರಂದು ಅಧಿಕೃತವಾಗಿ ಆರಂಭಗೊಳ್ಳಲಿದೆ.

ಈ ಮೂಲಕ ತಾಲೂಕು ವಕೀಲರ ಬಳಗವು ಕಳೆದ ಮೂರು ವರ್ಷಗಳಿಂದ ನಡೆಸುತ್ತಿದ್ದ ಹೋರಾಟಕ್ಕೆ ಫಲ ದೊರೆತಿದ್ದು, ಇದುವರೆಗೆ ನ್ಯಾಯಾಲಯದ ಕಾರ್ಯಗಳಿಗಾಗಿ ಬಳ್ಳಾರಿಗೆ ತೆರಳಬೇಕಾಗಿದ್ದ ಸಾರ್ವಜನಿಕರಿಗೆ ದೊಡ್ಡ ಮಟ್ಟದ ಅನುಕೂಲ ಕಲ್ಪಿಸಲಿದ್ದು, ನೆಮ್ಮದಿ ಮೂಡಿಸಿದೆ.

ಕಟ್ಟಡ ಸಿದ್ಧತೆ ಪೂರ್ಣ ನ್ಯಾಯಾಲಯ ಸ್ಥಾಪನೆಗಾಗಿ ಸರ್ಕಾರದಿಂದ ▯25 ಲಕ್ಷ ಅನುದಾನ ಮಂಜೂರಾಗಿದ್ದು, ಫೆಬ್ರವರಿ 26ರಿಂದ ಕಟ್ಟಡ ನವೀಕರಣ ಕಾಮಗಾರಿ ಆರಂಭಗೊಂಡಿತ್ತು. ಇದೀಗ ಕಟ್ಟಡದಲ್ಲಿ ಬಣ್ಣ ಹಚ್ಚುವುದು ಸೇರಿದಂತೆ ಎಲ್ಲಾ ಮೂಲಸೌಕರ್ಯಗಳನ್ನು ಸಿದ್ಧಪಡಿಸಲಾಗಿದೆ.

ನ್ಯಾಯಾಧೀಶರ ಪೀಠ ಸಾಕ್ಷಿ ಕಟ್ಟೆ ವಕೀಲರ ಆಸನಗಳು ಕಕ್ಷಿಧಾರರ ಆಸನ ವ್ಯವಸ್ಥೆ ಕಟಕಟೆ ವ್ಯವಸ್ಥೆ

ಇವುಗಳೊಂದಿಗೆ ನ್ಯಾಯಾಧೀಶರ ಕೊಠಡಿ, ನ್ಯಾಯಾಲಯದ ಸಿಬ್ಬಂದಿ ಕಚೇರಿ ಹಾಗೂ ಹೊರಭಾಗದ ಸ್ವಚ್ಛತಾ ಕಾಮಗಾರಿಗಳು ಅಂತಿಮ ಹಂತದಲ್ಲಿವೆ.

ಪರಿಶೀಲನೆಗೆ ಜಿಲ್ಲಾ ನ್ಯಾಯಾಧೀಶರ ಭೇಟಿ ಏಪ್ರಿಲ್ 15ರಂದು ಜಿಲ್ಲಾ ಹೆಚ್ಚುವರಿ ನ್ಯಾಯಾಧೀಶರು ನ್ಯಾಯಾಲಯ ಕಟ್ಟಡಕ್ಕೆ ಭೇಟಿ ನೀಡಿ ಸಿದ್ಧತೆಗಳನ್ನು ಪರಿಶೀಲಿಸಲಿದ್ದಾರೆ ಎಂದು ಕಂಪ್ಲಿ ವಕೀಲರ ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ. ಉದ್ಘಾಟನಾ ಸಮಾರಂಭದ ವಿವರ ದಿನಾಂಕ: 25–04–2026 (ಶನಿವಾರ) ಸಮಯ: ಬೆಳಿಗ್ಗೆ 10:00 ಉದ್ಘಾಟನೆ ನೆರವೇರಿಸುವವರು : ಗೌರವಾನ್ವಿತ ನ್ಯಾಯಮೂರ್ತಿ ಆರ್. ನಟರಾಜ್ (ನ್ಯಾಯಾಧೀಶರು, ಕರ್ನಾಟಕ ಉಚ್ಚ ನ್ಯಾಯಾಲಯ & ಆಡಳಿತಾತ್ಮಕ ನ್ಯಾಯಾಧೀಶರು, ಬಳ್ಳಾರಿ ಜಿಲ್ಲೆ) ಮುಖ್ಯ ಅತಿಥಿಗಳು :

ಎಚ್.ಕೆ. ಪಾಟೀಲ್ ಕಾನೂನು, ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಸಚಿವರು.

ಬ.ಜಡ್. ಜಮೀರ್ ಅಹ್ಮದ್ ಖಾನ್ ವಸತಿ, ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

ಈ.ತುಕಾರಾಂ ಲೋಕಸಭಾ ಸದಸ್ಯರು ವಿಶೇಷ ಆಹ್ವಾನಿತರು: ನಿವೃತ್ತ ಜಿಲ್ಲಾ ನ್ಯಾಯಾಧೀಶೆ ಎಚ್.ಎಸ್. ಪುಷ್ಪಾಂಜಲಿ ದೇವಿ. ಕರ್ನಾಟಕ ರಾಜ್ಯ ವಕೀಲರ ಸಂಘದ ಸದಸ್ಯರು ಜೆ.ಎಂ. ಅನಿಲ್ ಕುಮಾರ್, & ಕೆ. ಕೋಟೇಶ್ವರ ರಾವ್. ಹೆಚ್ಚುವರಿ ಅಡ್ವಕೇಟ್ ಜನರಲ್ ಎಸ್. ಇಸ್ಮಾಯಿಲ್ ಜಬಿವುಲ್ಲಾ. ವಿವಿಧ ವಕೀಲರ ಸಂಘಗಳ ಅಧ್ಯಕ್ಷರು. ಕಾರ್ಯಕ್ರಮವು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ಕೆ.ಜೆ. ಶಾಂತಿ ಅವರ ಉಪಸ್ಥಿತಿಯಲ್ಲಿ, ಶಾಸಕರಾದ ಜೆ.ಎನ್. ಗಣೇಶ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ವಾರದಲ್ಲಿ 2 ದಿನ ಕಾರ್ಯ

ಆರಂಭಿಕ ಹಂತದಲ್ಲಿ ನ್ಯಾಯಾಲಯವು ವಾರದಲ್ಲಿ ಎರಡು ದಿನ (ಶುಕ್ರವಾರ ಮತ್ತು ಶನಿವಾರ) ಕಾರ್ಯನಿರ್ವಹಿಸಲಿದ್ದು, ಮುಂದಿನ ದಿನಗಳಲ್ಲಿ ವಿಸ್ತರಣೆ ಸಾಧ್ಯತೆ ಇದೆ. ಸಾಂಸ್ಕೃತಿಕ ಕಾರ್ಯಕ್ರಮ & ಸತ್ಕಾರ ಉದ್ಘಾಟನಾ ಕಾರ್ಯಕ್ರಮದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ನ್ಯಾಯಾಲಯ ಸ್ಥಾಪನೆಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕಾರಣರಾದವರಿಗೆ ಸತ್ಕಾರ ಕಾರ್ಯಕ್ರಮ ಕೂಡ ಏರ್ಪಡಿಸಲಾಗಿದೆ.

# ಶಿಬಿರದಲ್ಲಿ ಪಡೆದ ಅನುಭವ ಸಮಾಜದ ಒಳಿತಿಗೆ ಬಳಸಿಕೊಳ್ಳಿ




• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರಗಳಲ್ಲಿ ಪಡೆಯುವ ಅನುಭವವನ್ನು ವಿದ್ಯಾರ್ಥಿಗಳು ಸಮುದಾಯದ ಒಳಿತಿಗಾಗಿ ಬಳಸಿ ಸಮಾಜದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಬೇವೂರಿನ ಆದರ್ಶ ವಿದ್ಯಾವರ್ಧಕ ಸಂಘದ ಸದಸ್ಯ ಎಸ್.ಎಂ.ಹೊಟ್ಟಿಗೌಡರ ಹೇಳಿದರು.

ತಾಲೂಕಿನ ಬಿಲ್‌ಕೆರೂರ ಗ್ರಾಮದಲ್ಲಿ ಮಂಗಳವಾರ ಜರುಗಿದ ಬೇವೂರಿನ ಪಿ.ಎಸ್.ಸಜ್ಜನ ಕಲಾ ಕಾಲೇಜಿನ ಎನ್.ಎಸ್.ಎಸ್. ಘಟಕದ ವಿಶೇಷ ವಾರ್ಷಿಕ ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಶಿಬಿರದಲ್ಲಿ ಸಮನ್ವಯದ ಬದುಕು, ಗ್ರಾಮೀಣ ಸಮಸ್ಯೆಗಳ ಅರಿವು, ಸಮಾಜ ಸೇವೆಯ ಗುಣಗಳನ್ನು ಕಲಿಯುವ ವಿದ್ಯಾರ್ಥಿಗಳು ಜೀವನದುದ್ದಕ್ಕೂ ಅವುಗಳನ್ನು ಪಾಲಿಸಿಕೊಂಡು ಹೋಗಬೇಕು ಎಂದರು.

ಮುಖ್ಯ ಅತಿಥಿಯಾಗಿದ್ದ ಉಪನ್ಯಾಸಕ ಎಸ್.ಎಸ್.ಆದಾಪೂರ, ಶಿಬಿರಾರ್ಥಿಗಳು ಸೇವಾ ಮನೋಭಾವ ಬೆಳೆಸಿಕೊಂಡು ಮುನ್ನಡೆಯಬೇಕು. ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಗಳು ಪರಸ್ಪರ ಹೊಂದಾಣಿಕೆ, ನಾಯಕತ್ವದ ಗುಣ, ಭಾವೈಕ್ಯತೆಯ ಚಿಂತನೆಗಳನ್ನು ವಿದ್ಯಾರ್ಥಿಗಳಲ್ಲಿ ರೂಪಿಸುತ್ತಿದ್ದು, ಗ್ರಾಮ ಸಂಸ್ಕೃತಿಯನ್ನು ಪರಿಚಯಿಸಿ ನಿಸ್ವಾರ್ಥ ಸೇವೆಯ ಗುಣ ಬೆಳೆಸಿಕೊಳ್ಳಲು ನೆರವಾಗುತ್ತವೆ ಎಂದು ಹೇಳಿದರು.

ಕಾಲೇಜಿನ ಪ್ರಾಚಾರ್ಯ ಜಗದೀಶ ಭೈರಮಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿ, ಶಿಬಿರದಲ್ಲಿ ಕಲಿತ ಮೌಲ್ಯಗಳನ್ನು ಬದುಕಿನುದ್ದಕ್ಕೂ ಅನುಸರಿಸಿ ಸಮಾಜದ ಸೇವೆಗೆ ಎಲ್ಲರೂ ಸಿದ್ಧರಾಗಬೇಕು ಎಂದರು. ಗ್ರಾಮದ ಹಿರಿಯರಾದ ದಾವಲಸಾಬ ಹಳ್ಳೂರ, ಬಸನಗೌಡ ಪಾಟೀಲ, ಶಿಬಿರದ ನಾಯಕರಾದ ಅಭಿಷೇಕ ಪೂಜಾರಿ ಹಾಗೂ ಭಾಗಿರಥಿ ಭಾರಕೇರ ವೇದಿಕೆಯಲ್ಲಿದ್ದರು.

ವಿಶ್ರಾಂತ ಪ್ರಾಚಾರ್ಯ ಬಿ.ಬಿ.ಬೇವೂರ ಪ್ರಾರ್ಥನೆ ಹೇಳಿದರು. ಶ್ವೇತಾ ಕಾಗಿ ಸ್ವಾಗತಿಸಿದರು. ಪ್ರೊ.ಎ.ಎಂ. ಗೊರಚಿಕ್ಕನವರ ಪರಿಚಯಿಸಿದರು. ಪ್ರೊ.ಎಸ್.ಬಿ.ಹಂಚಿನಾಳ ನಿರೂಪಿಸಿದರು. ಶಿಬಿರದ ಯೋಜನಾಧಿಕಾರಿ ಪ್ರೊ. ಜಿ.ಎಸ್.ಗೌಡರ ವಂದಿಸಿದರು.

# ಜಾನುವಾರುಗಳಿಗೆ ಕಾಲು, ಬಾಯಿಬೇನೆ ರೋಗಕ್ಕೆ ಲಸಿಕೆ

• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ಜಿಲ್ಲೆಯಲ್ಲಿ ಜಾನುವಾರುಗಳಿಗೆ ಎಪ್ರೀಲ್ 23 ರಿಂದ ಮೇ 22 ರವರೆಗೆ 9ನೇ ಸುತ್ತಿನ ಕಾಲು, ಬಾಯಿಬೇನೆ ರೋಗಕ್ಕೆ ಲಸಿಕಾ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಜರುಗಿದ ಲಸಿಕಾ ಕಾರ್ಯಕ್ರಮದ ಜಿಲ್ಲಾ ಮಟ್ಟದ ನಿರ್ವಹಣಾ ಸಮಿತಿಯ ಪೂರ್ವಭಾವಿ ಸಿದ್ಧತೆಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಲಸಿಕಾ ಕಾರ್ಯಕ್ರಮದ ಜೊತೆಗೆ ಜಾನುವಾರುಗಳಿಗೆ ಚರ್ಮಗಂಟು ರೋಗದ ಲಸಿಕೆ ಮತ್ತು ನಾಯಿಗಳಿಗೆ ರೇಬಿಸ್ ಲಸಿಕೆಯನ್ನು ಉಚಿತವಾಗಿ ನೀಡಲಾಗುತ್ತಿದೆ. ಇದರ ಸದುಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳುವಂತೆ ತಿಳಿಸಿದರು.


ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಡಾ.ಎಸ್.ಎಚ್. ಕರಡಿಗುಡ್ಡ, ಲಸಿಕಾ ಕಾರ್ಯಕ್ರಮದ ಸಿದ್ದತೆ ಕುರಿತು ವಿವರಣೆ ನೀಡಿದರು. ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ ಪ್ರತಿ 6 ತಿಂಗಳಿಗೊಮ್ಮೆ ಕಾಲು ಬಾಯಿ ರೋಗದ ಲಸಿಕೆ ಹಾಕಿಸಿಕೊಳ್ಳುವುದು ಕಡ್ಡಾಯವಾಗಿದೆ. ಜಾನುವಾರುಗಳಿಗೆ ಈ ರೋಗ ಬಂದ ನಂತರ ರೈತರಿಗೆ ಆರ್ಥಿಕ ಸಂಕಷ್ಟಗಳನ್ನು ತಂದೊಡ್ಡುತ್ತದೆ. ಲಸಿಕೆ ಹಾಕಿಸಿ ರೋಗ ನಿಯಂತ್ರಿಸಲು ಮತ್ತು ಕಾಲು ಬಾಯಿ ರೋಗ ಮುಕ್ತ ಜಿಲ್ಲೆ ಹಾಗೂ ರಾಜ್ಯವನ್ನಾಗಿ ಮಾಡಲು ಇದೊಂದು ಉತ್ತಮ ಮಾರ್ಗ ಎಂದು ತಿಳಿಸಿದರು.

20ನೇ ಜಾನುವಾರು ಗಣತಿ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 15,28,158 ಜಾನುವಾರುಗಳಿದ್ದು, ಸದ್ಯ 11750 ಡೋಜ್ ಲಸಿಕೆ ಲಭ್ಯವಿರುತ್ತದೆ. ಜಿಲ್ಲೆಯಲ್ಲಿ ಒಟ್ಟು 3938 ಬ್ಲಾಕ್‌ಗಳನ್ನು ಮಾಡಲಾಗಿದೆ. ಇಲಾಖೆಯ ಹಾಗೂ ಇಲಾಖೇತರ ಸೇರಿ ಒಟ್ಟು 524 ಸಿಬ್ಬಂದಿಗಳು ಕಾರ್ಯನಿರ್ವಹಿಸಲಿದ್ದಾರೆ. ಲಸಿಕೆದಾರರು ಮನೆ ಬಾಗಿಲಿಗೆ ಭೇಟಿ ನೀಡಿ, ಜಾನುವಾರುಗಳಿಗೆ ಲಸಿಕೆ ಹಾಕಲಿದ್ದಾರೆ. ರೈತ–ಬಾಂಧವರು ಲಸಿಕಾ ಸಿಬ್ಬಂದಿಗಳಿಗೆ ಸಹಕರಿಸಿ, ತಪ್ಪದೇ ಜಾನುವಾರುಗಳಿಗೆ ಲಸಿಕೆ ಹಾಕಿಸಬೇಕೆಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಕಾಲುಬಾಯಿ ರೋಗದ ಲಸಿಕಾ ಕಾರ್ಯಕ್ರಮದ ಪ್ರಚಾರ ಸಾಮಗ್ರಿಗಳನ್ನು ಬಿಡುಗಡೆ ಮಾಡಲಾಯಿತು. ಸಭೆಯಲ್ಲಿ ಕೆ.ಎಂ.ಎಫ್‌ನ ಅಧಿಕಾರಿಗಳು, ಜಿಲ್ಲಾ ನಿರ್ವಹಣಾ ಸಮಿತಿ ಸದಸ್ಯ ಅಧಿಕಾರಿಗಳು ಹಾಗೂ ಆಯಾ ತಾಲೂಕಿನ ಮುಖ್ಯ ಪಶುವೈದ್ಯಾಧಿಕಾರಿಗಳು ಉಪಸ್ಥಿತರಿದ್ದರು.



# ಗುರುಮಹಾಂತ ಶ್ರೀ ಸೇರಿ ಮೂವರಿಗೆ ಡಾಕ್ಟರೇಟ್



• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ಚಿತ್ತರಗಿಯ ವಿಜಯ ಮಹಾಂತೇಶ ಸಂಸ್ಥಾನಮಠ ಇಳಕಲ್ಲಿನ ಪೂಜ್ಯ ಶ್ರೀ ಗುರುಮಹಾಂತ ಶ್ರೀಗಳು ಸೇರಿ ಮೂವರಿಗೆ ಜಮಖಂಡಿಯ ಬಾಗಲಕೋಟೆ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿದೆ.

ಸಮಾಜ ಸುಧಾರಣೆ, ಶೈಕ್ಷಣಿಕ ಕ್ಷೇತ್ರದಲ್ಲಿನ ಸೇವೆ ಹಾಗೂ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಗೈಯುತ್ತಿರುವ ಅನುಪಮ ಸೇವೆಗಾಗಿ ಪೂಜ್ಯ ಗುರುಮಹಾಂತ ಶ್ರೀಗಳಿಗೆ ಗೌರವ ಡಾಕ್ಟರೇಟ್ ನೀಡಲಾಗಿದೆ.

ಹಾಗೆಯೇ ಭಾರತೀಯ ಬಾಹ್ಯಾಕಾಶ ಕಾರ್ಯಕ್ರಮಗಳಿಗೆ ನೀಡಿದ ಅತ್ಯಮೂಲ್ಯ ಕೊಡುಗೆಗಳನ್ನು ಗುರುತಿಸಿ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾದ ಪ್ರಶಿದ್ಧ ಬಾಹ್ಯಾಕಾಶ ವಿಜ್ಞಾನಿ ಎಸ್.ನಂಬಿ ನಾರಾಯಣನ್ ಅವರಿಗೆ ಮತ್ತು ಶಿಕ್ಷಣ ಮತ್ತು ಸಮಾಜಕ್ಕೆ ನೀಡಿದ ಮಹತ್ತರ ಕೊಡುಗೆ ಗುರುತಿಸಿ ಟೆಕ್ ಉದ್ಯಮಿ ಮಹೇಶ ಬೆಲ್ಲದ ಅವರಿಗೆ ಗೌರವ ಡಾಕ್ಟರೇಟ್ ನೀಡಲಾಗಿದೆ.

ಎಪ್ರೀಲ್ 24 ರಂದು ಜಮಖಂಡಿಯ ಬಿ.ಎಲ್.ಡಿ.ಇ.ಎ ಆವರಣದಲ್ಲಿರುವ ದರ್ಬಾರ್ ಹಾಲ್‌ನಲ್ಲಿ ಬೆಳಿಗ್ಗೆ 11–30 ಗಂಟೆಗೆ ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್ ಅಧ್ಯಕ್ಷತೆಯಲ್ಲಿ ಹಾಗೂ ಸಹಕುಲಾಧಿಪತಿ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ ಉಪಸ್ಥಿತಿಯಲ್ಲಿ ಜರುಗುವ ಬಾಗಲಕೋಟೆ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ ಸಮಾರಂಭದಲ್ಲಿ ಪೂಜ್ಯರು ಸೇರಿ ಮೂವರಿಗೂ ಡಾಕ್ಟರೇಟ್ ಪ್ರದಾನ ಮಾಡಲಾಗುವುದು ಎಂದು ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

# ರಣ ರಣ ಬಿಸಿಲು : ಧರೆಗಿಳಿದ ಮಳೆ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಪಟ್ಟಣ ಸೇರಿದಂತೆ ವಿವಿಧ ಗ್ರಾಮೀಣ ಭಾಗಗಳಲ್ಲಿ ಕಳೆದ ಕೆಲವು ದಿನಗಳಿಂದ ಬಿರು ಬಿಸಿಲಿನಿಂದಾಗಿ ಜನರು ಕಂಗೆ–ಟ್ಟಿದ್ದರು, ಇದರಿಂದ ನೀರಿನ ಜಲ ಮೂಲಗಳು ಬತ್ತಿ ಹೋಗುವ ಆತಂಕದ ಸ್ಥಿತಿಯಲ್ಲಿವೆ.

ಬಿಸಿಲಿನ ತಾಪ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಮಂಗಳವಾರ ಗಾಳಿ–ಗುಡುಗು ಸಹಿತ ಸ್ವಲ್ಪ ಮಟ್ಟಿಗೆ ಮಳೆಯಾಗಿದೆ. ಗಾಳಿ ರಭಸಕ್ಕೆ ಟಿನ್ ಶಿಟ್ಗಳು ಹಾರಿವೆ ಯಾವುದೇ ಅ ಹಿತಕರ ಘಟನೆ ಸಂಭವಿಸಿಲ್ಲ. ಈ ಅಕಾಲಿಕ ಮಳೆಯು ಭೀಕರ ಬಿಸಿಲಿನ ತಾಪಮಾನದಿಂದ ಸಮಾಧಾನ ಸಿಕ್ಕಂತಾಗಿದೆ. ಎರಡು ದಿನಗಳಿಂದ ದಿನ ಬಿಟ್ಟು ದಿನ ಗಾಳಿ ಗುಡುಗು ಸಹಿತ ಅಲ್ಪ ಮಳೆಯಾದರೆ. ಭಾನುವಾರ ಮತ್ತು ಮಂಗಳವಾರ ಸಂಜೆ ಬಿರುಗಾಳಿ ಬಿಸಿದೆ, ಇದರ ಜೊತೆಗೆ ಗುಡುಗು, ಮಿಂಚಿನಿಂದ ಕಡಿಮೆ ಮಳೆ ಸುರಿದಿದೆ. ಗಾಳಿಗೆ ಅಲಲ್ಲಿ ವಿದ್ಯುತ್ ವೈಯರ್ ಜೋತು ಬಿದ್ದ ಪರಿಣಾಮ ಎರಡು ದಿನಗಳಿಂದ ವಿದ್ಯುತ್ ಅಲ್ಪ ಸ್ವಲ್ಪ ಸರಬರಾಜಿನಲ್ಲಿ ತೊಂದರೆಯಾಗಿತು. ತಾಪಮಾನದ ವೈಪರಿತ್ಯದಿಂದ ಅಕಾಲಿಕ ಮಳೆ ಬಂದಿದೆ ಎಂದು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿತ್ತು. ಬಯಲು ಸೀಮೆ ಪ್ರದೇಶದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಬಿಸಿಲಿನ ತಾಪಮಾನದ ಹೊಡೆತಕ್ಕೆ ತಂಪು ಪಾನೀ, ಮಜ್ಜಿಗೆ, ಜ್ಯೂಸ್ ಸೇರಿದಂತೆ ನೆರಳಿನ ಮೊರೆ ಹೋಗುತ್ತಿದ್ದಾರೆ. ಕಳೆದೊಂದು ವಾರದಿಂದ ಬಿಸಿಲಿನ ತಾಪ 36 ರಿಂದ 39 ಡಿಗ್ರಿ ಸಮೀಪಿಸುತ್ತಿದ್ದು, ಮುಂದಿನ ದಿನ ಇನ್ನೂ ಬಿಸಿಲು ಹೆಚ್ಚಾಗುವ ಸಾಧ್ಯತೆಯಿದ್ದು, ಮನೆಯಿಂದ ಹೊರಬರುವುದೆಂದರೆ ಜ್ವಾಲೆಯಲ್ಲಿ ಬಂದು ಬಿದ್ದಂತಾಗುತ್ತದೆ. 8ಘಂಟೆಗೆ ಬೆಳಿಗ್ಗೆಯಿಂದ ಬಿರು ಬಿಸಿಲು ಶುರುವಾಗುತಿದ್ದು, ಹಗಲು ಬಿಸಿ ಆದರೆ ರಾತ್ರಿ ಸೆಕೆಯಿಂದ ಮಲಗಲು ಹಿಂಸೆಯಾಗಿದೆ. ಬಿಸಿಲಿನ ಕಾರಣಕ್ಕೆ ಗ್ರಾಹಕರು ಬೆಳಿಗ್ಗೆ ಮತ್ತು ಸಾಯಂಕಾಲ ಹೊರ ಬರುತ್ತಿದ್ದಾರೆ. ಹೆಚ್ಚಿನ ಬಿಸಿಲಿನ ಪರಿಣಾಮದಿಂದ ಆರೋಗ್ಯ ಇಲಾಖೆ ಹಾಗೂ ಹವಾಮಾನ ಇಲಾಖೆ ಸಲಹೆ ಸೂಚನೆ ನೀಡಿದ್ದಾರೆ. ವ್ಯಾಪಾರಸ್ಥರ ಹಣ್ಣು ಮತ್ತು ತರಕಾರಿಗಳು ಬಿಸಿಲಿನ ತಪಾದಿಂದಾಗಿ ಬಾಡುತ್ತಿವೆ. ವ್ಯಾಪಾರದಲ್ಲಿ ಕೊಂಚ ವ್ಯತ್ಯಾಸವಾಗುತ್ತಿದೆ.

# ನಿಯಮ ಉಲ್ಲಂಘನೆ ಆರೋಪ: ವಜಾಗೊಂಡ ಚಾಲಕ ಕಚೇರಿಯಲ್ಲಿ ಪ್ರತ್ಯಕ್ಷ



• ಮಲ್ಲಮ್ಮ ನುಡಿ ವಾರ್ತೆ, ಬೀದರ್

ಸರ್ಕಾರಿ ಆದೇಶ ಹಾಗೂ ನ್ಯಾಯಾಲಯದ ನಿರ್ದೇಶನಗಳನ್ನು ಉಲ್ಲಂಘಿಸಿ, ಭ್ರಷ್ಟಾಚಾರ ಮತ್ತು ಸಮವಸ್ತ್ರ ದುರ್ಬಳಕೆ ಪ್ರಕರಣದಲ್ಲಿ ಆರೋಪಿಯಾಗಿರುವ ವ್ಯಕ್ತಿಯೊಬ್ಬರು ಬೀದರ್ ಪ್ರಾದೇಶಿಕ ಸಾರಿಗೆ ಕಚೇರಿ (ಆರ್‌ಟಿಒ)ಯಲ್ಲಿ ರಾಜಾರೋಷವಾಗಿ ಸಂಚರಿಸಿರುವ ಘಟನೆ ವಿವಾದಕ್ಕೆ ಕಾರಣವಾಗಿದೆ.

ಮಾಹಿತಿಯ ಪ್ರಕಾರ, ಕಳೆದ ಜನವರಿ 7, 2026ರಂದು ಬೀದರ್ ಆರ್‌ಟಿಒ ಕಚೇರಿಗೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದರು. ಈ ವೇಳೆ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಚಾಲಕರಾಗಿ ಕೆಲಸ ಮಾಡುತ್ತಿದ್ದ ಶಿವಪುತ್ರ, ಬಸವರಾಜ ಹಾಗೂ ಗುರುರಾಜ ಅವರು ಪೊಲೀಸರಂತೆ ಸಮವಸ್ತ್ರ ಧರಿಸಿ ಸರ್ಕಾರಿ ಲಾಂಛನಗಳನ್ನು ದುರ್ಬಳಕೆ ಮಾಡುತ್ತಿರುವುದು ಬೆಳಕಿಗೆ ಬಂದಿತ್ತು.

ಈ ಸಂಬಂಧ ನೂತನ ನಗರ ಪೊಲೀಸ್ ಠಾಣೆಯಲ್ಲಿ ಃಓಖ–2023 ಅಡಿಯಲ್ಲಿ ಅಡುಟಜ ಓಂ. 07/2026 ಪ್ರಕರಣ ದಾಖಲಾಗಿದ್ದು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

ಘಟನೆಯ ನಂತರ ಅಪರ ಸಾರಿಗೆ ಆಯುಕ್ತರು (ಆಡಳಿತ), ಬೆಂಗಳೂರು ಅವರ ಸೂಚನೆಯಂತೆ, ನ್ಯಾಯಾಲಯದ ಅಂತಿಮ ತೀರ್ಪಿನವರೆಗೆ ಆರೋಪಿಗಳನ್ನು ತಾತ್ಕಾಲಿಕವಾಗಿ ಕರ್ತವ್ಯದಿಂದ ಬಿಡುಗಡೆಗೊಳಿಸಿ ಆದೇಶ ಹೊರಡಿಸಲಾಗಿತ್ತು.

ಆದರೆ, ಸೋಮವಾರ ನಡೆದ ವಿಶ್ವಗುರು ಬಸವೇಶ್ವರರ ಜಯಂತಿ ಆಚರಣೆಯ ವೇಳೆ ಕೆಲಸದಿಂದ ವಜಾಗೊಂಡಿರುವ ಚಾಲಕ ಶಿವಪುತ್ರ ಆರ್‌ಟಿಒ ಕಚೇರಿಯಲ್ಲಿ ಕಾಣಿಸಿಕೊಂಡಿರುವುದು ಸಾರ್ವಜನಿಕ ವಲಯದಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ. ಅಲ್ಲದೆ, ಕಚೇರಿಯ ಮೋಟಾರು ವಾಹನ ನಿರೀಕ್ಷಕರೊಂದಿಗೆ ಫೋಟೋಗೆ ಪೋಸ್ ನೀಡಿರುವುದು ಮತ್ತಷ್ಟು ಅನುಮಾನಗಳಿಗೆ ಕಾರಣವಾಗಿದೆ.

"ಕೆಲಸದಿಂದ ಬಿಡುಗಡೆಗೊಂಡ ವ್ಯಕ್ತಿಗೆ ಕಚೇರಿಯೊಳಗೆ ಪ್ರವೇಶ ನೀಡಿದವರು ಯಾರು? ಪ್ರಕರಣ ದಾಖಲಾಗಿರುವ ಆರೋಪಿಯೊಂದಿಗೆ ಅಧಿಕಾರಿಗಳು ಫೋಟೋಗೆ ನಿಂತಿರುವುದು ಎಷ್ಟರ ಮಟ್ಟಿಗೆ ಸರಿ?" ಎಂಬ ಪ್ರಶ್ನೆಗಳು ಸಾರ್ವಜನಿಕರಿಂದ ಕೇಳಿಬರುತ್ತಿವೆ. ಎಂ.ಆರ್.ಪಿ.ಎಸ್ ಜಿಲ್ಲಾ ಉಪಾಧ್ಯಕ್ಷ ಕಮಲಾಕರ ಎಲ್. ಹೆಗಡೆ ಅವರು, "ಸರ್ಕಾರಿ ಆದೇಶ ಮತ್ತು ನ್ಯಾಯಾಲಯದ ನಿರ್ದೇಶನಗಳನ್ನು ಬೀದರ್ ಆರ್‌ಟಿಒ ಕಚೇರಿಯಲ್ಲಿ ಗಾಳಿಗೆ ತೂರಲಾಗಿದೆ. ಆರೋಪಿಗಳಿಗೆ ಅಧಿಕಾರಿಗಳೇ ಬೆಂಗಾವಲಾಗಿ ನಿಂತಿರುವುದು ವ್ಯವಸ್ಥೆಯ ದುರಂತ" ಎಂದು ಆರೋಪಿಸಿದ್ದಾರೆ. ತಪ್ಪಿತಸ್ಥ ಚಾಲಕ ಹಾಗೂ ಅವನಿಗೆ ಸಹಕಾರ ನೀಡಿದ ಅಧಿಕಾರಿಗಳ ವಿರುದ್ಧ ತಕ್ಷಣ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದು, ಕ್ರಮ ಕೈಗೊಳ್ಳದಿದ್ದರೆ ಕಚೇರಿ ಎದುರು ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

# ಹುದ್ದೆಗಳ ನೇಮಕಾತಿಗೆ ಆದೇಶ ಹಿಂಪಡೆಯುವಂತೆ ಮನವಿ



• ಮಲ್ಲಮ್ಮ ನುಡಿ ವಾರ್ತೆ, ಹುಣಸೂರು

ಒಳ ಮೀಸಲಾತಿ ಅನ್ವಯಿಸದೆ 56432 ಹುದ್ದೆಗಳ ನೇಮಕಾತಿಗೆ ಆದೇಶ ಹೊರಡಿಸಿರುವ ಸಿ ಇ ಸು ಇ 1 ಸೇ ಹಿ ಮ 2026. ದಿನಾಂಕ 27–02–2026 ರ ಸುತ್ತೋಲೆಯನ್ನು ಕೂಡಲೇ ಹಿಂಪಡೆಯಬೇಕು. ಶೇಕಡ 15ರ ಮೀಸಲಾತಿಯಲ್ಲಿ ಉದ್ಯೋಗ ನೇಮಕಾತಿ ನಡೆಸಬೇಕು. ಎಂದು ತಾಲೂಕು ಮಾದಿಗ ಹೋರಾಟ ಸಮಿತಿ ತಾಲೂಕು ಕಾರ್ಯದರ್ಶಿ ಬೆಳ್ತೂರು ವೆಂಕಟೇಶ್ ಹಾಗೂ ಸದಸ್ಯರಾದ ಶಿವರಾಂ ನೇತೃತ್ವದಲ್ಲಿ ಹಿರಿಯಮುಖಂಡ ರಾಯನಹಳ್ಳಿ ಸ್ವಾಮಿ.ಎಸ್ ಕಿಟ್ಟು. ಮಾಜಿ ಅಶ್ರಯ ಸಮಿತಿ ಸದಸ್ಯರು.ಶಿವರಾಮು ಹೆಚ್ ಎಸ್ ಸಂಘಟನಾ ಕಾರ್ಯದರ್ಶಿ. ರಾಜು ಸಿ ರವರಿಂದ ತಾಲೂಕಿನ ಬನ್ನಿಕುಪ್ಪೆ ಮಾದಳ್ಳಿ ಮಠ ಕಾರ್ಯಕ್ರಮದಲ್ಲಿ ಶಾಸಕ ಜಿಣಟಿಜಜಜಿಟಿಜಜ ಟಿ ಹರೀಶ್ ಗೌಡ ಮಾಜಿ ಶಾಸಕ ಎಚ್ ಪಿ ಮಂಜುನಾಥ್ ಅವರ ಸಮ್ಮುಖದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರವರಿಗೆ ಮನವಿ ಸಲ್ಲಿಸಿದ್ದೇವೇ ಎಂದು ತಿಳಿಸಿದರು ನಂತರ ಸುದ್ದಿಗಾರರೊಂದಿಗೆ ಮದಿಗ ಹೋರಾಟ ಸಮಿತಿಯ ತಾಲೂಕು ಕಾರ್ಯದರ್ಶಿ ಬೆಳ್ತೂರು ವೆಂಕಟೇಶ್ ಮಾತನಾಡಿ ವಿಶ್ವವಿದ್ಯಾನಿಲಯಗಳನ್ನು ಒಂದು ಘಟಕವಾಗಿಸಿ ಉದ್ಯೋಗ ನೇಮಕಾತಿ ಮಾಡುವ ಕಾನೂನು ಬಾಹಿರ ಕ್ರಮಗಳನ್ನು ಕೈಬಿಡಬೇಕು. ಅಲೆಮಾರಿ ಅರೆ ಅಲೆಮಾರಿ ಸಮುದಾಯಗಳಿಗೆ 1% ರಷ್ಟು ಪ್ರತ್ಯೇಕ ಮೀಸಲಾತಿ ನೀಡ ಬೇಕು.

ಪರಿಶಿಷ್ಟ ಜಾತಿಗೆ ಶೇಕಡ 17 ಮತ್ತು ಪರಿಶಿಷ್ಟ ಪಂಗಡಕ್ಕೆ ಶೇಕಡ 7% ಒಟ್ಟು 56 ಪರ್ಸೆಂಟ್ ಮೀಸಲಾತಿಯನ್ನು ಸಂವಿಧಾನದ 9ನೇ ಅನುಸೂಚಿಯಲ್ಲಿ ಸೇರಿಸಿ ಮೀಸಲಾತಿ ಹೆಚ್ಚಳ ಮಾಡಬೇಕು.

ಉದ್ಯೋಗ ನೇಮಕಾತಿ, ನೇರ ನೇಮಕಾತಿ, ಬ್ಯಾಕ್ ಲಾಕ್, ಭಡ್ತಿ ಮುಂಬಡ್ತಿ, ಒಳಗುತ್ತಿಗೆ ಖಅಖಕ ಖಿಖಕ ಆರ್ಥಿಕ ಸೌಲಭ್ಯಗಳ ಎಲ್ಲಾ ಹಂತಗಳಲ್ಲಿಯೂ ಒಳ ಮೀಸಲಾತಿ ಕಲ್ಪಿಸಬೇಕು.

. ಒಳ ಮೀಸಲಾತಿ ವಿಧೇಯಕವು ರಾಜ್ಯಪಾಲರ ಅಂಕಿತ ಪಡೆದ ದಿನದಂದೇ ಒಳ ಮೀಸಲಾತಿ ಅನ್ವಯವಾಗದಂತೆ 56432 ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಲು, ಫೆಬ್ರವರಿ 26ರಂದು ಕರ್ನಾಟಕ ಸರ್ಕಾರದ ಸಚಿವ ಸಂಪುಟವು ತೀರ್ಮಾನ ಕೈಗೊಂಡಿರುವುದು ಅಸಂವಿಧಾನಿಕ ನಡೆಯಾಗಿದೆ ಅಲ್ಲದೆ ಸಂವಿಧಾನ ಮತ್ತು ಸಾಮಾಜಿಕ ನ್ಯಾಯಕ್ಕೆ ಬಗೆದ ಮಹಾದ್ರೋಹವೆಂದೇ ನಾವು ಪರಿಗಣಿಸಿದ್ದೇವೆ. ಏಕಕಾಲಕ್ಕೆ ಇದು ಸುಧೀರ್ಘ 35 ವರ್ಷಗಳ ಕಾಲ ನಮ್ಮ ಸಾಂವಿಧಾನಿಕ ಹಕ್ಕಾದ ಒಳ ಮೀಸಲಾತಿಗಾಗಿ ಜನತಾಂತ್ರಿಕವಾಗಿ ಹೋರಾಟ ನಡೆಸಿದ ಮಾದಿಗ ಸಮುದಾಯಕ್ಕೆ ಎಸಗಿದ ಘೋರ ಅನ್ಯಾಯವಾಗಿದೆ ಹಾಗಾಗಿ ಕರ್ನಾಟಕ ರಾಜ್ಯ ಸರ್ಕಾರದ ಈ ಕರಾಳ ತೀರ್ಮಾನವನ್ನು ಸಾಮಾಜಿಕ ನ್ಯಾಯದ ನಿರೀಕ್ಷೆಯಲ್ಲಿರುವ ಮಾದಿಗ ಸಮುದಾಯ ತೀವ್ರವಾಗಿ ಖಂಡಿಸುತ್ತದೆ.

# ಹಳೇ ವಿದ್ಯಾರ್ಥಿಗಳಿಂದ ಗುರುವಂದನಾ ಸ್ನೇಹ ಮಿಲನ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ, ಕಂಪ್ಲಿ

ಪಟ್ಟಣ ಸಮೀಪದ ಎಮ್ಮಿಗನೂರಿನ ಶತಮಾನದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಕರ್ನಾಟಕ ಪಬ್ಲಿಕ್ ಪ್ರೌಢಶಾಲೆಯಲ್ಲಿ 2005– 2006 ನೇ ರ ಸಾಲಿನ ವಿದ್ಯಾರ್ಥಿಗಳು ಭಾನುವಾರ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಪ್ರಾರಂಭದಲ್ಲಿ ಶತಮಾನದ ಸರ್ಕಾರಿ ಶಾಲೆಯಿಂದ ಕರ್ನಾಟಕ ಪಬ್ಲಿಕ್ ಶಾಲೆವರೆಗೂ ನೆಚ್ಚಿನ ಗುರುಗಳಿಗೆ ಅದ್ದೂರಿ ಮೆರವಣಿಗೆಯ ಮೂಲಕ ಸ್ವಾಗತ ಕೋರಿದರು. ಈ ಸಂದರ್ಭದಲ್ಲಿ ಸುಮಾರು ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಕರು ಈ ಅಭೂತಪೂರ್ವ ಕಾರ್ಯಕ್ರಮಕ್ಕೆ ಸಾಕ್ಷಿಯಾದರು. ಸಮಾರಂಭದ ಉದ್ದಕ್ಕೂ ಹಲವು ನೆನಪುಗಳನ್ನು ಮೆಲುಕು ಹಾಕಲಾಯಿತು.

ಹಳೆಯ ವಿದ್ಯಾರ್ಥಿಗಳು ತಮಗೆ ವಿದ್ಯೆ ಕಲಿಸಿದ ಎಲ್ಲಾ ಗುರುಗಳಿಗೆ ಸನ್ಮಾನ ಮಾಡುವ ಮೂಲಕ ಗುರುಭಕ್ತಿ ಮೆರೆದರು. ತಮಗೆ ಅಕ್ಷರ ಕಲಿಸಿದ ಶಿಕ್ಷಕರನ್ನ ಹಲವು ವರ್ಷಗಳ ನಂತರ ಕಂಡ ವಿದ್ಯಾರ್ಥಿಗಳು ಸಂತಸ ಪಟ್ಟರು. ತಮ್ಮನ್ನು ಇನ್ನೂ ನೆನಪಿಟ್ಟು ಸನ್ಮಾನಿಸುತ್ತಿರುವ ಮಕ್ಕಳ ಪ್ರೀತಿಯನ್ನು ಕಂಡ ಶಿಕ್ಷಕರ ಕಣ್ಣಂಚಿನಲಿ ಆನಂದಭಾಷ್ಪ ಸುರಿಸಿದರು.



ಈ ಸಂದರ್ಭದಲ್ಲಿ ದೈಹಿಕ ಶಿಕ್ಷಕ ಆಂಜನೇಯ ಮಾತನಾಡಿ ಹಳೇ ವಿದ್ಯಾರ್ಥಿಗಳು ತಮಗೆ ವಿದ್ಯೆ ಕಲಿಸಿದ ಶಿಕ್ಷಕರನ್ನು ಸ್ಮರಿಸಿ ಗುರುವಂದನೆ ಕಾರ್ಯಕ್ರಮ ಕೈಗೊಂಡಿದ್ದು ನಿಜಕ್ಕೂ ಸಂತಸ ತಂದಿದೆ. ಬಾಲ್ಯದಲ್ಲಿ ವಿದ್ಯೆ ಕಲಿಯುವಾಗ ಸಾಕಷ್ಟು ಮಕ್ಕಳಿಗೆ ಗುರುಗಳ ಶ್ರಮದ ಬಗ್ಗೆ ಅರಿವಿರುವುದಿಲ್ಲ. ಮಕ್ಕಳ ಭಾವನೆಯಲ್ಲಿ ಗುರುಗಳೆಂದರೆ ಕೇವಲ ಶಿಕ್ಷಿಸುವ ಹಾಗೂ ದೈನಂದಿನ ಪಠ್ಯ ಬೋಧಿಸುವರೆಂದೇ ಭಾವಿಸಿರುತ್ತಾರೆ. ಹತ್ತಾರು ವರ್ಷ ಕಳೆದಾಗ ಶಿಕ್ಷಕರ ಶ್ರಮ ಮತ್ತು ಮಹತ್ವ ಅರಿತು ಗೌರವಿಸುತ್ತಾರೆ ಎಂದರು.

ನಂತರ ಮಾತನಾಡಿದ ನಿವೃತ್ತ ಶಿಕ್ಷಕ ಗುರುಮೂರ್ತಿ ಉದ್ಯೋಗ ಇನ್ನಿತರೆ ಕಾರಣಗಳಿಗಾಗಿ ಹುಟ್ಟಿದ ಊರು ಬಿಟ್ಟು ಬೇರೆಲ್ಲೋ ನೆಲೆಸಿದವರು ತಮ್ಮ ದಿನನಿತ್ಯದ ಒತ್ತಡ ಜೀವನದಲ್ಲಿ ಹುಟ್ಟಿದ ಊರು, ಹೆತ್ತವರು, ಅಕ್ಷರ ಕಲಿಸಿದ ಗುರುಗಳನ್ನು ನೆನೆಸಿಕೊಳ್ಳಲಾಗದ ಸ್ಥಿತಿಗೆ ಇಂದಿನ ಜನ ತಲುಪಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಹಿರಿಯ ವಿದ್ಯಾರ್ಥಿಗಳೆಲ್ಲರನ್ನೂ ಒಟ್ಟುಗೂಡಿಸುವ, ತಮ್ಮ ಹಳೆಯ ದಿನಗಳನ್ನು ಮೆಲಕು ಹಾಕುವಂತಹ ಸುಂದರ ಕ್ಷಣಗಳಿಗೆ ಸಾಕ್ಷಿಯಾದ ಇಂತಹ ಕಾರ್ಯಕ್ರಮ ಇಂದಿನ ದಿನಗಳಲ್ಲಿ ಅಗತ್ಯವಿದೆ. ಆ ಮೂಲಕ ಬಾಲ್ಯದ ನೆನಪುಗಳನ್ನು ಮತ್ತೆ ಪಡೆಯಬಹುದು ಎಂದು ಅಭಿಪ್ರಾಯಪಟ್ಟರು. ಆ ನಂತರ ಎಲ್ಲಾ ಶಿಕ್ಷಕರು ತಮ್ಮ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು. ಹಳೆ ವಿದ್ಯಾರ್ಥಿ ಹೆಚ್. ಮರಿಯಪ್ಪ ಮಾತನಾಡಿ ನಾವು ಗಳಿಸಿದ ಆಸ್ತಿ, ಅಂತಸ್ತು, ಸಂಪತ್ತು ಯಾವುದೂ ಕೊನೆಯವರೆಗೂ ಉಳಿಯೊಲ್ಲ. ಆದರೆ ಕಲಿತ ವಿದ್ಯೆ ಮಾತ್ರ ಕೊನೆಯವರೆಗೂ ಜೊತೆಗಿರುತ್ತದೆ ಬೆಳೆಯುವ ಸಿರಿ ಮೊಳಕೆಯಲ್ಲಿ ಎನ್ನುವಂತೆ ಬಾಲ್ಯದಲ್ಲಿ ನೀವು ನೀಡಿದ ನಿಸ್ವಾರ್ಥ ಶಿಕ್ಷಣದ ಪರಿಣಾಮ ನಾವುಗಳು ನಮ್ಮ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯವಾಯಿತು. ಎಂದು ಗುರುಗಳ ಸೇವೆಯನ್ನು ಮುಕ್ತಕಂಠದಿಂದ ಹೊಗಳಿದರು.

ಈ ಸಂದರ್ಭದಲ್ಲಿ ಶಿಕ್ಷಕರಾದ ಆಂಜಿನಯ್ಯ, ವೀರಭದ್ರಪ್ಪ, ಗುರುಮೂರ್ತಿ, ಶ್ರೀನಿವಾಸ, ವಿ. ಶ್ರೀನಿವಾಸ, ಶಂಭುಲಿಂಗ, ರವಾತಪ್ಪ, ಕುಮಾರ್ ಸ್ವಾಮಿ, ಜಾತಪ್ಪ, ರವಿಕುಮಾರ್, ಕರಿಬಸಪ್ಪ, ಹನುಮಂತ ರೆಡ್ಡಿ, ರಹಮತುಲ್ಲ, ವಲಿ, ಮಹಮ್ಮದ್ ರಫಿಕ್, ಚನ್ನ ಬಸಪ್ಪ, ಗಿರಿಜಮ್ಮ, ಧನಲಕ್ಷ್ಮಿ, ಗಾಯತ್ರಿ, ಕರುಣಾ ಜ್ಯೋತಿ, ಹಾಸ್ಟೆಲ್ ವಾರ್ಡನ್ ವಿ. ರಾಮಣ್ಣ, ಡಿ ಗ್ರೂಪ್ ಜಂಬಣ್ಣ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. 2005– 06 ನೇ ಸಾಲಿನ 10ನೇ ತರಗತಿ ವಿದ್ಯಾರ್ಥಿಗಳು ಹಾಗೂ ಇತರರು ಪಾಲ್ಗೊಂಡಿದ್ದರು.

# 24ಕ್ಕೆ ನೇರ ಸಂದರ್ಶನ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಏ.24 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 02 ಗಂಟೆಯವರೆಗೆ ನಗರದ ಹಳೆಯ ತಾಲ್ಲೂಕು ಕಚೇರಿ ಆವರಣದಲ್ಲಿನ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೇರ ಸಂದರ್ಶನ ಏರ್ಪಡಿಸಲಾಗಿದೆ.

ಈ ನೇರ ಸಂದರ್ಶನದಲ್ಲಿ ಎಪ್ಸಿಲಾನ್ ಕಾರ್ಬನ್ ಪ್ರೈ.ಲಿ. ಮತ್ತು ಧ್ರುವ ಸೋಲಾರ್ ಪವರ್ ಕಂಪನಿಗಳು ಭಾಗವಹಿಸಲಿದ್ದು, ಇವರು ತಮ್ಮಲ್ಲಿನ ಖಾಲಿ ಇರುವ ಹುದ್ದೆಗಳನ್ನು ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳುವರು.

ವಿದ್ಯಾರ್ಹತೆ: ಐಟಿಐ (ಫಿಟ್ಟರ್) ಅಥವಾ ಯಾವುದೇ ಪದವಿ ಪೂರ್ಣಗೊಳಿಸಿದ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ.

ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ. ಅಭ್ಯರ್ಥಿಗಳು ತಮ್ಮ ಆಧಾರ್ ಕಾರ್ಡ್ ಪ್ರತಿ, ಸ್ವ–ವಿವರ ಪ್ರತಿ (ಬಯೋಡೇಟಾ) ಗಳೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದೋಗ ವಿನಿಮಯ ಕಚೇರಿ ಅಥವಾ ಮೊ.7619207762, 9663263086, 7676774293, 6360408094 ಗೆ ಕರೆ ಮಾಡಿ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪೌರ ಕಾರ್ಮಿಕರ ಕಾರ್ಯಕ್ಕೆ ರಾಜಕುಮಾರ ಹಡಪದ ಹರ್ಷ



**ಚಿಟಗುಪ್ಪ:** ಪಟ್ಟಣದ ಪುರಸಭೆಯ ಮುಖ್ಯಾಧಿಕಾರಿ ಸತೀಶ ಗುಡ್ಡೆ ಹಾಗೂ ಹಿರಿಯ ಆರೋಗ್ಯ ನಿರೀಕ್ಷಕ ರವಿಕುಮಾರ್ ಸ್ವಾಮಿ ಇವರ ಮಾರ್ಗದರ್ಶನದಲ್ಲಿ ಪೌರ ಕಾರ್ಮಿಕರು ಪಟ್ಟಣದ ಸ್ವಚ್ಛತೆಗೆ ಹಗಲಿರಳು ಶ್ರಮಿಸುತ್ತಿರುವ ಕಾರ್ಯ ಶ್ಲಾಘನೀಯವಾಗಿದೆ ಎಂದು ಕನ್ನಡ ಸೇನೆಯ ತಾಲೂಕ ಮಾಧ್ಯಮ ಪ್ರತಿನಿಧಿ ರಾಜಕುಮಾರ ಆರ್. ಹಡಪದ ತಿಳಿಸಿದ್ದಾರೆ. ಪಟ್ಟಣದ 22ನೇ ವಾರ್ಡಿನ ಜನತಾ ನಗರ ಕಾಲೋನಿಯಲ್ಲಿ ಪೌರ ಕಾರ್ಮಿಕರು ಚರಂಡಿ ಸ್ವಚ್ಛತೆಗೊಳಿಸಿ ಬಿಲಿಚಿಂಗ್ ಪೌಡರ್ ಹಾಕಿದ್ದಾರೆ. ಇವರ ಕಾರ್ಯಕ್ಕೆ ಜನತಾ ನಗರ ಕಾಲೋನಿಯ ನಿವಾಸಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

# ಪಟ್ಟದ್ದೇವರಿಂದ ಗಡಿಭಾಗ ಶ್ರೀಮಂತ




**ಭಾಲ್ಕಿ:** ಗಡಿಭಾಗದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ತಮ್ಮ ಇಡೀ ಬದುಕು ಸಮಾಜ ಸೇವೆಗೆ ಮುಡಿಪಾಗಿಟ್ಟಿದ್ದಾರೆ. ಪರಮ ಪೂಜ್ಯರು ಧರ್ಮ ಪ್ರಸಾರ, ಪ್ರವಚನ, ಮತ್ತು ಶಿಕ್ಷಣ ಸೇವೆ ಮೂಲಕ ಈ ಭಾಗವನ್ನು ಶ್ರೀಮಂತಗೊಳಿಸುವ ಪ್ರಯತ್ನ ಮಾಡಿದ್ದಾರೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು.

ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ಬುಧವಾರ ಆಯೋಜಿಸಿದ್ದ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಪರಮ ಪೂಜ್ಯರು ಗಡಿ, ಭಾಷೆಯನ್ನು ಮೀರಿ ಬಸವತತ್ವ ಪ್ರಚಾರ ಪ್ರಸಾರದ ಜತೆಗೆ ಸಾಹಿತ್ಯ ಪ್ರಕಟಿಸಿ ಸಮಾನತೆ ಮತ್ತು ಅಧ್ಯಾತ್ಮಿಕ ಜ್ಞಾನದ ಸಂದೇಶ ಸಾರುತ್ತಿದ್ದಾರೆ. ಲಿಂಗಾಯತ ಒಕ್ಕೂಟದ ಅಧ್ಯಕ್ಷರಾಗಿ ಪರಮಪೂಜ್ಯರು ಲಿಂಗಾಯತ ಸಮಾಜದ ಏಳಿಗೆಗೆ ಹಗಲಿರಳು ಶ್ರಮಿಸುತ್ತಿದ್ದಾರೆ. ಪರಮಪೂಜ್ಯರು ತಮ್ಮ ದೂರದೃಷ್ಟಿಯಿಂದ ಸ್ಥಾಪಿಸಿದ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟಡಿ ಸ್ಥಾಪಿಸಿದ ವಿದ್ಯಾಸಂಸ್ಥೆ ಇಂದು 60 ಅಂಗಸಂಸ್ಥೆಗಳು ಮಕ್ಕಳಿಗೆ ಶಿಕ್ಷಣವನ್ನು ಧಾರೆಯರೆಯುತ್ತಿವೆ. 20 ಸಾವಿರಕ್ಕೂ ಅಧಿಕ ಮಕ್ಕಳು ವಿಧ್ಯಾಭ್ಯಾಸ ಮಾಡುತ್ತಿರುವುದು ಹೆಮ್ಮೆಯ ಸಂಗತಿ. 500 ಬಡ, ನಿರ್ಗತಿಕ ಮಕ್ಕಳಿಗೆ ಅನ್ನ, ಅಕ್ಷರ, ಆಶ್ರಯ ಕಲ್ಪಿಸಿ ಅವರ ಭವಿಷ್ಯವನ್ನು ಉಜ್ವಲಗೊಳಿಸಿದ್ದಾರೆ. ಇಂತಹ ಅನೇಕ ವಿಧಾಯಕ ಕಾರ್ಯಗಳ ಮೂಲಕ ಪರಮಪೂಜ್ಯರು ಮೇರುವ್ಯಕ್ತಿಯಾಗಿ ಬೆಳೆದಿದ್ದಾರೆ. ಪರಮಪೂಜ್ಯರ ಸೇವೆ ಹೀಗೆ ಮುಂದುವರೆಯಲಿ ಎಂದು ಹಾರೈಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ವಚನ ಸಾಹಿತ್ಯ ಕೇವಲ ಪ್ರಚಾರ ಮಾಡಿದರೇ ಸಾಲದು ಅದರಂತೆ ನಡೆ-ನುಡಿ ಒಂದಾಗಿಸಿಕೊಂಡಲ್ಲಿ ಸಮ ಸಮಾಜ ನಿರ್ಮಾಣಗೊಳ್ಳಲು ಸಾಧ್ಯವಾಗುತ್ತದೆ. ನಾನು ಬುದ್ಧ-ಬಸವ-ಅಂಬೇಡ್ಕರ್ ವಿಚಾರಗಳನ್ನು ಬಲವಾಗಿ ನಂಬುತ್ತೇನೆ. ಕಾರಣ ಎನಂದರೆ ಮಹಾತ್ಮರ ಆಚಾರ, ವಿಚಾರ, ನಡೆ, ನುಡಿ ಒಂದೆಯಾಗಿದ್ದವು. ಆದರೆ, ಇಂದಿನ ದಿನಮಾನಗಳಲ್ಲಿ ಉಪದೇಶ ಹೇಳುವರ ಸಂಖ್ಯೆ ಹೆಚ್ಚುತ್ತಿದೆ ಆದರೆ ನಿಜ ಜೀವನದಲ್ಲಿ ಆಚರಣೆಗೆ ಬರುತ್ತಿಲ್ಲ, ಹಾಗಾಗಿಯೇ ಇಂದಿಗೂ ಜಾತಿ ವ್ಯವಸ್ಥೆ, ಅಂಧ್ರಶ್ರದ್ಧೆ ಮುಂದುವರೆದಿದೆ ಎಂದು ಕಳವಳ ವ್ಯಕ್ತ ಪಡಿಸಿದರು.

ಕರ್ನಾಟಕದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಮಾತನಾಡಿ, ಗಡಿಭಾಗದಲ್ಲಿ ಡಾ.ಬಸವಲಿಂಗ ಪಟ್ಟದ್ದೇವರು ತಮ್ಮ ಅಧ್ಯಾತ್ಮಿಕ ಜ್ಞಾನ ಮತ್ತು ಅತ್ಯುತ್ತಮ ವಿಚಾರಗಳ ಮೂಲಕ ಈ ಭಾಗವನ್ನು ಪ್ರಗತಿಯತ್ತ ಕೊಂಡೊಯ್ಯುವ ಪ್ರಯತ್ನ ಮಾಡುತ್ತಿದ್ದಾರೆ ಪರಮ ಪೂಜ್ಯರ ನಿಸ್ವಾರ್ಥ, ತ್ಯಾಗ, ಕರುಣೆ ಮೂಲಕ ಅದ್ಭುತ ಸೇವೆಗೈಯುತ್ತಿದ್ದಾರೆ. ಪರಮ ಪೂಜ್ಯರು ಶಿಕ್ಷಣ ಸಂಸ್ಥೆಯನ್ನು ವ್ಯಾಪಾರಕ್ಕಾಗಿ ಹುಟ್ಟು ಹಾಕದೇ ಶಿಕ್ಷಣವೆಂಬುದು ಜೀವನ ನಿರ್ಮಾಣ ಮಾಡುವ ಮಾಧ್ಯಮ ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಮಾತನಾಡಿ, ಡಾ.ಬಸವಲಿಂಗ ಪಟ್ಟದ್ದೇವರು ಗಡಿ, ಭಾಷೆ ಮೀರಿ ಬಸವತತ್ವ ಪ್ರಚಾರ ಪ್ರಸಾರದ ಮೂಲಕ ಅತ್ಯುತ್ತಮ ಸೇವೆಗೈಯುತ್ತಿದ್ದಾರೆ ಎಂದು ಅಮೃತ ಮಹೋತ್ಸವ ಸ್ವಾಗತ ಸಮಿತಿ ಅಧ್ಯಕ್ಷ, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು. 12ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಕಾಯಕ-ದಾಸೋಹ ತತ್ವ ಬೋಧಿಸಿದರು. ಅದನ್ನು 21ನೇ ಶತಮಾನದಲ್ಲಿ ಡಾ.ಚನ್ನಬಸವ ಪಟ್ಟದ್ದೇವರು ಆಚರಣೆಗೆ ತಂದಿದ್ದರು. ಡಾ.ಚನ್ನಬಸವ ಪಟ್ಟದ್ದೇವರು, ಡಾ.ಭೀಮಣ್ಣ ಖಂಡ್ರೆ ಸೇರಿ ಸ್ವತಃ ಕಲ್ಲು, ಮಣ್ಣು ಹೊತ್ತು ಅನುಭವ ಮಂಟಪ ಕಟ್ಟಿಸಿದ್ದರು ಎಂದು ಸ್ಮರಿಸಿದರು.

ಸಾನ್ನಿಧ್ಯ ವಹಿಸಿದ್ದ ಡಾ.ಬಸವಲಿಂಗ ಪಟ್ಟದ್ದೇವರು ಮಾತನಾಡಿ, ವಿಶ್ವಗುರು ಬಸವಣ್ಣನವರ ವಿಚಾರ-ಚಿಂತನೆಗಳು ವಿಶ್ವಕ್ಕೆ ದಾರಿದೀಪವಾಗಿವೆ. ಹಾಗಾಗಿ ಬೌದ್ಧ, ಜೈನ ಧರ್ಮಗಳು ಬುದ್ಧ-ಮಹಾವೀರ ಜಯಂತಿ ಸಾರ್ವಜನಿಕ ರಜೆ ಘೋಷಿಸಿದ ಮಾದರಿಯಲ್ಲಿ ಕೇಂದ್ರ ಸರಕಾರ ಬಸವಣ್ಣವರ ಜಯಂತಿಯನ್ನು ಸಾರ್ವಜನಿಕ ರಜೆ ಎಂದು ಘೋಷಿಸಿ ದೇಶದ ಮೂಲ ಮೂಲೆಗಳಲ್ಲಿ ಬಸವಣ್ಣನವರ ಬೆಳಕು ಚೆಲ್ಲಬೇಕು ಎಂದು ತಿಳಿಸಿದರು.


ಗದಗ-ಡಂಬಳ ಜಗದ್ಗುರು ತೋಂಟದಾರ್ಯ ಮಠದ ಜಗದ್ಗುರು ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಈ ಸಂದರ್ಭದಲ್ಲಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಈ ಸಂದರ್ಭದಲ್ಲಿ ಪೌರಾಡಳಿತ ಇಲಾಖೆಯ ಸಚಿವ ರಹೀಂಖಾನ್, ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ, ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ಮಾಜಿ ಶಾಸಕ ಪ್ರಕಾಶ ಖಂಡ್ರೆ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನಿಕಟಪೂರ್ವ ಅಧ್ಯಕ್ಷ ಶಶಿಧರ ಕೋಸಂಬೆ ಸೇರಿದಂತೆ ಹಲವರು ಇದ್ದರು. ಸಂಸದ ಸಾಗರ ಖಂಡ್ರೆ ಸ್ವಾಗತಿಸಿದರು. ಭಾರತೀಯ ಬಸವ ಬಳಗದ ರಾಜ್ಯಾಧ್ಯಕ್ಷ ಬಾಬು ವಾಲಿ ನಿರೂಪಿಸಿ, ವಂದಿಸಿದರು.

# ಅರಳು ಮಲ್ಲಿಗೆ ವೇದಿಕೆಯಿಂದ ವಚನ ವಿಸ್ಮಯ ಗೋಷ್ಠಿ

• ಮಲ್ಲಮ್ಮ ನುಡಿ ವಾರ್ತೆ ಹೂವಿನಹಡಗಲಿ

ಆಧುನಿಕ ತಂತ್ರಜ್ಞಾನದ ಯುಗದಲ್ಲಿ 12ನೇ ಶತಮಾನದ ವಚನ ಚಳವಳಿಯ ಆಶಯಗಳನ್ನು ಜೀವಂತವಾಗಿರಿಸುವ ಪ್ರಯತ್ನವಾಗಿ 'ಅರಳು ಮಲ್ಲಿಗೆ ಸಾಹಿತ್ಯ ವೇದಿಕೆ'ಯ ವತಿಯಿಂದ ವಿಶ್ವಗುರು ಬಸವಣ್ಣನವರ ಜಯಂತಿಯ ಅಂಗವಾಗಿ ಸೋಮವಾರ ಗೂಗಲ್ ಮೀಟ್ನಲ್ಲಿ "ವಚನ ವಿಸ್ಮಯ" ಎಂಬ ವಿನೂತನ ವಚನ ಸಾಹಿತ್ಯಿಕ ಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಪತ್ರಕರ್ತ ಸಾಹಿತಿ ವೀರಣ್ಣ ಕಲಕೇರಿ ಮಾತನಾಡಿ "ಶರಣರ ಅನುಭವಯುಕ್ತ ನುಡಿಗಳು ಕೇವಲ ಸಾಹಿತ್ಯಿಕ ಕೃತಿಗಳಾಗದೆ, ಸಮಾಜದ ಮಲಿನತೆಯನ್ನು ತೊಳೆಯುವ ತೀರ್ಥಗಳಾದವು" ಎಂದು ಬಣ್ಣಿಸಿದ ಅವರು ಅಂದು ಕಲ್ಯಾಣದಲ್ಲಿ ಅನುಭವ ಮಂಟಪವು ಸಾಮಾಜಿಕ ಸಮಾನತೆಯ ಪಾಠ ಮಾಡಿದಂತೆ, ಇಂದು ಈ 'ಗೂಗಲ್ ಮೀಟ್' ಎಂಬ ತಾಂತ್ರಿಕ ವೇದಿಕೆಯನ್ನು 'ಡಿಜಿಟಲ್ ಅನುಭವ ಮಂಟಪವನ್ನಾಗಿ ಪರಿವರ್ತಿಸಿರುವುದು ಅರಳು ಮಲ್ಲಿಗೆ ವೇದಿಕೆಯ ಪ್ರಯತ್ನ ಐತಿಹಾಸಿಕ ಹೆಜ್ಜೆಯಾಗಿದೆ. ಡಿಜಿಟಲ್ ಯುಗದ ಜ್ವಲಂತ ಸಮಸ್ಯೆಗಳನ್ನು ಆಧುನಿಕ ವಚನಗಳ ಮೂಲಕ ಕಟ್ಟಿಕೊಡುತ್ತಿರುವ ಕವಿಗಳ ಸೃಜನಶೀಲತೆ ವಚನ ಪರಂಪರೆಯ ಜೀವಂತಿಕೆಗೆ ಸಾಕ್ಷಿಯಾಗಿದೆ ಎಂದರು.




ಬೆಂಗಳೂರಿನ ಹೇಮಾ ಎನ್. ಅವರು ತಮ್ಮ ಉಪನ್ಯಾಸದಲ್ಲಿ ವಚನ ಸಾಹಿತ್ಯದ ಉಗಮ ಮತ್ತು ಬೆಳವಣಿಗೆಯ ಮೇಲೆ ಬೆಳಕು ಚೆಲ್ಲುತ್ತಾ, "ಕ್ರಿ.ಶ ಎಂಟನೇ ಶತಮಾನದಲ್ಲಿದ್ದ ಇಮ್ಮಡಿ ಪಂಡಿತಾರಾಧ್ಯರು ಮತ್ತು ಅವರ ಅನುಯಾಯಿ ಮರೆಮಿಂಡ ದೇವರ ಕಾಲದಿಂದಲೂ ವಚನಗಳು ನೋಡಬಹುದು. ಅಂದಿನಿಂದ 12ನೇ ಶತಮಾನದ ಪ್ರಾರಂಭದವರೆಗಿನ ವಚನಗಾರರಿಗೆ ಮತ್ತು ವಚನಗಳಿಗೆ ಜಗಜ್ಯೋತಿ ಬಸವಣ್ಣನವರು ರಾಯಪೂರ್ವಚಾರಿಯಾಗಿದ್ದಾರೆ" ಎಂದು ವಿವರಿಸಿ, ಜಗತ್ತಿನ ಮೊದಲ ಸಂಸತ್ ಎನಿಸಿದ ಅನುಭವ ಮಂಟಪದ ಮೂಲಕ ವಚನ ಸಾಹಿತ್ಯವು ಶ್ರೇಷ್ಠತೆಯ ಶಿಖರಕ್ಕೇರಿತು. 17ರಿಂದ 19ನೇ ಶತಮಾನದವರೆಗೆ ತುಸು ತಟಸ್ಥವಾಗಿದ್ದ ಈ ಸಮೃದ್ಧ ಪರಂಪರೆಗೆ 20ನೇ ಶತಮಾನದ ಆಧುನಿಕ ವಚನಕಾರರು ಹೊಸ ಜೀವಕಳೆ ನೀಡಿದ್ದಾರೆ. ಇಂದು ಸಹಬಾಳ್ವೆಯ ಪಡಿಪದಾರ್ಥಗಳಾದ ವಚನಗಳ ಮೂಲಕ ಅರಿವು ಮೂಡಿಸುವ ಕೆಲಸ ಶ್ಲಾಘನೀಯವಾಗಿ ನಡೆಯುತ್ತಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಸಾಹಿತಿ ಎಂ.ಪಿ.ಎಂ. ಕೊಟ್ರಯ್ಯ ಅವರು ಮಾತನಾಡಿ, ಇಂದು ಮನುಷ್ಯ ಹಣದ ಹಿಂದೆ ಓಡುತ್ತಾ ಮಾನಸಿಕ ಸ್ಥಿಮಿತ ಕಳೆದುಕೊಳ್ಳುತ್ತಿದ್ದಾನೆ. ಕೇವಲ ನುಡಿಯಲ್ಲಿ ವಚನ ರಚಿಸಿದರೆ ಸಾಲದು, ಅದು ನಮ್ಮ ನಡೆಯಲ್ಲೂ ಇರಬೇಕು. ಅಧರ್ಮ, ಅತ್ಯಾಚಾರ ಮತ್ತು ಜಾತೀಯತೆಯಂತಹ ಸಾಮಾಜಿಕ ಪಿಡುಗುಗಳಿಗೆ ಪರಿಹಾರ ಸೂಚಿಸುವ ಹಾಗೂ ಸಮಾಜ ಪರಿವರ್ತನೆಗೆ ಕಾರಣವಾಗುವ ವಚನಗಳು ಸರಳ ಕನ್ನಡದಲ್ಲಿ ಮೂಡಿಬರಲಿ ಎಂದು ಆಶಿಸಿದರು.

> ಶರಣರ ಅನುಭವದ ನುಡಿಗಳು ಸಮಾಜದ ಮಲಿನತೆಯನ್ನು ತೊಳೆಯುವ ತೀರ್ಥಗಳು, ಅರಳು ಮಲ್ಲಿಗೆ ಸಾಹಿತ್ಯ ವೇದಿಕೆಯು ಇಂದಿನ ಡಿಜಿಟಲ್ ವೇದಿಕೆಯನ್ನು ಆಧುನಿಕ 'ಅನುಭವ ಮಂಟಪ'ವಾಗಿ ಬಳಸಿಕೊಳ್ಳುತ್ತಿರುವುದು ಶ್ಲಾಘನೀಯ.
> – ವೀರಣ್ಣ ಕಲಕೇರಿ

ಅತಿಥಿಗಳಾಗಿ ಇಟ್ಟಗಿಯ ಹಾಲಪ್ಪ ಚಿಗಟೇರಿ ಉಪಸ್ಥಿತರಿದ್ದರು.

ವಚನ ಗೋಷ್ಠಿಯಲ್ಲಿ ಸುಮಾರು 25ಕ್ಕೂ ಹೆಚ್ಚು ಕವಿಗಳು ಭಾಗವಹಿಸಿದ್ದರು. ದಾನಮ್ಮ ವಿ. ಅಂಗಡಿ, ರವೀಂದ್ರ ಸಿ.ವಿ., ಅಕ್ಕಮಹಾದೇವಿ ಹಿರೇಮಠ, ರೇವತಿ ವೈದ್ಯ, ಕುಮಾರ್ ಜಿ.ಎಂ., ಚಂದ್ರಕಲಾ ಜನಗೌಡ, ನಾಗಮ್ಮ ಉಮರ್ಜಿ, ರೂಪಾ ಬಂಡಿ, ವಿ. ಲಕ್ಷ್ಮೀದೇವಿ, ಗೀತಾ ಬಿ., ಶಶಿಕಲಾ ಎ.ಆರ್., ವಿಜಯ ರೂಪಾ, ಭಾರತಿ ರಮೇಶ್ ಸೇರಿದಂತೆ ಅನೇಕರು ಪ್ರಸ್ತುತ ವಿದ್ಯಮಾನಗಳಿಗೆ ಸ್ಪಂದಿಸುವ ಸ್ವರಚಿತ ವಚನಗಳನ್ನು ವಾಚಿಸಿದರು. ಶಶಿಕಲಾ ಪ್ರಾರ್ಥಿಸಿದರು. ಕವಿಯತ್ರಿ ವಾರುಣಿ ದೇಶಪಾಂಡೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

# ಕುಡಿಯುವ ನೀರಿಲ್ಲದೆ ಪರದಾಡುವ ಪರಿಸ್ಥಿತಿ

• ವರದಿ: ಮೊಹಮ್ಮದ್ ರಫೀಕ್

ತಾಲೂಕಿನ ಸಿಂಗರಮಾರನಹಳ್ಳಿ ಗ್ರಾಮದಲ್ಲಿ ಹೆಚ್ಚು ಜನಸಂಖ್ಯೆ ಇದ್ದು ಬೇಸಿಗೆಯಲ್ಲಿ ಕುಡಿಯುವ ನೀರಿಲ್ಲದೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಜನಪ್ರತಿನಿಧಿಗಳು ತಮ್ಮ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಟ ಮಾಡುತ್ತಿದ್ದಾರೆಯೇ ವಿನಹ ಸಾರ್ವಜನಿಕರ ಸಮಸ್ಯೆಗಳಿಗೆ ಹೇಳೋರಿಲ್ಲ ಕೇಳೋರಿಲ್ಲ ಗಮನಹರಿಸದಿರುವುದೇ ಇದಕ್ಕೆ ಯಾವ ಪ್ರಮುಖ ಕಾರಣವಾಗಿದೆ.

ಚುನಾಯಿತ ಪ್ರತಿನಿಧಿಗಳು ಬೇಸಿಗೆ ಬಂದ ತಕ್ಷಣವೇ ತಾಲೂಕಿನ 41 ಗ್ರಾಮ ಪಂಚಾಯಿತಿಗಳ ಅಧಿಕಾರಿಗಳನ್ನು ಒಳಗೊಂಡಂತೆ ಸಭೆ ಕರೆಯದಿರುವುದು ಒಂದು ಸಮಸ್ಯೆಯಾಗಿದೆ. ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಒಳಗೊಂಡಂತೆ ಸಭೆ ಕರೆದಿದ್ದರೆ ಕುಡಿಯುವ ನೀರಿನ ಸಮಸ್ಯೆಯನ್ನು ಸಾರ್ವಜನಿಕರಿಗೆ ಹಾಗೂ ಬಗೆಹರಿಸಬಹುದಾಗಿತ್ತು ದಿನ ದಿನಕ್ಕೂ ತಾಪ ಮಾನ ದಿನ ದಿನಕ್ಕೂ. ಹೆಚ್ಚಾಗುತ್ತಿದೆ ನಾಗರಿಕದಲ್ಲಿ



ತಿರುಗಾಡುವ ಸಮಯದಲ್ಲಿ ನೀರಿನ ದಾಹ ಹೆಚ್ಚು ಕಂಡು ಬರುತ್ತಿದೆ ಇದರಿಂದ ಕೂಡಲೆ ತಾಲೂಕು ಆಡಳಿತ ತುರ್ತು ಕ್ರಮಗೊಳ್ಳಬೇಕು.

ತಾಲೂಕಿನ ಕಟ್ಟ ಕಡೆಯ ಗ್ರಾಮದ ಸಿಂಗರಮಾರನಹಳ್ಳಿ ಗ್ರಾಮವು ಅತಿ ಕಡಿಮೆ ಮಳೆ ಬೀಳುವ ಪ್ರದೇಶವಾಗಿದ್ದು ಬೇಸಿಗೆಯಿಂದಾಗಿ ಎಲ್ಲಾ ಕೆರೆ ತೊರೆಗಳು ಒಣಗಿ ಹೋಗಿದೆ ಸಾರ್ವಜನಿಕರಲ್ಲೇ ದಾಹವನ್ನು ತಡೆಯಲಾರದಷ್ಟು ಶಕ್ತಿಯನ್ನು ಮೀರಿ-ಕೊಂಡಿದ್ದಾರೆ. ಆದರೆ ಪ್ರಾಣಿಗಳಿಗೆ ಹಾಗೂ ಕರುಗಳಿಗೆ ನೀರು ಇಲ್ಲಿದೆ. ಇದರಿಂದ ಹಾಗೂ ಗ್ರಾಮಸ್ಥರು ಬೇಸರವಾಗುತ್ತಿದೆ. ಈಗಾಗಲೇ ಕುಡಿಯುವ ನೀರಿಗಾಗಿ ಪರದಾಡುವ ಸ್ಥಿತಿ ಕಂಡು ಬಂದಿದೆ.

# ಯುಜಿಸಿ ಮಾರ್ಗಸೂಚಿಗಳ ಉಲ್ಲಂಘನೆ!

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪಿಎಚ್.ಡಿ. ಪದವಿ ಪ್ರದಾನ ಪ್ರಕ್ರಿಯೆಯಲ್ಲಿ ಯುನಿವರ್ಸಿಟಿ ಗ್ರಾಂಟ್ಸ್ ಕಮಿಷನ್ (UGC) ನಿಗದಿಪಡಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿಲ್ಲ ಎಂಬ ಗಂಭೀರ ಆರೋಪಗಳು ವಿದ್ಯಾರ್ಥಿಗಳು ಹಾಗೂ ಸಂಶೋಧಕರ ವಲಯದಲ್ಲಿ ಕೇಳಿಬರುತ್ತಿವೆ ಎಂದು ದ್ರಾವಿಡ ವಿದ್ಯಾರ್ಥಿ ಪರಿಷತ್ ಸಂಘಟನೆ ತೀವ್ರ ಆತಂಕ ವ್ಯಕ್ತಪಡಿಸಿದೆ.

ಈ ಸಂದರ್ಭದಲ್ಲಿ ಮಾತನಾಡಿದ ದ್ರಾವಿಡ ವಿದ್ಯಾರ್ಥಿ ಪರಿಷತ್ ಮುಖಂಡ ಅಕ್ಷಯ್ ಕುಮಾರ್ ಅಜಮನಿ ಉನ್ನತ ಶಿಕ್ಷಣದ ಗುಣಮಟ್ಟವನ್ನು ಕಾಪಾಡುವ ಉದ್ದೇಶದಿಂದ ಯುಜಿಸಿ ರೂಪಿಸಿರುವ Minimum Standards and Procedure for Award of Ph.D. Degree ನಿಯಮಗಳು ಕೇವಲ ಮಾರ್ಗಸೂಚಿಗಳಲ್ಲ, ಅವು ಕಡ್ಡಾಯವಾಗಿ ಪಾಲಿಸಬೇಕಾದ ಶೈಕ್ಷಣಿಕ ಮಾನದಂಡಗಳಾಗಿವೆ ಆದರೆ, ಕೆಲ ವಿಶ್ವವಿದ್ಯಾಲಯಗಳು ಈ ನಿಯಮಗಳನ್ನು




ನಿರ್ಲಕ್ಷ್ಯ ಮಾಡುತ್ತಿರುವುದು ಶಿಕ್ಷಣ ವ್ಯವಸ್ಥೆಗೆ ಧಕ್ಕೆಯಾಗಿದೆ ಎಂದು ಆರೋಪಿಸಿದರು.

ಯುಜಿಸಿ ನಿಯಮಾವಳಿಗಳ ಪ್ರಕಾರ ಪಿಎಚ್.ಡಿ. ಪದವಿ ಪ್ರದಾನಕ್ಕೆ ಕೆಳಗಿನ ಅಂಶಗಳು ಕಡ್ಡಾಯವಾಗಿವೆ:

- ಸಂಶೋಧನಾ ಪ್ರಬಂಧವನ್ನು ಕನಿಷ್ಠ ಇಬ್ಬರು ಬಾಹ್ಯ ತಜ್ಞರಿಂದ ಮೌಲ್ಯಮಾಪನ ಮಾಡುವುದು
- ಸಕಾರಾತ್ಮಕ ವರದಿಗಳ ನಂತರ ಬಹಿರಂಗ ವೈವಾ-ವೋಸ್ ನಡೆಸುವುದು
- ಕನಿಷ್ಠ ಒಂದು ಸಂಶೋಧನಾ ಲೇಖನವನ್ನು ಪಿಯರ್-ರಿವ್ಯೂಡ್ ಜರ್ನಲ್‌ನಲ್ಲಿ ಪ್ರಕಟಿಸುವುದು
- ಎರಡು ಸಂಶೋಧನಾ ಪ್ರಸ್ತುತಿಗಳನ್ನು ಕಾನ್ಫರೆನ್ಸ್/ಸೆಮಿನಾರ್‌ಗಳಲ್ಲಿ ನೀಡುವುದು ಇತ್ಯಾದಿ.

# ದೀಪವಿಲ್ಲದ ದಾರಿಯಲಿ ನಡೆದರೂ, ಕನಸಿಲ್ಲದ ಜೀವನದಲ್ಲಿ ನಡೆಯಲಾಗದು

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ಇಂದು ಬಸವ ಜಯಂತಿಯನ್ನು ಇಡೀ ವಿಶ್ವವೇ ಆಚರಿಸುತ್ತಿದೆ. ಆದರೆ ಸುಮಾರು ನೂರಾರು ವರ್ಷಗಳ ಹಿಂದೆಯೇ ಅಧಿಕೃತವಾಗಿ ಬಸವ ಜಯಂತಿ ಆಚರಣೆಗೆ ಶ್ರೀಕಾರ ಹಾಕಿದ ಕೀರ್ತಿ ಧಾರವಾಡದ ಮೃತ್ಯುಂಜಯ ಅಪ್ಪಗಳಿಗೆ ಹಾಗೂ ಕರ್ನಾಟಕದ ಗಾಂಧಿ ಹರ್ಡೇಕರ್ ಮಂಜಪ್ಪನವರಿಗೆ ಸಲ್ಲುತ್ತದೆ. ಹನ್ನೆರಡನೆಯ ಶತಮಾನದಲ್ಲಿ 1719 ವೇಶ್ಯೆಯರನ್ನು ಪುಣ್ಯಾಂಗನೆಯರನ್ನಾಗಿ ಮಾಡಿದ ವಿಶ್ವದ ಮೊದಲ ಸಂತ ವಿಶ್ವಗುರು ಬಸವಣ್ಣನವರು. ದೀಪಗಳಿಲ್ಲದ ದಾರಿಯಲ್ಲಿ ನಡೆಯಬಹುದು, ಆದರೆ ಕನಸುಗಳಿಲ್ಲದ ಜೀವನ ವ್ಯರ್ಥವಾದುದು ಎಂದು ಡಾ. ಮಹಾಂತ ಬಸವಲಿಂಗ ಸ್ವಾಮಿಗಳು ಹೇಳಿದರು.

ತಾಲೂಕು ಆಡಳಿತ, ತಾಲೂಕು ಪಂಚಾಯತಿ, ನಗರಸಭೆ ಹಾಗೂ ಬಸವ ಜಯಂತಿ ಆಚರಣೆ ಸಮಿತಿ ಇವರ ಸಹಯೋಗದಲ್ಲಿ ಬಸವ ಜಯಂತಿ




ಅಂಗವಾಗಿ ನಡೆದ "ಶರಣರ ಜೀವನ ದರ್ಶನ" ಪ್ರವಚನದ ಮಂಗಲೋತ್ಸವ ಸಮಾರಂಭವು ಏಪ್ರಿಲ್-20 ಸೋಮವಾರ ಶ್ರೀ ಕೊಟ್ಟೂರು ಬಸವೇಶ್ವರ ವೇದಿಕೆಯಲ್ಲಿ ನಡೆದು ಮುಖ್ಯ ಉಪನ್ಯಾಸಕರಾಗಿ ಅವರು ಮಾತನಾಡುತ್ತಾ ಹಲವಾರು ಉದಾಹರಣೆಗಳ ಮೂಲಕ ಶರಣತತ್ವ ಸಂದೇಶಗಳನ್ನು ತಿಳಿಸಿದರು.

ಅಧ್ಯಕ್ಷತೆವಹಿಸಿದ್ದ ತಹಶೀಲ್ದಾರರಾದ ವಿಶ್ವನಾಥ ಮುರಡಿ ಯವರು ಬಸವ ಜಯಂತಿಯ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಗ್ಗೆ ಸಂತಸವನ್ನು ಹಂಚಿಕೊಂಡರು. ಆಚರಣೆ ಸಮಿತಿಯ ಮಹಿಳಾ ವಿಭಾಗದ ಅಧ್ಯಕ್ಷರಾದ ಶ್ರೀಮತಿ ಡಿ.ಜಿ. ಮಠದ್ ರವರು ಇಂತಹ ಸಮಾರಂಭಗಳು ಮೇಲಿಂದ ಮೇಲೆ ಆಗುತ್ತಲಿದ್ದರೆ ಮೊಬೈಲ್ ಗೆ ವಿಶ್ರಾಂತಿ ಸಿಗುತ್ತದೆ ಎಂದರು.

ವೇದಿಕೆಯ ಮೇಲೆ ಆಚರಣೆ ಸಮಿತಿಯ ಗೌರವಾಧ್ಯಕ್ಷರಾದ ಎಫ್. ಷಣ್ಮುಖಪ್ಪ, ಕಾರ್ಯಾಧ್ಯಕ್ಷರಾದ ಅರಳಿ ಶೇಖರಪ್ಪ, ದೇವಸ್ಥಾನ ಸಮಿತಿಯ ಹೊಸಳ್ಳಿ ಶಂಕರಗೌಡ ಹಾಗೂ ಬಸವಪರ ಸಂಘಟನೆಗಳ ಕೆ. ಬಸವರಾಜ, ದಿಲೀಪಕುಮಾರ ವಂದಾಲ ಚನ್ನಬಸಮ್ಮ ಕಂಪ್ಲಿ,, ಸಿ. ಮಹಾಲಕ್ಷ್ಮಿ ಉಪಸ್ಥಿತರಿದ್ದರು.

ಪ್ರವಚನದಲ್ಲಿ ಸೇವೆಗೈದವರನ್ನು ಸಮಿತಿ ಸನ್ಮಾನಿಸಿತು. ಎಫ್. ರಾಘವೇಂದ್ರ, ಶ್ರೀನಿವಾಸ, ಡಾ. ನಾರಿನಾಳ ಶ್ರೀಗಳನ್ನು ಸಮಿತಿ ಸದಸ್ಯರನ್ನು ಸನ್ಮಾನಿಸಿದರು. ಈ ಸಮಾರಂಭವು ವಿರೇಶ ಅಸರಡ್ಡಿ ಸ್ವಾಗತಗೈದು, ಎ.ಕೆ. ಮಹೇಶಕುಮಾರ ನಿರೂಪಿಸಿ ವಚನಮಂಗಲದೊಂದಿಗೆ ಮುಕ್ತಾಯವಾಯಿತು.

ಆನೇಗುಂದಿ ರಸ್ತೆಯ ಬಸವೇಶ್ವರ ಸರ್ಕಲ್, ಶ್ರೀಕೃಷ್ಣದೇವರಾಯ ವೃತ್ತದ ಹತ್ತಿರವಿರುವ ಅಶ್ವಾರೂಢ ಬಸವಣ್ಣ, ಮಲ್ಲಿಕಾರ್ಜುನ ಮಠ ಹಾಗೂ ವಿರುಪಾಪುರದಲ್ಲಿಯ ಶ್ರೀಗುರುಬಸವ ಮಂಟಪ ಮತ್ತು ಕೆ.ಎಸ್.ಆರ್.ಟಿ.ಸಿ ಯವರಿಂದ ಬಸವಜಯಂತಿ ನಡೆದುದು ವಿಶೇಷವಾಗಿತ್ತು.

# ಉತ್ತರಾಧಿಕಾರಿಯಾಗಿ ಜುನೈದಿ ಸೂಫಿ ಸಂಪ್ರದಾಯದ ಪ್ರಚಾರ




## ಧರ್ಮ-ಮರ್ಮ

● ಡಾ.ಎಂ.ಮಹ್ಮದ್ ಬಾಷ ಗೂಳ್ಯಂ
ಪ್ರಧಾನ ಸಂಪಾದಕ, ಬೆಂಗಳೂರು

**ಕಳೆದ ಸಂಚಿಕೆಯಿಂದ...**

**ಸಯ್ಯದ್ ಕಬೀರರ ಎರಡನೇ ಮಗ ಖಿವಾಮುದ್ದೀನ್ ಮಹಮದ್**

ಗಜನವಿ ಅಲ್ ಹುಸೈನಿ ತಂದೆಯ ಉತ್ತರಾಧಿಕಾರಿಯಾಗಿ ದೆಹಲಿಯಲ್ಲಿ ಜುನೈದಿ ಸೂಫಿ ಸಂಪ್ರದಾಯದ ಪ್ರಚಾರ ಮಾಡಿದ್ದರು. ಇವರು ಆಗಿನ ಕಾಲದ ಪ್ರಭಾವಿ ಇಮಾಮ್ (ಧಾರ್ಮಿಕ ನಾಯಕ) ಆಗಿದ್ದು, ಆಲಿಂ (ಧರ್ಮ ಶಾಸ್ತ್ರಜ್ಞ), ಆರೀಫ್ (ಪರಮ ಜ್ಞಾನಿ) ಆಗಿದ್ದರು. ಈ ಕಾರಣಕ್ಕೆ ಇವರನ್ನು ಖುತುಬ್-ಏ-ಸಾದತ್-ಏ-ವಖ್ತ್ ಎಂಬ ಬಿರುದಿಗೂ ಪಾತ್ರರಾಗಿದ್ದರು. ದಿಲ್ಲಿ ಸುಲ್ತಾನ್ ಅಲ್ತಮಶ್‌ನ ಮಗಳು ಬೀಬೀ ಫಾತೇಹಾ ಅವರನ್ನು ವಿವಾಹವಾಗಿದ್ದು ಬಳಿಕ ಅಲ್ಲೇ ನಿಧನರಾಗಿದ್ದು ಇತಿಹಾಸ. ಅದೇರೀತಿ ಸಯ್ಯದ್ ರುಕ್ನುದ್ದೀನ್ ಅಹ್ಮದ್ ಹುಸೈನಿ, ಇಮಾಮ್ ಶಮ್‌ಶುದ್ದೀನ್ ಖತೀಬ್, ಅಲಾವುದ್ದೀನ್ ಜವೇರಿ ಹುಸೈನಿ ಅವರ ಕಟ್ಟಾ ಅನುಯಾಯಿಗಳಾಗಿದ್ದು, ಅವರಿಂದ ಖಿಲಾಫತ್ ಪಡೆದಿದ್ದರು. ತುಘಲಕನ ಕಾಲದಲ್ಲಿ ರಾಜಧಾನಿ ಸ್ಥಳಾಂತರದಿಂದ ಇವರು ಹೊಸ ರಾಜಧಾನಿಯಾಗಿದ್ದ ಖುಲ್ದಾಬಾದಿಗೆ ಬಂದು ನೆಲೆಸಿದ್ದರು. ಖುಂದಮೀರ್ ಸಯ್ಯದ್ ಅಲಾವುದ್ದೀನ್ ಅಲೀ ಹುಸೈನಿ ಜವೇರಿ ಅವರು ಸಯ್ಯದ್ ಖಿವಾಮುದ್ದೀನ್ ಅವರ ಪ್ರತಿಷ್ಠಿತ ಖಲೀಫರಾಗಿದ್ದು, ಖುಲ್ದಾಬಾದಿನಲ್ಲಿ ನೆಲೆಸಿದ್ದರು. ಇವರು ಆ ಕಾಲದ ಶ್ರೇಷ್ಠ ಜ್ಞಾನಿ 'ಮಾಲಿಕುಸ್-ಸಾದಾತ್' ಖ್ಯಾತಿಯ ಶರ್ಫುದ್ದೀನ್ ಬನಾಹಿನಾ, ಶಂಷುದ್ದೀನ್ ಗಜೂನಿ, ಶೇಖ್ ದಿಯಾವುದ್ದೀನ್ ಝುಂಝುನಿ, ಹಾಜಿ ರೂಮಿ, ಸಯೀದ್ ಫರೀಶ್ವಾ, ಬದ್ರುದ್ದೀನ್ ಘಜನವಿ ಮುಂತಾದವರಿಂದ ಸೂಫಿ ಜ್ಞಾನವನ್ನು ಪಡೆದಿದ್ದರು.



ತಮ್ಮ ಸಮಕಾಲೀನ ಚಿಶ್ತಿಯಾ ಸೂಫಿ ಪರಂಪರೆಯ ಸೂಫಿ ಶೇಖ್ ನಿಜಾಮುದ್ದೀನ್ ಔಲಿಯಾರ ಬಗ್ಗೆ ಅತೀವ ಪ್ರೀತಿ, ಗೌರವ ಹೊಂದಿದ್ದರು. ಒಮ್ಮೆ ಸಮಾ (ಸೂಫಿ ಸಂಗೀತ ಗೋಷ್ಠಿ) ಬಗ್ಗೆ ಸೂಫಿಗಳ, ಪಾರಂಪರಿಕ ಧರ್ಮ ಪಂಡಿತರ (ಉಲೇಮಾ) ಮಧ್ಯೆ ವಿವಾದ ಏರ್ಪಟ್ಟಿತ್ತು. ಅದೇ ವೇಳೆ ದೆಹಲಿಯಲ್ಲಿ ಹಲವು ಧಾರ್ಮಿಕ ಸಾಕ್ಷ್ಯಾಧಾರಗಳ ವಾದಗಳನ್ನು ಸಂಗ್ರಹಿಸಿ, ವಿವಾದದ ಬಗ್ಗೆ ಗಿಯಾಸುದ್ದೀನ್ ತುಘಲಕ್‌ನ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ವ್ಯಾಜ್ಯಕ್ಕೆ ಪ್ರತಿವಾದಿಯಾಗಿದ್ದ ಶೇಖ್ ನಿಜಾಮುದ್ದೀನ್ ಔಲಿಯಾ ಅವರಿಗೆ ನೆರವಾಗುವ ಕರಡನ್ನು ಸಿದ್ದಪಡಿಸಿದ್ದರು. ಇದಕ್ಕಾಗಿ ಶೇಖ್ ನಿಜಾಮುದ್ದೀನ್ ಔಲಿಯಾ ತುಂಬಾ ಖುಷಿಗೊಂಡಿದ್ದರು. ಆದರೆ ತಮ್ಮ ಗುರುವಿನ ನಿಧನದ ಬಳಿಕ ಸಯ್ಯದ್ ಜವೇರಿ ಅವರು ದಕ್ಷಿಣಕ್ಕೆ ತೆರಳುವ ನಿರ್ಧಾರ ಮಾಡಿ ಖುಲ್ದಾಬಾದ್‌ಗೆ ಬಂದು ನೆಲೆಸಿ, ಅಲ್ಲಿಯೇ ನಿಧನರಾಗಿದ್ದರು. ಖುಲ್ದಾಬಾದ್‌ನಲ್ಲಿ ವಾಸವಾಗಿದ್ದಾಗ ಇವರು, ಹಿದಾಯತ್ (ಸನ್ಮಾರ್ಗ ದರ್ಶನ), ಬಜ್‌ದವಿ, ಮಫ್ತಾ (ಆಧ್ಯಾತ್ಮಿಕ) ಹಾಗೂ ಕಶ್‌ಫ (ಸೂಫಿ ಗುಹ್ಯಶಾಸ್ತ್ರ) ಕುರಿತು ಪ್ರಚಂಡ ವ್ಯಾಖ್ಯಾನಗಳನ್ನು ನೀಡಿದ್ದರು. ಈ ಕಾರಣಕ್ಕೆ ದೌಲತಬಾದ್, ದೆಹಲಿಗಳಲ್ಲಿಯೂ ಅನೇಕ ಅನುಯಾಯಿಗಳನ್ನು ಹೊಂದಿದ್ದರು.

ಕ್ರಮೇಣ ಈ ಎಲ್ಲ ಅನುಯಾಯಿಗಳಲ್ಲಿ ದಖನ್ನಿನತ್ತ ಮುಖ ಮಾಡಿದರು. ಪರಿಣಾಮ ಸಂತ ಪರಂಪರೆಯು ದೌಲತಾಬಾದ್, ಗುಲಬರ್ಗಾ, ಬಿಜಾಪುರ ಮುಂತಾದ ಕಡೆಗಳಲ್ಲೂ ಸೂಫಿ ಪರಂಪರೆ ಹರಡಲು ಕಾರಣ. ಇವರ ಪೈಕಿ ದೌಲತಾಬಾದ್‌ನಲ್ಲಿ ಹೆಸರುಮಾಡಿದ್ದ ಶೇಖ್ ಶಂಷುದ್ದೀನ್ ಲಮಾಘಾನಿ, ಶೇಖ್ ಅಬ್ದುಲ್ಲ ಸ್ಮರಣೀಯರು. ಸಯ್ಯದ್ ಜವೇರಿಯವರ ಅನುಯಾಯಿ ಶೇಖ್ ಮಿನಾಹಜುದ್ದೀನ್ ತಮೀಮ್ ಮಹಾನ್ ಪಂಡಿತರು, ಇಸ್ಲಾಮಿ ನ್ಯಾಯಶಾಸ್ತ್ರ ತಜ್ಞರು. 'ಅತ್‌ವಾರುಲ್ ಅಬ್ರಾರ್' ಖ್ಯಾತ ಕೃತಿಯ ಲೇಖಕ ಐನುದ್ದೀನ್ ಗಂಜುಲ್ ಇಲ್ಮ್ ಇವರ ಶಿಷ್ಯರಾಗಿದ್ದು ಗಮನಹಾರ್ಹ. ಶೇಖ್ ಮಿನಾಹಜುದ್ದೀನ್ ತಮೀಮ್ ಮಕ್ಕಾ ಯಾತ್ರೆಯ ಮೂರು ವರ್ಷದ ಬಳಿಕ ಪುನಃ ದೌಲತಬಾದ್‌ಗೆ ಮರಳಿದ್ದರು. ಆ ವೇಳೆ ಬಹಮನಿ ಸಾಮ್ರಾಜ್ಯದ ಸ್ಥಾಪನೆಯಾಗಿ ರಾಜಧಾನಿಯು ಇಂದಿನ ಗುಲಬರ್ಗಾಕ್ಕೆ ಸ್ಥಳಾಂತರವಾಗಿ, ಹಸನಾಬಾದ್ ಎಂಬ ಹೆಸರಿಗೆ ಕಾರಣವಾಗಿತ್ತು. ಇದುವರೆಗೆ ಕೇವಲ ದೌಲತಾಬಾದ್‌ನಲ್ಲಿ ನೆಲೆಸಿದ್ದ ಸೂಫಿ ಸಮೂಹ ದಖನ್ನಿನ ಹಲವು ಪ್ರದೇಶಗಳಲ್ಲಿ ಪಸರಿಸತೊಡಗಿತ್ತು. ಶೇಖ್ ಮಿನಾಹಜುದ್ದೀನ್ ತಮೀಮ್ ಅನ್ಸಾರಿಯವರು ಗುಲಬರ್ಗಾಕ್ಕೆ ಬಂದು ಹದಿನಾಲ್ಕು ವರ್ಷ ನೆಲೆಸಿ, ತಮ್ಮ 80ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು.

ಶೇಖ್ ಹುಸೇನ್ ಬಲಹವಿ ಅವರು ಸಯ್ಯದ ಜವೇರಿ ಅವರ ದೌಲತಾಬಾದ್‌ನಲ್ಲಿ ಒಡನಾಡಿಯೂ ಹೌದು. ಬಳಿಕ ಗುಲಬರ್ಗಾಕ್ಕೆ ಬಂದು ನೆಲೆಸಿ, ಇಲ್ಲಿಯೇ ನಿಧನರಾದರು. ಗುಲಬರ್ಗಾದ ಸಯ್ಯದ್ ರುಕ್ನುದ್ದೀನ್, ಬಿಜಾಪುರದ ಐನುದ್ದೀನ್ ಗಂಜಲ್ ಇಲ್ಮ್ ಸಯ್ಯದ್ ಜವೇರಿಯ ಪ್ರಮುಖ ಅನುಯಾಯಿಗಳಾಗಿದ್ದರು.

ಮುಂದುವರೆಯುವುದು...

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)